A.—Sri H. K. VEERANNA GOWDH (Minister for Public Works).—

(*a*) No. Investigation surveys are in progress.

(*b*) Does not arise.

(*c*) Do

(*d*) Do

(*e*) 5.50 lakhs acres.

(*f*) The exact extent can be known after the surveys are completed.

Member's Representation.

Sri C. J. MUCKANNAPPA.—Sir, I sent a short notice question regarding medical probationers.

Mr. SPEAKER.—Such questions should not be raised on the floor of the House. If the Hon'ble Member feels that the short notice question is not reached, he may consult the office and then talk to me in my chambers.

Sri C. J. MUCKANNAPPA.—I have received a communication and that is why I am making a representation.

Mr. SPEAKER.—No representation. You Please come to my chambers and we will discuss about it.

BUDGET FOR 1958-59—DEMANDS FOR GRANTS

Demand No. 40—Community Development, etc.

63 B. Community Development Projects and National Extension Service and Local Development Works.

Mr. SPEAKER.—Motion moved:

"That a sum not exceeding Rs. 2,08,97,000 be granted to the Government to defray the charges which will come in course of payment during the year ending 31st day of March 1959, in respect of 'Community Development Projects, National Extension Service and Local Development Works'."

*ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪೂರ).—ಸ್ವಾಮಿ, ಸಮಾಜ ವಿಕಾಸ ಕೇಂದ್ರದ ವಿಷಯದಲ್ಲಿ ಮಾತನಾಡಬೇಕಾದರೆ ಅತ್ಯಂತ ಜೇಸರದಿಂದ ಕೆಲವು ಮಾತುಗಳನ್ನಾಡಬೇಕಾಗತ್ತದೆ. ಸಮಾಜ ವಿಕಾಸವಾಗಬೇಕು, ಸಮಾಜ ಮೇಲ್ಮಟ್ಟಕ್ಕೆ ಬರಬೇಕು ಎಂಬ ವಿಷಯದಲ್ಲಿ ಯಾವ ತರ್ಕವೂ ಇರುವುದಿಲ್ಲ. ವಿರೋಧ ಪಕ್ಷದವರು ಸಮಾಜವಿಕಾಸವಾಗಬಾರದು, ಸಮಾಜ ಮೇಲ್ಮಟ್ಟಕ್ಕೆ ಬರಬಾರದು, ಈ ಬಗ್ಗೆ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡಬಾರದು ಎಂಬ ತರ್ಕವನ್ನು ಮಾಡುವುದಿಲ್ಲ. ಸರ್ಕಾರದವರು ಈ ವಿಷಯದಲ್ಲಿ ಸಂಪೂರ್ಣ ಅನುಭವ ಪಡೆಯಬೇಕು. ಸರ್ಕಾರದ ರೀತಿ ನೀತಿಗಳೇನೆಂಬುದನ್ನು ನೋಡಿದ್ದೇ ಆದರೆ, ಅನೇಕ ಧುರೀಣರು ಹಕ್ಕಿಗಳು ಆಕಾಶದ ಕಡೆಗೆ ಹಾರಿದ ಹಾಗೆ ನೆಲದಿಂದ ಎಷ್ಟೋ ಮೈಲಿ ಎತ್ತರದಲ್ಲಿ ಹಾರಾಡುತ್ತಿದ್ದಾರೆಂದು ನನಗೆ ಕಾಣುತ್ತದೆ. ಇದಕ್ಕೆ ನಮ್ಮಲ್ಲಿ ಹಿರಿಯರು ಒಂದು ಗಾದೆಯನ್ನು ಹೇಳುತ್ತಾರೆ. ಅದು ನನಗೆ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ "ನೀರು ಕುಡಿಯದಂಥವನಿಗೆ ಕಡುಬು ತೂರಿಸಿದ ಹಾಗೆ" ಎಂದು. ಹೀಗೆ ಮಾಡಿದರೆ ಏನಾಗುತ್ತದೆ ಅಂದರೆ, ಅವನಿಗೆ ಶ್ವಾಸವೇ ಮುಚ್ಚಿಕೊಂಡು ಸಾಯುವ ಗತಿ ಬರುತ್ತದೆ. ಮುಖ್ಯವಾಗಿ ಹಿಂದುಳಿದ ಜನ ಪ್ರಗತಿಯಾಗಬೇಕು; ಬಡತನ ನಿವಾರಣೆಯಾಗಬೇಕು, ಸಮಾಜದಲ್ಲಿ ಕ್ರಾಂತಿಯಾಗಬೇಕು. ಈ ರೀತಿಯಲ್ಲಿ ಬಹಳ ದೊಡ್ಡ ದೊಡ್ಡ ಶಬ್ದ, ದೊಡ್ಡ ದೊಡ್ಡ ಭಾಷಣಗಳನ್ನು ಕೇಳುತ್ತಿದ್ದೇವೆ. ಅನೇಕ ಜನ ಧುರೀಣರು ಹೊರಗಿನಿಂದ ಅಂದರೆ, ಅಮೇರಿಕಾ, ಇಂಗ್ಲೆಂಡ್, ಮುಂತಾದ ಕಡೆಗಳಿಂದ ಬಂದು ನಮ್ಮ ಸರ್ಕಾರಕ್ಕೆ ದೊಡ್ಡ ದೊಡ್ಡ ಸರ್ಟಿಫಿಕೇಟನ್ನು ಕೊಡುತ್ತಿದ್ದಾರೆ. ಹಿಂದೊಸ್ತಾನದಲ್ಲಿ ಸಮಾಜ ವಿಕಾಸ ಕೇಂದ್ರ ಬಹಳ ಕ್ರಾಂತಿಕಾರಕವಾದುದು. ಇಡೀ ಭೂಲೋಕದಲ್ಲಿ ಮಾದರಿಯಾದುದು. ಇದು ನನಗೆ ಬಹಳ ಸಂತೋಷದ ಸಂಗತಿ. ನಮ್ಮ ದೇಶ ಇತರ ದೇಶಗಳಿಗೆ ಮಾದರಿಯಾದರೆ; ನಮ್ಮ ದೇಶ ಇತರರಿಗಿಂತ ಕೆಲವೇ ವರ್ಷಗಳಲ್ಲಿ ಸಂಪೂರ್ಣ ಪ್ರಗತಿಯನ್ನು ಹೊಂದಿದರೆ ಅದು ಯಾರಿಗೂ ಬೇಡವಾದ ಸಂಗತಿಯಲ್ಲ. ನಾನು ಹಳ್ಳಿಯವ. ನಾನು ಹಳ್ಳಿಯ ಅನುಭವವನ್ನು ಪಡೆದಿರುವವನು. ನಮ್ಮವರೆಲ್ಲಾ ಹಳ್ಳಿಯವರು. ಸ್ವಾತಂತ್ರ್ಯ ಬಂದು 11 ವರ್ಷಗಳಾದನಂತರ, ನಾವು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಇವತ್ತು ಸಮಾಜ ವಿಕಾಸವೆಂದರೆ ಏನು ಎಂಬುದು ಗೊತ್ತಿಲ್ಲದೆ ಇರುವವರೇ ಶೇಕಡಾ 99 ಭಾಗ ಇದ್ದಾರೆ. ನಾನು ಅನೇಕ ಸಾರಿ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಮತ್ತು ನ್ಯಾಷನಲ್ ಎಕ್ಸ್‌ಟೆಷನ್ ಸರ್ವಿಸ್ ಕೆಲಸ ಕಾರ್ಯಗಳನ್ನು ನೋಡಿದ್ದೇನೆ. ಇದರಲ್ಲಿ ಅನುಭವ ಪಡೆದಂಥವರು ದೇಶಾದ್ಯಂತ ತಿರುಗಿ ಈ ವಿಷಯದಮೇಲೆ ಒಂದು ವರದಿಯನ್ನು ಬರೆದಿದ್ದಾರೆ. ಸರ್ಕಾರದವರು ಅದನ್ನು ಒಪ್ಪುತ್ತಾರೆ. ಸಮಾಜ ವಿಕಾಸವೆಂದರೇನು ಎಂಬುದೇ ಅನೇಕರಿಗೆ ಗೊತ್ತಿಲ್ಲ. ಇಲ್ಲಿ ಸರ್ಕಾರದವರು ಪ್ರಥಮದಲ್ಲಿ ಹೇಳುವಂತೆ ಕರ್ನ್ಟ್ರಕ್ಟಿವ್ ಅಪ್ರೋಚ್‌ನಲ್ಲಿ ಹೇಗೆ ಅದರ ಗುರಿಯನ್ನು ಮುಟ್ಟಬೇಕೋ ಆ ರೀತಿ ಗುರಿಯನ್ನು ಮುಟ್ಟಬೇಕೆಂದು ಹೇಳುವಾಗ "Supply of drinking water, improvement of agriculture and animal husbandry, co-operative activities, rural industries and health followed by all other activities" ಹೀಗೆ ಬಂದು ಇನ್ನುಳಿದುದೆಲ್ಲಾ ಕಡೆಗೆ ಬರಬೇಕು ಎಂದು ನನಗೆ ಕಾಣುತ್ತದೆ. ಸರ್ಕಾರದವರು ಇದುವರೆಗೆ ಹೇಳಿದ ವಿಷಯ ಯಾವ ರೀತಿಯಲ್ಲೂ ಬದಲಾವಣೆಯಾದ ಹಾಗೆ ಕಂಡು ಬರುವುದಿಲ್ಲ. ಅವರು ಹೇಳಿದ ವಿಷಯಗಳಲ್ಲಿ ಏನೂ ಒಳ್ಳೆಯದಾಗಲಲ್ಲ. ನಾನು ಅಧಿವೇಶನಕ್ಕೆ ಬರುವುದಕ್ಕೆ ಮುಂಚಿತವಾಗಿ ಕೆಲವು ಹಳ್ಳಿಗಳಿಗೆ ಹೋದಾಗ, ಕೆಲವು ಗ್ರಾಮ ಸೇವಕರು ಆ ಹಳ್ಳಿಗಳಲ್ಲಿ ತಿರುಗಾಡು

ತಿದ್ದರು. ನಾನು ಅವರನ್ನು ಸ್ವಲ್ಪದೂರದಲ್ಲಿ ನಿಂತು ನೋಡುತ್ತಿದ್ದೆನು. ಅವರು ಬೀಜವನ್ನು ಕೈಯಲ್ಲಿ ಹಿಡಿದುಕೊಂಡು ನಮ್ಮ ಹಳ್ಳಿಗಳಲ್ಲಿ ತಿರುಗಾಡುತ್ತಿದ್ದರೆ, ಅಲ್ಲಿನ ಮನೆಗಳ ಹೆಂಗಸರು ಮತ್ತು ಮಕ್ಕಳು ಮನೆ ಬಾಗಿಲನ್ನು ಹಾಕಿಕೊಳ್ಳುತ್ತಿದ್ದರು. ಗ್ರಾಮ ಸೇವಕರು ಅನೇಕ ವಿಧವಾದ ಬೀಜಗಳನ್ನು ಹಳ್ಳಿಗಳಲ್ಲಿ ಮಾರಾಟಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದರು. ಜನರಿಗೆ ಅಷ್ಟರ ಮಟ್ಟಿಗೆ ಈ ವಿಷಯದಲ್ಲಿ ತಿಳಿವಳಿಕೆ ಇಲ್ಲವೋ ಏನೋ ಎಂದು ನನಗೆ ಗೊತ್ತಾಗುತ್ತದೆ. ಗ್ರಾಮ ಸೇವಕರು ಬತ್ತನೆ ಬೀಜಗಳ ವಿಷಯದಲ್ಲಿ ಹೊಸ ವಿಧಾನವನ್ನು ತಿಳಿಸಬೇಕೆಂದು ಹೋದರೆ ಮನೆಯ ಬಾಗಿಲನ್ನು ಹಾಕಿಕೊಳ್ಳುತ್ತಾರೆ. ಇದರಿಂದ ಅನೇಕ ಗ್ರಾಮಸೇವಕರು ನಮಗೆ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಬ್ಲಾಕ್ ಡೆವಲಪ್‌ಮೆಂಟ್ ವಿಚಾರದಲ್ಲಿ ಏನಾದರೂ ಬಂದು ಹೇಳಿದರೆ ನೀವು ನಮ್ಮನ್ನೆ ಕಳಿತುಕೊಳ್ಳಿ ಎಂದು ಹೇಳುತ್ತಾರೆ. ಇದಕ್ಕೆ ನಮ್ಮಲ್ಲಿ ಒಂದು ಗಾದೆ ಇದೆ. "ಕಲ್ಲಪ್ಪಾ, ಗುಂಡಪ್ಪಾ ಅಂದರೆ ಮೊಣಕಪ್ಪಾ ಎಂದು" ಯಾರು ಪ್ರಾಮುಖ್ಯವಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡಬೇಕೋ, ಯಾರುಯಾರು ಈ ಕ್ಷೇತ್ರದಲ್ಲಿ ನ್ಯಾಯವಾಗಿ ಕೆಲಸ ಮಾಡುವುದಕ್ಕೆ ಹುರಿದುಂಬಿಸಬೇಕೋ ಅವರನ್ನು ನಮ್ಮ ಕ್ಷೇತ್ರದಲ್ಲಿ ಹಾಕಬೇಕು. ನನ್ನ ಜಿಲ್ಲೆಯ ವಿಷಯವಾಗಿ ಹೇಳುವುದಾದರೆ, ಇಲ್ಲಿ ಕೆಲಸ ಮಾಡುವವರು ನ್ಯಾಯವಾಗಿ ಕೆಲಸ ಮಾಡಲಕ್ಕೆ ಅಸಾಧ್ಯವಾಗಿದೆ. ಸರ್ಕಾರಕ್ಕೆ ಈ ವಿಷಯವನ್ನು ನಾನು ಅನೇಕ ಬಾರಿ ತಿಳಿಸುತ್ತಾ ಬಂದಿದ್ದೇನೆ. ಸಮಾಜವಿಕಾಸ ಕೇಂದ್ರಗಳಲ್ಲಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನಾ ಸಂಬಂಧದಲ್ಲಿ ಕೆಲಸ ಕಾರ್ಯಗಳು ಸಫಲವಾಗಬೇಕಾದರೆ ಗ್ರಾಮ ಸೇವಕರಿಂದ ಆಗಬೇಕು. ತಿಳಿವಳಿಕೆ ಇಲ್ಲದೆ ಇರುವ ಗ್ರಾಮ ಸೇವಕರನ್ನು ಈ ಬ್ಲಾಕುಗಳಲ್ಲಿ ಹಾಕಿ ಅವರನ್ನು ದೂರುತ್ತಿದ್ದಾರೆ. ನೀನು ಏಕೆ ಕೆಲಸ ಮಾಡುವುದಿಲ್ಲ ಎಂದು ಕೇಳಿದರೆ, ನಾವು ಈ ಆಫೀಸನ್ನು ಜಾಗ್ರತೆ ಬಿಟ್ಟು ಹೊರಗೆ ಹೋಗುತ್ತೇವೆ ಎಂದು ಹೇಳುವ ಗ್ರಾಮಸೇವಕರು ಅನೇಕ ಜನರಿದ್ದಾರೆ. ಬರೀ ಪುಸ್ತಕದೊಳಗೇ ಈ ಸ್ಕೀಮುಗಳು ವರದಿಗಳೇನೋ ಬೇಕಾದಷ್ಟು ಬರುತ್ತವೆ. ಆದರೆ ಬೆಂಗಳೂರಿನಲ್ಲಿರುವ ಅಧಿಕಾರಿಗಳು, ಮಂತ್ರಿಗಳು ಈ ವಿಷಯದಲ್ಲಿ ಕಣ್ಣು ತೆರೆಯಬೇಕು ಎಂದು ಹೇಳುತ್ತೇನೆ. ಕೇವಲ ಅನಾವಶ್ಯಕವಾಗಿ ನಮ್ಮ ಹಣವನ್ನು ಖರ್ಚುಮಾಡಬೇಕೆಂದು ನಾನು ಹೇಳುವುದಿಲ್ಲ. ಖರ್ಚು ಮಾಡಿದ ಹಣದಿಂದ ಪ್ರಯೋಜನವಾಗಬೇಕು. 800 ಜನರಿರುವ ಒಂದು ಗ್ರಾಮಕ್ಕೆ ಒಬ್ಬ ಗ್ರಾಮ ಸೇವಕರು ಇರಬೇಕು. ಗ್ರಾಮ ಸೇವಕರಿಗೆ ಅನೇಕ ನಿರ್ಬಂಧಗಳಿವೆ. ಅವರಿಗೆ ಗ್ರಾಮಸ್ಥರ ಸಹಕಾರ ಸಿಕ್ಕುವುದಿಲ್ಲ, ಆಫೀಸರುಗಳ ಸಹಕಾರ ಸಿಕ್ಕುವುದಿಲ್ಲ. ಗ್ರಾಮಸೇವಕರಿಗೆ ಬೇಕಾದ ಸಲಕರಣೆಗಳನ್ನು ಸಿದ್ಧಪಡಿಸುವುದಕ್ಕೆ ಇವತ್ತಿಗೂ ಬ್ಲಾಕಿನಲ್ಲಿ ಅಸಾಧ್ಯವಾಗಿದೆ. ಇಂಡಿಯಾ ಸರ್ಕಾರದವರು ಒಂದು ಸ್ಕೀಮನ್ನು ಮಾಡಿದ್ದರು. ಆ ಯೋಜನೆಯ ಪ್ರಕಾರ ನಮ್ಮ ಸರ್ಕಾರದವರು ಹಣವನ್ನು ಖರ್ಚು ಮಾಡಿರುವುದಾದರೆ, ಅದರಿಂದ ಎಷ್ಟು ಪ್ರಯೋಜನ ಸಿಕ್ಕಿದೆ ಎಂಬುದನ್ನು ನೋಡಬೇಕು. ಜನತೆಗೆ ಎರಡು ಆಣೆಯಷ್ಟು ಪ್ರಯೋಜನವಾಗಿಲ್ಲ. ಇದನ್ನು ಅನೇಕ ಸಾರಿ ಮಂತ್ರಿಗಳವರಿಗೆ ಬಹಳ ದುಃಖದಿಂದ ಹೇಳಿದ್ದೇನೆ. ಹಣ ಮಾತ್ರ ನೀರು ಖರ್ಚಾದಂತೆ ವ್ಯರ್ಥವಾಗಿ ಹಾಳಾಗುತ್ತಿದೆ.

2-30 P.M.

ಯುದ್ಧ ಆದಮೇಲೆ ಯುಗೋಸ್ಲೇವಿಯಾ ದೇಶದಲ್ಲಿ people's participation ಅಂದರೆ, ಶೇಕಡಾ 25ರಷ್ಟು ಜನತೆಯ ಸಹಕಾರವಿಲ್ಲದೆ ಕೆಲಸವಾಗುತ್ತಲ್ಲ. ನಮ್ಮ ದೇಶದಲ್ಲಿ ಜನರು ಸಹಾಯ ಸಹಕಾರ ಕೊಡಬೇಕು ಎಂಬುದು ಸಹ ಜನರಿಗೆ ಗೊತ್ತಿಲ್ಲ. ಯುಗೋಸ್ಲೇವಿಯಾ ದೇಶದಲ್ಲಿ ಜನತೆಯು ಸಹಾಯ ಸಹಕಾರದಿಂದ ಬೇಕಾದಷ್ಟು ಆಣೆಕಟ್ಟುಗಳನ್ನು ಕಟ್ಟಿದ್ದಾರೆ. ಆದರೆ ನಮ್ಮ ದೇಶದಲ್ಲಿ ಅದೇ ರೀತಿಯಾಗಿ ಏತಕ್ಕೆ ಆಗಲಲ್ಲ! Enthuse the people ಎನ್ನತಕ್ಕ ಶಕ್ತಿ ನಮ್ಮ ಸರಕಾರದಲ್ಲಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಚುನಾವಣೆಯಲ್ಲಿ ನಾವು ಸಹ ಓಟು ತೆಗೆದುಕೊಂಡು ಚುನಾಯಿತರಾಗಿ ಜನರ ಪ್ರತಿನಿಧಿಯೆಂದು ಈ ಸಭೆಯ ಸದಸ್ಯರಾಗಿ ಬಂದಿದ್ದೇವೆ. ನಾವು ಎದುರು ಪಕ್ಷದಲ್ಲಿದ್ದೇವೆ. ಎದುರು ಪಕ್ಷದವರು ಏನು ಹೇಳುತ್ತಾರೆ ಎಂದು ಆಡಳಿತ ಪಕ್ಷದವರು ಒಂದು ವೇಳೆ ಅಂದರೆ ನಾವು ಅವರಿಗೆ ಹೇಳುವುದೇನೆಂದರೆ ಜನತೆಗೆ ಆಡಳಿತ ಪಕ್ಷದವರು ರಚಿಸಿದ ಸರಕಾರದಲ್ಲಿ ನಂಬಿಕೆ, ವಿಶ್ವಾಸ ಇಲ್ಲ ಎಂದು ನಾನು ಹೇಳುತ್ತೇನೆ. ಜನತೆಯ ವಿಶ್ವಾಸ, ನಂಬಿಕೆ ಸರಕಾರದಲ್ಲಿ ಎಷ್ಟು ಇದೆ? ಯಾವ ಕ್ಷೇತ್ರದಲ್ಲಿಯೂ ಸರಕಾರಕ್ಕೆ ಜನತೆಯ ಸಹಕಾರ ಸಹಾಯ ದೊರೆಯುತ್ತಿಲ್ಲ. ಜನತೆಯ ಸಹಾಯ ಸಹಕಾರವಿಲ್ಲದೆ ಕೆಲಸ ಮಾಡುವುದು ಸಾಧ್ಯವಿಲ್ಲ. ಬಡವರು ಹೆಚ್ಚಾಗಿರುವ ಊರುಗಳಲ್ಲಿ, ಜನರಿಂದ ಹಣ ದೊರೆಯುವುದಿಲ್ಲ, ಜನರು ಮುಂದೆ ಬರುವುದಿಲ್ಲ ಎಂದು ರಾಷ್ಟ್ರೀಯ ವಿಸ್ತರಣೆ ಯೋಜನೆ ಮುಂತಾದ ಯೋಜನೆಗಳು ಅಂಥ ಪ್ರದೇಶದಲ್ಲಿ ಬರುವುದಿಲ್ಲ. ಅಂಥ ಊರುಗಳಿಗೆ ಸೊನ್ನೆ ಎಂದು ಹೇಳಲಾಗುತ್ತಿದೆ. ಅಂಥ ಪ್ರದೇಶದಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಆದರೆ ಅಲ್ಲಿಯ ಹಿಂದುಳಿದ ಜನತೆಯ ಮಟ್ಟ ಎಂಥಾದ್ದಿದೆ ಎಂಬುದನ್ನು ಆಲೋಚನೆ ಮಾಡಬೇಕು. ಯಾರಿಗೆ ಇಂಥ ಯೋಜನೆಗಳ ಅವಶ್ಯಕತೆ ಇದೆಯೋ ಅಂಥ ಪ್ರದೇಶದಲ್ಲಿ ಪ್ರಾರಂಭಿಸುವುದಕ್ಕೆ ಸರಕಾರದ ನೀತಿ ಸ್ವಲ್ಪ elastic ಆಗಿರಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಡೆಮೊಕ್ರಾಟಿಕ್ ಗವರ್ನಮೆಂಟಿನಲ್ಲಿ ಅಧಿಕಾರವು decentralise ಅಂದರೆ ವಿಕೇಂದ್ರೀಕರಣವಾಗಬೇಕು ಎಂದು ಇದೆ. ಆದರೆ ನಮ್ಮ ಜಿಲ್ಲೆಯಲ್ಲಿ ಕೆಲಸ ಮಾಡಲು ಬಹಳ ಕಷ್ಟವಾಗುತ್ತಾ ಇದೆ. ಮದ್ರಾಸ್ ಸರಕಾರದಿಂದ ಮೈಸೂರು ಸರ್ಕಾರಕ್ಕೆ ಸೇರುವ ಮುಂಚೆ ನಮ್ಮ ಜಿಲ್ಲೆಯಲ್ಲಿ ಅನೇಕ ಕೆಲಸಗಳು ಬಹಳ ತೀವ್ರಗತಿಯಿಂದ ಆಗುತ್ತಿದ್ದವು. ಬಾಯ್ ಹುಕುಮಿನಿಂದ ಸಹ ಕೆಲಸ ಮಾಡಿಸಲಾಗುತ್ತಿತ್ತು. ಆಗ್ಗೆ ಅಸಿಸ್ಟೆಂಟ್ ಕಮೀಷನರಿಗೆ ಎಷ್ಟೋ ಧೈರ್ಯವಿತ್ತು, ಆದರೆ ಈಗ ಕೆಲಸ ನರಿಯಾಗಿ ಆಗುತ್ತಿಲ್ಲ. ಯಾವುದೇ ಒಂದು ಕೆಲಸದ ಬಗ್ಗೆ ಇರುವ ಕಾಗದಗಳು ಎಲ್ಲ ಅಧಿಕಾರಿಗಳ ಮುಖಾಂತರ ಸರಕಾರಕ್ಕೆ ಬರಬೇಕು. ಶುಕ್ರಾಚಾರ್ಯರ ಕಣ್ಣಲ್ಲಿ ಕಡ್ಡಿ ಬಿದ್ದಂತೆ ಆಗಿದೆ. ಕಾಗದ ಪತ್ರಗಳು ಎಲ್ಲ ಬಿದ್ದುಕೊಂಡಿವೆ ಎಂಬುದೂ ಗೊತ್ತಾಗುವುದಿಲ್ಲ. ಎಲ್ಲ ಅಧಿಕಾರಿಗಳ ಆಫೀಸಿನಲ್ಲಿ ತಿರುಗಿ ಡಿವಿಜನಲ್ ಕಮೀಷನರ್ ಕಚೇರಿಗೆ ಹೋಗಿ ಅಲ್ಲಿಂದ ಸೆಕ್ರೆಟೆರಿಯಟ್ಟಿಗೆ ಬಂದು, ಅನಂತರ ಮಂತ್ರಿಗಳ ಕಡೆಗೆ ಬರಬೇಕು. ಕೆಲವು ಕಾಗದಗಳು ಡಿವಿಜನಲ್ ಕಮೀಷನರ್ ಆಫೀಸಿನಲ್ಲಿಯೇ ಬಿದ್ದುಕೊಂಡಿರುತ್ತವೆ. ಹಿಂದೊಮ್ಮೆ ಶ್ರೀ ಎಸ್. ಕೆ. ಪಾಟೀರ್ ರವರು ಹೇಳಿದ ಹಾಗೆ ಅವರ ಇರಾತೆಯಲ್ಲಿ ಮೊದಲು 62 ಗಡಿ ದಾಟಬೇಕಾದುದು ಈಗ 14 ಗಡಿ ದಾಟಬೇ

(ಶ್ರೀ ಎ. ಶ್ರೀನಿವಾಸಶೆಟ್ಟಿ)

ಕಾಗುತ್ತದಂತೆ. ನಮ್ಮ ಸರ್ಕಾರದಲ್ಲಿಯೂ ಸಹ ಅದೇ ರೀತಿ ಸುಧಾರಣೆಯಾಗಬೇಕಾಗಿದೆ. ಈ ಕೆಲಸವನ್ನು ಚುರುಕು ಮಾಡಬೇಕು. ಬ್ರಿಟಿಷ್ ಆಡಳಿತ ಇದ್ದಾಗ ಯಾವ ರೀತಿ ಸರ್ವ ಸಾಧಾರಣವಾಗಿ ಕೆಲಸಗಳು ಆದಷ್ಟು ಜಾಗ್ರತೆಯಾಗಿ ಆಗುತ್ತಿದ್ದವೋ ಹಾಗೆ ಮಾಡುವುದಕ್ಕೆ ಅಧಿಕಾರಿಗಳಿಗೆ ಶಕ್ತಿ ಕೊಡಬೇಕು. ಈಗ ಕೆಲಸವಾಗುವ ರೀತಿಯಲ್ಲಿ ಒಂದು ಹುಕುಮು ಆಗಬೇಕಾದರೆ ಶತಮಾನಗಳು ಬೇಕಾಗುತ್ತವೆ. ಈಗ ಮೈಸೂರು ಸರ್ಕಾರದಲ್ಲಿ ಪೇಪರ್ ಕೈಗೆ ಸಿಕ್ಕುವುದಿಲ್ಲ. ಈ ರೀತಿ centra lisation ನಿಂದ ಕೆಲಸವಾಗುವುದು ಸಾಧ್ಯವಿಲ್ಲ. ಮೊದಲು I.C.S. ಆಫೀಸರು ಇದ್ದರು, ಈಗ I.A.S. ಆಫೀಸರು ಇದ್ದಾರೆ. ಅವರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಕೊಡುತ್ತಿಲ್ಲ. ಸೆಕ್ರೆಟೇರಿಯಟ್ ಲೆವೆಲ್ಲಿಗೆ ಕಾಗದಗಳು ಬರಬೇಕಾದರೆ ಡಿವಿಜನಲ್ ಕಮೀಷನರ್ ಆಫೀಸು ಒಂದು ಪೋಸ್ಟ್ ಆಫೀಸ್ ಆಗಿದೆ. ಪ್ರತಿಯೊಂದೂ ಡಿವಿಜನಲ್ ಕಮಿಷನರ್ ಮುಖಾಂತರ ಬರಬೇಕು. ಹೀಗೆ ಆದರೆ ಒಂದು ರಾಷ್ಟ್ರೀಯ ಏಸ್ತರ ಯೋಜನೆಯ ಅವಧಿ ಐದು ವರ್ಷಗಳ ಬದಲು 50 ವರ್ಷ ಎಂದು ಇಟ್ಟುಕೊಳ್ಳಬೇಕಾಗುತ್ತದೆ. Man on the spot ಇರತಕ್ಕಂಥವರಿಗೆ ಒಂದೆರಡು ಸಾವಿರ ರೂಪಾಯಿಗಳವರೆಗಿನ ಕೆಲಸಗಳನ್ನು ಮಾಡಲು ಸಹ ಸ್ವಾತಂತ್ರ್ಯವಿಲ್ಲ. ಎಲ್ಲವೂ ಡಿವಿಜನರ್ ಕಮಿಷನರ್ ಮುಖಾಂತರ ಬೆಂಗಳೂರಿಗೆ ಬರಬೇಕು. ಹೀಗಾದರೆ ಕೆಲಸ ಸುಸೂತ್ರವಾಗಿ ಆಗುವುದಿಲ್ಲ.

ನಾನು ಮಲೆನಾಡು ಪ್ರದೇಶದಿಂದ ಬಂದವನು. ಅಗಿದ್ದೇನೆ. ಪ್ರಾಮುಖ್ಯವಾಗಿ ಮಲೆನಾಡು ಪ್ರದೇಶದಲ್ಲಿ ಮೂರು ಕೆಲಸಗಳು ಆಗಬೇಕಾಗಿವೆ. ಅದನ್ನೇ ಪಂಡಿತ ನೆಹರು ಅವರು ಹೇಳಿದ್ದಾರೆ. ಶ್ರೀ ಎಸ್. ಕೆ. ಡೇ ಅವರು ಹೇಳಿದ್ದಾರೆ. ಮಲೆನಾಡಿನಲ್ಲಿ ಪ್ರಾಮುಖ್ಯವಾಗಿ ಆಗಬೇಕಾದುದು ರಸ್ತೆ, ಶಾಲೆಗಳು, ಆಸ್ಪತ್ರೆಗಳು. ಈ ಮೂರನ್ನು ಮಾಡಿದರೆ ಪ್ರಗತಿಯು ಮೆಟ್ಟಲು ಕಟ್ಟಿದ ಹಾಗೆ ಆಗುತ್ತದೆ. ಮಲೆನಾಡಿನಲ್ಲಿ ಸಾಗುವಳಿ ಮಾಡಲು ಬರುವ ಭೂಮಿ ಪಾಳು ಬಿದ್ದಿದೆ. ಮುಖ್ಯವಾಗಿ ಶಿಕ್ಷಣಕ್ಕಾಗಿ ಶಾಲೆಗಳಿಲ್ಲ, ಆರೋಗ್ಯ ರಕ್ಷಣೆಗೆ ಆಸ್ಪತ್ರೆಗಳಿಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಲು ರಸ್ತೆಗಳಿಲ್ಲ. ಹಳ್ಳಗಳನ್ನು ದಾಟಲು ಸಂಕಗಳಿಲ್ಲ. ಹೀಗೆ ಇರುವುದರಿಂದ ಜನರು ಹೇಗೆ ಸಹಕಾರ ಕೊಡಬಲ್ಲರು? ಆದ್ದರಿಂದ ಮಲೆನಾಡು ಪ್ರದೇಶದಲ್ಲಿ ಆದಷ್ಟು ಜಾಗ್ರತೆ ರಸ್ತೆಗಳನ್ನು ಮಾಡಬೇಕು. ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳನ್ನು ಪ್ರಾರಂಭಿಸಬೇಕು. ಜನರ ಆರೋಗ್ಯ ರಕ್ಷಣೆಗಾಗಿ ಆಸ್ಪತ್ರೆಗಳನ್ನು ತೆರೆಯಬೇಕು. ಒಂದು ವೇಳೆ ಇಂಡಿಯಾ ಸರ್ಕಾರದಿಂದ ದೊರೆಯುವ ಗ್ರಾಂಟು ಕಡಿಮೆಯಾಗಬಹುದು. ಅದರೂ ಸಹ ಈ ಮೂರು ಕೆಲಸಕ್ಕೆ priority ಕೊಡಬೇಕು. ಈ ಮೂರು ವಿಷಯಗಳಿಗೆ ಪ್ರಾಮುಖ್ಯತೆ ಕೊಡುವುದು ಅವಶ್ಯಕವಾಗಿದೆ.

ನಮ್ಮ ಕರ್ಣಾಟಕದ ಭಾಗದಲ್ಲಿ ಬ್ಲಾಕ್ಸನ್ನು ತೆಗೆದಿದ್ದೀರಿ. ಕೆಲವು ಬ್ಲಾಕ್‌ಗಳಲ್ಲಿ 50 ಸಾವಿರ 60ಸಾವಿರ ಜನಸಂಖ್ಯೆ ಇದೆ. ಇನ್ನೂ ಕೆಲವು ಕಡೆ ಒಂದು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇದೆ. ಈ ರೀತಿ ಲಾಪ್ ಸ್ಪೆಡೆಡ್ ಆಗಿದೆ. ಇಷ್ಟು ಹಣ ಖರ್ಚು ಮಾಡಿ ಏನು ಪ್ರಯೋಜನ? ನಮ್ಮ ಜಿಲ್ಲೆಯ ವಿಷಯವಾಗಿ ಎರಡು ಮಾತು ಹೇಳಬೇಕಾಗಿದೆ. ಕುಂದಾಪುರ ತಾಲ್ಲೂಕಿನಲ್ಲಿ ಒಂದು ಲಕ್ಷ 70 ಸಾವಿರ ಜನ ಇದ್ದಾರೆ. ಪುತ್ತೂರು ತಾಲ್ಲೂಕಿನಲ್ಲೂ ಸಹ ಅಷ್ಟೇ ಇದೆ. ಬ್ಲಾಕ್ ಪ್ರುರು ಅದಲಾಗಾಯ್ತು ಎರಡು ಕಡೆಗೂ ಒಬ್ಬರೇ ಆಫೀಸರು ಇದ್ದಾರೆ. ಇಷ್ಟು ದೊಡ್ಡ ಪ್ರದೇಶಕ್ಕೆ ಒಬ್ಬರು ಆಫೀಸರನ್ನು ಹಾಕಿದರೆ ಅವರು ಏನು ಕೆಲಸ ಮಾಡುವುದಕ್ಕೆ ಸಾಧ್ಯ ಎಂದು ಕೇಳುತ್ತೇನೆ. ಕುಂದಾಪುರ ಏರಿಯಾದಲ್ಲಿರುವ ಸಿ.ಡಿ. ಬ್ಲಾಕ್ ಏನಿದೆ ಆ ಪ್ರದೇಶ ಬಹಳ ಹಿಂದುಳಿದಿದೆ. ಬಸ್ ಇಲ್ಲ, ರಸ್ತೆ ಸೌಕರ್ಯ ಇಲ್ಲ. ಒಬ್ಬರು ಆಫೀಸರು ಅಲ್ಲೆಲ್ಲಾ ತಿರುಗಿ ಕೆಲಸ ಮಾಡಬೇಕೆಂದರೆ ಬಹಳ ಕಷ್ಟವಾಗಿ ಯಾವ ಕೆಲಸವೂ ನಡೆಯದಂತಾಗಿದೆ. ಇದೇ ರೀತಿ ಪುತ್ತೂರಿನಲ್ಲೂ ಸಹ ಆಗಿದೆ. ಬೇರೆ ಕಡೆಯೂ ಇದೇ ರೀತಿ ಇರಬಹುದು. ಇದಕ್ಕೆ ಯಾವುದಾದರೂ ಒಂದು ಪರಿಹಾರ ಮಾಡಬೇಕೇ ಹೊರತು ಹೇಗಾದರೂ ಆಗಲೀ ಎಂದು ಹೇಳುವುದರಲ್ಲಿ ಪ್ರಯೋಜನವಿಲ್ಲ. ಸರ್ಕಾರದವರು ನ್ಯಾಯವಾಗಿ ಯೋಚನೆ ಮಾಡಿ ಇದರ ಬಗ್ಗೆ ಏನೊಂದು ಕೆಲಸ ಮಾಡಬೇಕೋ ಅದನ್ನು ಮಾಡಿ ಯೋಗ್ಯ ರೀತಿಯಲ್ಲಿ ಕೆಲಸ ಜರುಗುವಂತೆ ಮಾಡಬೇಕು. ಒಂದು ವರ್ಷದಿಂದ ಖರ್ಚು ಮಾಡಿರತಕ್ಕ ಹಣವೆಲ್ಲಾ ನಿರರ್ಥಕ ಎಂದು ಹೇಳುತ್ತೇನೆ. ಈ ಎಕ್.ಇ.ಎಸ್. ಎನ್ನುವುದು ಏನೋ ಒಂದು ತಮಾಷೆಗೆ ಮಾಡಿದ ಯೋಜನೆ, ಜನರ ಹಿತದೃಷ್ಟಿಯಿಂದ ಮಾಡಿದ್ದಲ್ಲ ಎಂದು ಜನಗಳಿಗೆ ಖಂಡಿತ ಗೊತ್ತಾಗುತ್ತದೆ ಎಂದು ಹೇಳುತ್ತೇನೆ. ಈ ವಿಷಯದಲ್ಲಿ ತಾವು ಸ್ವಲ್ಪ ಕೂಲಂಕಷವಾಗಿ ಯೋಚನೆ ಮಾಡಬೇಕು.

ಇನ್ನೊಂದು ವಿಷಯ. ಯಾವುದನ್ನು ಮಾಡಬೇಕೋ ಅದನ್ನು ನೀವು ಮಾಡಲಲ್ಲ. ಅದು ಕೆಲವು ಸಮಯ ಡರ್ಟಿಯಾಗಿದೆ. Compulsory education ಎಂದು ನಾವು ಕಾಸ್ಟಿಟ್ಯೂಷನ್‌ನಲ್ಲಿ ಓದಿದ್ದೇವೆ. ಬರೀ ಹತ್ತು ವರ್ಷದಲ್ಲಿ compulsory education ಆಗುತ್ತದೆಯೇ? ನಮ್ಮ ಜಿಲ್ಲೆಯಲ್ಲಿ ಕೆಲವು ಸಣ್ಣ ಸಣ್ಣ ಕೇಂದ್ರಗಳಲ್ಲಿ compulsory education ಎಂದು ಮಾಡಿದ್ದೀರಿ. ಇದು ಎಲ್ಲೂ ಸುಸೂತ್ರವಾಗಿ ನಡೆದಿದ್ದಿಲ್ಲ. ಇದಕ್ಕೆ ಖರ್ಚು ಮಾಡತಕ್ಕ ಹಣವೆಲ್ಲಾ ವ್ಯರ್ಥವಾಗುತ್ತಿದೆ. ಕೆಲವು ಪ್ರದೇಶದಲ್ಲಿ ಮಾತ್ರ ಇದನ್ನು ಜಾರಿಗೆ ಕೊಟ್ಟು ಮತ್ತೆ ಕೆಲವು ಪ್ರದೇಶದಲ್ಲಿ ಜಾರಿಗೆ ಕೊಡದಿರುವುದನ್ನು ನೋಡಿದರೆ ನಿಮಗೆ ಇದನ್ನು ಮಾಡುವಷ್ಟು ಧೈರ್ಯವಿಲ್ಲ ಎಂದು ಕಂಡುಬರುತ್ತದೆ. ಜನರು ವಿರೋಧ ಮಾಡುತ್ತಾರೆ ಎಂದು ಹೆದರಿಕೊಂಡು ಕೆಲಸ ಮಾಡುತ್ತೀರೇ ಹೊರತು ಈ ಕಂಪಲ್‌ಸರಿ ಎಜುಕೇಷನ್ ಮಾಡಲಿಕ್ಕೆ ನಿಮಗೆ ಧೈರ್ಯ ಇಲ್ಲ. ಎಕ್.ಇ.ಎಸ್. ಮತ್ತು ಸಿ.ಡಿ. ಬ್ಲಾಕ್‌ನಲ್ಲಿ ಇದನ್ನು ಕಡ್ಡಾಯವಾಗಿ ಮಾಡಲೇಬೇಕೆಂದು ಜನರ ಒತ್ತಾಯ ಇದೆ. ಆದರೆ ಮಾಡಲಿಕ್ಕೆ ಏಮ್ಕಿಂದ ಆಗಿಲ್ಲ. ನಿಮ್ಮನ್ನು ಕೇಳುತ್ತೇನೆ. ಈ ರೀತಿ ಒಂದು ಆಶಾದಾಯಕವಾದ ದೊಡ್ಡ ದೊಡ್ಡ ಯೋಜನೆಗಳನ್ನು ಇಟ್ಟುಕೊಂಡು ಹಣ ಖರ್ಚು ಮಾಡಬೇಕಾಗಿರುವಾಗ ಶಿಕ್ಷಣವನ್ನು ಜನರಿಗೆ ಕೊಡಬೇಡವೇ?

ಸೋಷಿಯಲ್ ಎಜುಕೇಷನ್‌ಗೆ ನೀವು ಖರ್ಚು ಮಾಡಿದ ಹಣವೆಲ್ಲಾ ದುರ್ವ್ಯಯವೆಂದು ನನಗೆ ಕಾಣುತ್ತದೆ. ಏಕೆಂದರೆ ಎರಡನೆ ಪಂಚವಾರ್ಷಿಕ ಯೋಜನೆ ಪ್ರಕಾರ ಕೆಲಸ ಮಾಡುವಾಗ ಈ ಸೋಷಿಯಲ್ ಎಜುಕೇಷನ್ ಸ್ಕ್ರಾಪ್ ಆದೀತು ಎಂದು ಕಾಣುತ್ತದೆ. ನಾನು ಹೇಳುವುದು, ಪ್ರಚಾರ ದೃಷ್ಟಿಯಿಂದ ಕೆಲಸ ಮಾಡಬೇಡಿ, ಅದು ನಿರರ್ಥಕ. ಸೋಷಿಯಲ್ ಎಜುಕೇಷನ್ ಆಫೀಸರು ಒಬ್ಬರು ಇದ್ದಾರೆ. ಹೆಂಗಸರನ್ನೇ ಹಾಕಿದ್ದಾರೆ. ಅವರು ಎಲ್ಲಿಗೇ ಹೋಗಲಿ, ಬಸ್ಸು,

ಕಾರು ಬಿಟ್ಟು ಇಳಿಯುವುದಿಲ್ಲ. ಕಾರಿನಲ್ಲೇ ಎಲ್ಲ ಕಡೆಗೂ ತಿರುಗುತ್ತಾರೆ. 100ಕ್ಕೆ 5ರಷ್ಟು ಹಳ್ಳಿಗಳಿಗೂ ಸಹ ಅವರು ಹೋಗಿ ಕೆಲಸ ಮಾಡಲಿಕ್ಕೆ ಅವರಿಂದ ಸಾಧ್ಯವಿಲ್ಲ. ಇನ್ನು ಐದು-ಹತ್ತು ವರ್ಷಗಳಲ್ಲಿ ಯಾವ ರೀತಿ ಆಗುತ್ತದೆಯೋ ಗೊತ್ತಿಲ್ಲ. ಆದ್ದರಿಂದ ಇದಕ್ಕೆ ಖರ್ಚು ಮಾಡತಕ್ಕ ಹಣ ವ್ಯರ್ಥವೆಂದು ಕಾಣುತ್ತದೆ.

ಪ್ರೊಹಿಬಿಷನ್ ಇಟ್ಟುಕೊಳ್ಳಿ. ಕ್ರಮೇಣ ಜನ ಮುಂದುವರಿಯುತ್ತಾರೆ, ವಿದ್ಯಾವಂತರಾಗುತ್ತಾರೆ. ಒಂದೇ ಸಾರಿ ಎಲ್ಲಾ ಮಾಡಲಿಕ್ಕೆ ಹೋಗಿ ಕಡಬು ನುಂಗುವ ಕೆಲಸಕ್ಕೆ ಹೋಗಬೇಡಿ. ಯಾವುದು ನ್ಯಾಯವಾಗಿ ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಪ್ರಾವಿಷ್ಯಾವಾದ ವಿಷಯ, ರೂರಲ್ ಹೌಸಿಂಗ್. ಇವೊತ್ತಿಗೂ ಕೂಡ ಹಳ್ಳಿಗಳಲ್ಲಿ 100ಕ್ಕೆ 99 ಭಾಗ ಒಳ್ಳೆಯ ಮನೆಗಳಿಲ್ಲ. ಎಜ್.ಇ.ಎಸ್. ಮತ್ತು ಸಿ.ಡಿ. ಬ್ಲಾಕ್ಸ್‌ನಲ್ಲಿ ಎಷ್ಟು ಹಣ ಕೊಟ್ಟಿದ್ದೀರಿ, ಎಷ್ಟು ಮನೆ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ನೀವೇನೋ ಮನೆ ಕಟ್ಟಿಕೊಳ್ಳಲಿಕ್ಕೆ ಸಾಲ ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಸಾಲ ಪಡೆದು ಕೊಳ್ಳಲಿಕ್ಕೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಸಹ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಯಾವ ಒಂದು ಯೋಜನೆಯೇ ಆಗಲಿ ಅದನ್ನು ಕಟ್ಟುವಾಗಿ ಟೀಕೆಮಾಡಿ ತೆಗೆದು ಹಾಕಿ, ಬಿಟ್ಟುಬಿಡಿ ಎಂದು ಹೇಳುವುದು ಪ್ರಾಕ್ಟಿಕಲ್ ಆಗಿ ಸಾಧ್ಯವಾಗುವುದಿಲ್ಲ, ಐಡಿಯಲಿಸ್ಟಿಕ್ ಆಗುತ್ತದೆ. ಹೊರದೇಶದವರು ಇಲ್ಲಿಗೆ ಬಂದು ಇಲ್ಲಿನ ಯೋಜನೆಗಳನ್ನು ನೋಡಿ ಸರ್ಟಿಫಿಕೇಟ್ ಕೊಟ್ಟ ಮಾತ್ರಕ್ಕೇ ಅದರಿಂದ ಏನೂ ಪ್ರಯೋಜನವಿಲ್ಲ. ಆದ್ದರಿಂದ ಯಾವುದೇ ಆಗಲೀ ಪಕ್ಷ ದೃಷ್ಟಿಯಿಂದ ಮಾಡಕೂಡದು, ನ್ಯಾಯ ದೃಷ್ಟಿಯಿಂದ ಕೆಲಸ ಮಾಡಬೇಕು. ಹಾಗೆ ಮಾಡಿದರೆ ಪ್ರಯೋಜನವಾಗುತ್ತದೆ. ಇಲ್ಲದೇ ಇದ್ದರೆ ನಮ್ಮ ಜನರೆ ಕೋಟ್ಯಾಂತರ ರೂಪಾಯಿಗಳನ್ನು rat-hole–ಹೆಗ್ಗಣದ ಬಿಲಕ್ಕೆ ಹಾಕಿದ ಹಾಗಾಗುತ್ತದೆ. ಹಾಗೆ ಆಗಕೂಡದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬನಸಗೌಡ (ಲಿಂಗಸುಗೂರು)—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮಾನ್ಯ ಮಂತ್ರಿಗಳು ಸಭೆಯ ಮುಂದೆ ತಂದಿರತಕ್ಕ ಒಂದು ಡಿಮ್ಯಾಂಡಿನ ಬಗ್ಗೆ ನನ್ನ ಬೆಂಬಲ ನೀಡುತ್ತಾ ನಾನು ನಮ್ಮ ಕಾರ್ಯಸ್ವಿಟ್ಯೂಯೆಸಿ ಬಗ್ಗೆ ಎರಡು ಮಾತುಗಳನ್ನು ಮಾತ್ರ ಹೇಳಲಿಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನೀಗ ರೋಕಲ್ ಡೆವಲಪ್‌ಮೆಂಟ್ ವಿಚಾರವಾಗಿ ಎರಡು ಮಾತುಗಳನ್ನಾಡಬೇಕೆಂದಿದ್ದೇನೆ. ಹಿಂದೆಯಿದ್ದ ಹೈದರಾಬಾದ್ ಸರ್ಕಾರದವರು ಈ ಕೆಲಸಕಾರ್ಯಗಳನ್ನು ಮಾಡಲು ಜನರು ಮೂರನೆಯ ಒಂದುಭಾಗದ ಖರ್ಚನ್ನು ಕೊಡಬೇಕೆಂದು ವಿಧಾಯಕ ಮಾಡಿದ್ದರು. ಆದರೆ ಅಷ್ಟನ್ನು ಕೊಡತಕ್ಕ ಯೋಗ್ಯತೆ ಎಲ್ಲ ಜನರಿಗೂ ಇರಲಿಲ್ಲ. ಆಗ ನಾನೇ ಆ ಬಗ್ಗೆ ಹೋರಾಡಿ ಅದನ್ನು ನಾಲ್ಕನೆಯ ಒಂದುಭಾಗಕ್ಕೆ ಇಳಿಸುವಂತೆ ಮಾಡಿದ್ದೆನು. ಆಗ ಜನರೇನೋ ಒಂದು ಹುರುಪಿನಿಂದ ತಮ್ಮ ಭಾಗದ ಖರ್ಚನ್ನು ಕೊಡಲು ಔದಾರ್ಯದಿಂದ ಮುಂದೆ ಬಂದರು. ಅನೇಕ ನಾಲೆಗಳ ಮತ್ತು ಬಾವಿಗಳ ಕೆಲಸವನ್ನು ಪ್ರಾರಂಭಿಸಲಾಯಿತು. ಆ ಬಗ್ಗೆ ಹಣವನ್ನು ಕೊಡಲಿಕ್ಕೆ ಶಕ್ತಿ ಇಲ್ಲದಂಥ ಜನರು ತಮ್ಮ ಸ್ವಂತ ಶಕ್ತಿಯಿಂದ ಕೆಲಸಮಾಡಿಕೊಟ್ಟರು. ಅನೇಕ ಕೆಲಸಗಳು ಹಾಗೆ ಪ್ರಾರಂಭವಾಗಿ ಈಗ ಅವು ಮುಗಿಯದೆ ಹಾಗೇ ನಿಂತುಹೋಗಿವೆ. ಸರ್ಕಾರದವರಿಂದ ಈ ಬಗ್ಗೆ ನಲ್ಲಬೇಕಾಗಿರುವ ೫ ಭಾಗ ಹಣ ಇಲ್ಲಿಗೆ ಮೂರು-ನಾಲ್ಕು ವರ್ಷಗಳಿಂದಲೂ ಬಾರದೆ ಅನೇಕ ಬಾವಿಗಳ ಕೆಲಸ ಹಾಗೆಯೆ ಅರ್ಧದಲ್ಲಿ ನಿಂತು ಹೋಗಿದೆ. ಕೆಲವು ಬಾವಿಗಳಲ್ಲಿ ನೀರು ಸಹ ಬಿದ್ದಿದೆ. ಇನ್ನು ಕೆಲವು ಬಾವಿಗಳನ್ನು ಇಳಿಸಬೇಕಾಗಿದೆ. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ ಈ ದಿವಸ ಮುದುಗಲ್ಲನಲ್ಲಿ ಒಂದು ಮಿಡಲ್‌ಸ್ಕೂಲಿದೆ. ಆ ಶಾಲೆಗೆ ಒಂದು ಸರಿಯಾದ ಕಟ್ಟಡವಿಲ್ಲ. ಅದಕ್ಕಾಗಿ ಒಂದು ಕಟ್ಟಡ ಕಟ್ಟಿಸತಕ್ಕ ಬಗ್ಗೆ ಜನರು ಕೊಡಬೇಕಾದ ಅವರ ಭಾಗದ ನಾಲ್ಕನೆಯ ಒಂದು ಅಂಶದ ದುಡ್ಡನ್ನು ಕೊಟ್ಟು ಕೆಲಸವನ್ನು ಬಹಳ ಉತ್ಸಾಹದಿಂದ ಪ್ರಾರಂಭಿಸಿದರು. ಆದರೆ ಅದರ ಬಗ್ಗೆ ಸರ್ಕಾರದ ಭಾಗದಿಂದ ನಲ್ಲ ಬೇಕಾದ ನಾಲ್ಕನೆಯ ಮೂರಂಶವಿನ್ನೂ ಪಾವತಿ ಆಗಿಲ್ಲ. ಅದೇ ರೀತಿ ಮಾಸ್ಕಿ ಎಂಬ ಗ್ರಾಮದ ಶಾಲೆಯ ಕೆಲಸ ಕೂಡ ಹಾಗೇ ನಿಂತುಹೋಗಿದೆ. ಜನರೇ ಮುಂದೆ ನುಗ್ಗಿ ಬಹಳ ಕೆಲಸ ಮಾಡಿದ್ದಾರೆ. ಆದರೆ ಇನ್ನೂ ಶೇಕಡ 15 ರಷ್ಟು ಕೆಲಸ ಹಾಗೇ ಉಳಿದಿದೆ. ಹೀಗೇಯೇ ಮತ್ತೊಂದು ಸರ್ಜಾಪುರ ಪ್ರೈಮರಿ ಶಾಲೆಯ ಕಟ್ಟಡದ ವಿಚಾರ ತೆಗೆದುಕೊಂಡರೆ ಅಲ್ಲಿ ಬೇಸ್‌ಮೆಂಟ್ ಹಾಕಿ ಬಾಗಿಲು, ನಿಲುವು, ಕಿಟಕಿ, ಕದ ಇತ್ಯಾದಿಗಳನ್ನೆಲ್ಲ ತಂದು ಹಾಕಿದ್ದಾರೆ. ಸರ್ಕಾರದವರು ತಮ್ಮ ಭಾಗದ ಹಣ ಕೊಡದೆ ಈ ಕೆಲಸಗಳೂ ಹಾಗೇ ಉಳಿದಿವೆ. ಇದೇ ರೀತಿ ನಿಲುವುಗರ್ ಗ್ರಾಮದಲ್ಲಿ ಒಂದು ಬಾವಿ ವಿಚಾರವೂ ಹಾಗೆಯೇ ನಿಂತಿದೆ. ಆ ಬಾವಿ ವಿಚಾರದಲ್ಲಿ ಜನರಿಗೆ ಮೊದಲು ನೀವು ನೀರು ಬೀಳುವ ತನಕ ಆ ಬಾವಿ ಕಡಿಯಿರಿ ಎಂದು ಹೇಳಿದರು. ಅದೇ ಪ್ರಕಾರ ಜನರು ಅಲ್ಲಿ ಬಾವಿ ಕಡಿದಿದ್ದಾರೆ. ಈಗ ಮೂರು-ನಾಲ್ಕು ಅಡಿ ನೀರು ಸಿಕ್ಕಿದೆ. ಆದರೆ ಈಗ ಆ ಕೆಲಸವನ್ನು ಮುಂದುವರಿಸಲು ಯತ್ನವಿಲ್ಲದಂತಾಗಿದೆ. ಸಾರ್ವಜನಿಕರಿಗೆ ನಾವು ಈ ವಿಚಾರದಲ್ಲಿ ಏನಾದರೂ ಹೇಳಬೇಕೆಂದರೆ ನಮಗೆ ಬಹಳ ನಾಚಿಕೆಯಾಗುತ್ತಿದೆ. ಇದೇ ರೀತಿ ನನ್ನ ಸ್ವಂತ ಗ್ರಾಮದಲ್ಲೂ ಕೂಡ ಒಂದು ಪ್ರೈಮರಿ ಸ್ಕೂಲಿದೆ; ಅದಕ್ಕೆ ಎರಡು-ಮೂರು ರೂಮುಗಳನ್ನು ಜಾಸ್ತಿ ಮಾಡಬೇಕಾಗಿತ್ತು. ಆ ಬಗ್ಗೆ ಗ್ರಾಮಸ್ಥರಾಗಲೇ ಎರಡು ಸಾವಿರದತನಕ ಖರ್ಚು ಮಾಡಿದ್ದೇವೆ. ಹೈದರಾಬಾದ ಸರಕಾರದ Deputy Minister for Commerce ಆ ಪ್ರದೇಶಕ್ಕೆ ಸಂಚಾರ ಬಂದಿದ್ದಾಗ್ಗೆ ಅವರನ್ನು ಅಲ್ಲಿಗೆ ಕರೆದುಕೊಂಡುಹೋಗಿ ಆ ಕೆಲಸವನ್ನೆಲ್ಲ ತೋರಿಸಿದ್ದೇವೆ. ಸುಮಾರು 500 ರೂಪಾಯಿಗಳನ್ನು discretionary grant ಕೊಟ್ಟಿದ್ದರು. ಸಾರ್ವಜನಿಕರು ಮುಂದೆ ಬಂದು ಹಣ ಖರ್ಚುಮಾಡಿ ಕೆಲಸ ಮಾಡಿದ್ದಾಗ್ಗೂ ಸರ್ಕಾರದವರಿಂದ ಬರಬೇಕಾಗಿರುವ 150 ರೂಪಾಯಿಗಳಿನ್ನೂ ಬಂದಿಲ್ಲ. ಬರಬೇಕಾಗಿದೆ. ಸರ್ಕಾರದವರೇ ಈ ಪ್ರಕಾರ ಮಾಡುತ್ತಾ ಹೋದರೆ ಮುಂದೆ ನಾವು ಇವರ ಮಾತಿನಮೇಲೆ ಹೇಗೆ ಕೆಲಸಗಳನ್ನು ಮಾಡಬೇಕೋ ತಿಳಿಯಲಿಲ್ಲ.

ಇನ್ನು N.E.S. ಸ್ಕೀಮು ಬಗ್ಗೆ ನಮ್ಮ ಜಿಲ್ಲೆಯ ವಿಚಾರ ಹೇಳುವುದಾದರೆ—ಅರಿತೋ ಅಥವಾ ಅರಿಯದೇನೋ ದೇವದುರ್ಗ ತಾಲ್ಲೂಕಾಕ್ಕೆ ಒಂದು ಬ್ಲಾಕನ್ನು ಮಾಡಿದ್ದಾರೆ. ಆದರೆ ಅಲ್ಲಿ ಗಂಗಾವತಿ, ಕೊಪ್ಪಳಕ, ಕುಷ್ಟಗಿ ಮತ್ತು ಸಿಂಧನೂರು—ಈ ಐದು ಬಹಳ ಹಿಂದುಳಿದ ತಾಲ್ಲೂಕುಗಳು. ಅದರಲ್ಲಿ ಎಲ್ಲಿಗಾರ್ ತಾಲ್ಲೂಕ್ ಬಹಳ

(ಶ್ರೀ ಬಸನಗೌಡ)

ಹಿಂದುಳಿದುದು. ಅಲ್ಲಿಯ ಜನರುಎಲ್ಲ ಭಾಗದಲ್ಲೂ ಹಿಂದುಳಿದಿದ್ದಾರೆ. ಅಲ್ಲಿಯ ಜನರಿಗೆ ಒಂದು ಸರ್ಕಾರಿ ಶಾಲೆಯಿಲ್ಲ, ಆಸ್ಪತ್ರೆಯಿಲ್ಲ. ತಾಲ್ಲೂಕಾ ಹೆಡ್‌ಕ್ವಾರ್ಟರುಗಳಲ್ಲೂ ಕೂಡ ಕೆಲವು ಕಡೆ ಒಂದಾದರೂ ಸರ್ಕಾರಿ ಶಾಲೆ ಇಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಒಂದು N. E. S. ಸ್ಕೀಮನ್ನು ದೇವದುರ್ಗಕ್ಕೆ ಕೊಡದೆ ಯಲ್ಬುರ್ಗಾಕ್ಕೆ ಕೊಟ್ಟಿದ್ದರೆ ಬಹಳ ಅನುಕೂಲವಾಗುತ್ತಿತ್ತು, ಕುಷ್ಟಗಿಗೂ ಹತ್ತಿರವಾಗುತ್ತಿತ್ತು. ಬೊಂಬಾಯಿ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ರಾಯಣಕ್ಕೂ ಸಮೀಪವಾಗುತ್ತದೆ. ಇಂಥ ಸ್ಥಳದಲ್ಲಿ ಸರ್ಕಾರದವರು ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕನ್ನು ತೆಗೆಯದೆ ಎಲ್ಲೋ ಹೋಗಿ ತೆಗೆದಿದ್ದಾರೆಂದೂ, ಈ ಬಗ್ಗೆ ಅಸೆಂಬ್ಲಿಯಲ್ಲಿಕೆ ಪ್ರಶ್ನೆ ಹಾಕಲಿಲ್ಲ ಎಂತ ನನಗೆ ಪತ್ರ ಬರೆದಿದ್ದಾರೆ. ಆದ್ದರಿಂದ ಸರ್ಕಾರದವರು ಈಗ ಅಲ್ಲಿ ಕೈಗೊಂಡಿರುವ N.E.S. ಬ್ಲಾಕ್ ಹೆಡ್‌ಕ್ವಾರ್ಟರನ್ನು ದೇವದುರ್ಗದಿಂದ ಯಲ್ಬುರ್ಗಾಕ್ಕೆ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ತಾವು ಏನಾದರೂ ಒಂದು ಕೆಲಸಮಾಡಿದರೆ ಜನರ ಮನಸ್ಸಿನಲ್ಲೊಂದು ಒಳ್ಳೆಯ ಪರಿಣಾಮ ಉಂಟಾಗತಕ್ಕ ರೀತಿಯಲ್ಲಿ ಮಾಡಬೇಕು. ಅಂಥ ಒಂದು ಸ್ಥಳವನ್ನು ಈಗ ಸರ್ಕಾರದವರು ಬಿಟ್ಟು ಬಿಟ್ಟು ಬೇರೆ ಎಲ್ಲೋ ಒಂದುಕಡೆ ಆ ಬ್ಲಾಕನ್ನು ಮಾಡಿದ್ದಾರೆ. ಆದರೆ ಆ ಬಗ್ಗೆ ಯಾರೊಂದು ಪ್ರಭಾವ ಬೀರಿದ್ದಾರೋ ತಿಳಿಯದು. ಆದ್ದರಿಂದ ಈ ಬ್ಲಾಕನ್ನು ಯಲ್ಬುರ್ಗಾಕ್ಕೆ ಬದಲಾಯಿಸಬೇಕೆಂದು ಹೇಳುತ್ತೇನೆ. ಅಲ್ಲಿಯ ಜನರಿಗೆ ಸರ್ಕಾರದಿಂದ ಯಾವ ಒಂದು ಅನುಕೂಲವೂ ಇಲ್ಲದೆ ಇಲ್ಲಿಯತನಕ ಅವರಿಗೆ ತುಂಬಾ ತೊಂದರೆ ಆಗಲಿಕ್ಕೆ ಹತ್ತಿದೆ. ಅಲ್ಲಿಯ ಸರ್ಕಾರಿ ನೌಕರರೂ ಸಹ ಸರಿಯಾಗಿ ಕೆಲಸಮಾಡುತ್ತಿಲ್ಲ. ಹೀಗೆಲ್ಲ ಕೆಲಸಗಳಾಗುತ್ತಿದ್ದರೆ ಸರ್ಕಾರದ ಬಗ್ಗೆ ಜನರಿಗೆ ತಪ್ಪು ಭಾವನೆ ಉಂಟಾಗಬಹುದು. ಈಗಾಗಲೇ ಮಾತನಾಡಿದ ಶ್ರೀ ಶ್ರೀನಿವಾಸಪ್ಪನವರು ಹೇಳಿದ ಹಾಗೆ ಅನೇಕ ಕಡೆ ತೊಂದರೆಗಳಾಗುತ್ತಿದೆ. ಆ ರೀತಿ ಆಗದಂತೆ ದೇಶದಲ್ಲಿ ಉತ್ತಮ ಕೆಲಸಗಳಾಗಿ ಜನರಿಗೆ ನೆಮ್ಮದಿಯಾಗುವ ರೀತಿ ಕೆಲಸನಡೆಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[Sri L. B. BIRJE (Khanapur) spoke in Marathi.]

3 P.M.

[MR. DEPUTY SPEAKER in the Chair]

* ಶ್ರೀ ಆಲೂರು ಹನುಮಂತಪ್ಪ (ನೆಲಮಂಗಲ).— ಮಾನ್ಯ ಅಧ್ಯಕ್ಷರೇ, ಈ ದಿವಸದ ರಾಷ್ಟ್ರೀಯ ವಿಸ್ತರಣಾ ವ್ಯವಸ್ಥೆ, ಸಾಮೂಹಿಕ ಅಭಿವೃದ್ಧಿಯ ಯೋಜನೆಗಳ ಒಂದು ಹಣಕಾಸಿನ ಬೇಡಿಕೆಯ ವಿಷಯದಲ್ಲಿ ಮಂಡಿಸಿರುವ ಈ ಇಲಾಖೆಯ ಕೆಲವು ಕಾರ್ಯ ವಿಚಾರಗಳ ಮತ್ತು ಅಧಿಕಾರಿಗಳ ಒಂದು ಕೆಲಸಕಾರ್ಯಗಳ ವಿಷಯದಲ್ಲಿ ನನ್ನ ಕೆಲವು ಸಲಹೆಗಳನ್ನು ಈ ಸಭೆಯಮುಂದೆ ಇಡಬೇಕೆಂದು ಇಚ್ಛೆಪಡುತ್ತೇನೆ.

ಸುಮಾರು ಐದು ವರ್ಷಗಳಿಂದಲೂ ಇಡೀ ಭಾರತದಲ್ಲಯೇ ಪ್ರತಿಯೊಂದು ಹಳ್ಳಿಯಲ್ಲಿಯೂ ಪುನರ್ ವ್ಯವಸ್ಥೆಯನ್ನು ಕೈಗೊಂಡು ಒಂದು ರೀತಿಯಾದ ಹೊಸ ಚೈತನ್ಯವನ್ನು ತುಂಬಬೇಕೆಂದು ಹೇಳುತ್ತ ನಮ್ಮ ನಾಯಕರಾದ ಪ್ರಧಾನಿಯವರು ದೇಶದಲ್ಲೆಲ್ಲ ಈ ಯೋಜನೆಯ ವಿಷಯದಲ್ಲಿ ಅತಿಶಯವಾದ ನಂಬಿಕೆಯನ್ನು ಇಟ್ಟುಕೊಂಡು ಈ ದೇಶದಲ್ಲಿ ಜಾರಿಗೆ ತಂದರು. ಅಲ್ಲಿಂದೀಚೆಗೆ ಈ ಯೋಜನೆಯ ವ್ಯಾಪ್ತಿ ಪ್ರತಿಯೊಂದು ಹಳ್ಳಿಗೂ ಹರಡುವಂತೆ, ಪ್ರತಿಯೊಂದು ಹಳ್ಳಿಯಲ್ಲಿರುವ ಕುಟುಂಬ, ಪುನರ್ರಚಿತವಾಗುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸಬೇಕು ಎನ್ನುವಂತಹ ಇತರ ಅನೇಕ ವಿಷಯಗಳನ್ನೆಲ್ಲ ಇದರಲ್ಲಿ ಅಡಕಮಾಡಿದ್ದಾರೆ. ವ್ಯವಸಾಯ, ವಿದ್ಯಾಭ್ಯಾಸ, ಮತ್ತೆ ಗ್ರಾಮ ನೈರ್ಮಲ್ಯ—ಈ ರೀತಿ ಯಾದ ಅನೇಕ ಸೋಷಿಯಲ್ ಆಕ್ಟಿವಿಟೀಸ್‌ಗಳನ್ನು ಈ ಒಂದು ಯೋಜನೆಯಲ್ಲಿ ಅಡಕ ಮಾಡಿದ್ದಾರೆ, ಆದರೆ ಎಷ್ಟರಮಟ್ಟಿಗೆ ಯೋಜನೆಯಲ್ಲಿ ಅಡಕವಾಗಿರತಕ್ಕ Mixed Programme ಎನ್ನುವುದು, ನಮ್ಮ ಹಳ್ಳಿಗಾಡಿನ ರೈತರ ನೆರವಿಗೆ ಹೋಗುತ್ತದೆ ಎಂದು ಆಲೋಚನೆ ಮಾಡುವುದಾದರೆ, ಸ್ಕೂಲನ್ನು ಕಟ್ಟುವುದು, ಅಥವಾ ಯಾವುದಾದರೂ ಒಂದು ಚಿಕ್ಕ ಸೇತುವೆಯನ್ನು ಕಟ್ಟುವುದು ಅಥವಾ ಇತರ ಕೆಲಸ ಕಾರ್ಯಗಳನ್ನು ಮಾಡುವುದು ಒಂದು ಪ್ರೋಗ್ರಾಂಪ್ರಕಾರ ಮಾಡಬೇಕೆಂದು ರೂಪಿಸಿರುತ್ತಾರೆ. ಆ ಪ್ರೋಗ್ರಾಮಿನ ಪ್ರಕಾರ ಯಾವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯ, ಮತ್ತು ಪ್ರತಿಯೊಂದು ಗ್ರಾಮದಲ್ಲಿಯೂ ಸರಿಯಾದ ರೀತಿಯಲ್ಲಿ ಕೆಲಸಗಳಾಗುತ್ತವೆಯೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ; ಮತ್ತು ಹಾಗೆ ಬಿಡಲಿಕ್ಕೂ ಆಗುವುದಿಲ್ಲ. ಯಾವ ಗ್ರಾಮದಲ್ಲಿ ಅಲ್ಲಿಯ ಜನಗಳಿಂದ ಎಷ್ಟರಮಟ್ಟಿನ ಪ್ರೋತ್ಸಾಹ ಮತ್ತು ಸಹಕಾರ ದೊರೆಯುತ್ತದೆ, ಎಷ್ಟರಮಟ್ಟಿಗೆ ಇಲ್ಲ ಎನ್ನುವುದು ಈ ಯೋಜನೆಗಳಲ್ಲ ಕೆಲಸಮಾಡುವ ಗ್ರಾಮ ಸೇವಕರುಗಳಿಂದ ತಿಳಿಯುತ್ತದೆ. ಸಹಕಾರ ದೊರೆಯದೆ ಇರತಕ್ಕ ಗ್ರಾಮಗಳಿಗೂ ಪದೇ ಪದೇ ತಿರುಗಿ ಅಲ್ಲರುವ ಜನಗಳನ್ನು ಮುಂದಕ್ಕೆ ತರುವ ಒಂದು ದೊಡ್ಡ ಜವಾಬ್ದಾರಿ ಈ ಗ್ರಾಮ ಸೇವಕರುಗಳಮೇಲೆ ಬಿದ್ದಿದೆ. ಇವರ ಪಾತ್ರ ಇಹಳ ಮಹತ್ತರವಾದುದು. ಗ್ರಾಮಪಂಚಾಯಿತಿಗಿಂತ ಈ ಗ್ರಾಮ ಸೇವಕರುಗಳಿಗೆ ಹೆಚ್ಚಿನ ಜವಾಬ್ದಾರಿಯಿದೆ. ಅಷ್ಟೆದೆ ಇನ್ನುಮುಂದೆ ಗ್ರಾಮಪಂಚಾಯಿತಿಯಲ್ಲಿ ಕೆಲಸ ಮಾಡುವ ಸೇವಕರುಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡುತ್ತೇವೆಂದು ಹೇಳುತ್ತಿರುವುದರಿಂದ, ಗ್ರಾಮ ಪಂಚಾಯಿತಿ ಕೆಲಸಗಳನ್ನು ಇನ್ನು ಮುಂದೆ ಗ್ರಾಮ ಸೇವಕರುಗಳಿಂದ ಮಾಡಿಸಬೇಕೆಂದೇನೋ ಇದೆ. ಈ ಗ್ರಾಮಪಂಚಾಯಿತಿಗಳು ಮಹತ್ತರವಾದು ಎಂದು ನಾವೆಲ್ಲರೂ ಹೇಳುತ್ತೇವೆ. ಆದರೆ ಗ್ರಾಮಪಂಚಾಯಿತಿಗಳು ಪ್ರತಿಯೊಂದು ಗ್ರಾಮದಲ್ಲಯೂ ಕೆಲಸಮಾಡುತ್ತಿವೆಯೇ ಇಲ್ಲವೇ ಎನ್ನುವುದನ್ನು ನೋಡಿದರೆ, ನೂರಕ್ಕೆ ತೊಂಬತ್ತುಭಾಗ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದು. ಇದಕ್ಕೆ ಕಾರಣ ಎರೆಕ್ಷನ್ನು, ಅಥವಾ ಗ್ರಾಮಗಳಲ್ಲಿರುವ ವೈಮನಸ್ಯ ಅಥವಾ ಭಿನ್ನಾಭಿಪ್ರಾಯಗಳು. ಈ ಗ್ರಾಮಸೇವಕರು ಗ್ರಾಮಗಳಲ್ಲಿ ಇರುವ ವೈಮನಸ್ಯಗಳನ್ನು ಕೊಡೆದು ಒಗ್ಗಟ್ಟನ್ನುಂಟು ಮಾಡಿದರೆ ಹಳ್ಳಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಈಗ ಏನಾಗಿದೆ ಎಂದರೆ, ಈ ಹಳ್ಳಿಗಳಲ್ಲರುವ ಜನಗಳಲ್ಲಿ ವೈಮನಸ್ಯಗಳು ಹೆಚ್ಚಾಗಿ ಗ್ರಾಮಗಳಲ್ಲಿ ಒಗ್ಗಟ್ಟು ಕಡಮೆಯಾಗುತ್ತಿದೆ. ಹೀಗಾಗಿರುವುದರಿಂದ ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮತ್ತು ಸಾಮೂಹಿಕ ಅಭಿವೃದ್ಧಿ ಯೋಜನೆಗಳ ತತ್ವಕ್ಕೆ ತಕ್ಕಷ್ಟು ಪ್ರೋತ್ಸಾಹ ಸಿಕ್ಕುತ್ತಿಲ್ಲ. ಎಂದರೆ ಈ ಯೋಜನೆಗಳಿಂದ ಮಾಡುವುದೇನೂ ಇಲ್ಲವೆಂದಲ್ಲ.

ಅದಷ್ಟು ಇವಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಹಾಗೆ ಕೊಡಬೇಕಾಗಿದ್ದರೆ ಈಗಿರುವ ಬ್ಲಾಕು ಡೆವಲಪ್‌ಮೆಂಟ್ ಅಧಿಕಾರಿಗಳು ಸುಮಾರು 27, 28 ಜನ ಇದ್ದಾರೆ, ಇವರಿಂದ ಸಾಕಷ್ಟು ಕೆಲಸಗಳನ್ನು ಇವತ್ತಿನ ದಿವಸ ಮಾಡಿಸಿದರೆ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಅಭಿವೃದ್ಧಿಗೆ ತರಲು ಅನುಕೂಲವಾಗುತ್ತದೆ. ಹೀಗಿರುವಾಗ ಇವರ ಕಾರ್ಯಚಟುವಟಿಕೆಗಳು ಎಂದರೆ Administrative Machinery ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈ ಮೆಷಿನರಿ ಕೆಲಸಮಾಡದೆ ಇರುವುದರಿಂದ ಕೈಗೊಂಡ ಕೆಲಸಗಳು ಆಗುತ್ತಿಲ್ಲ ಮತ್ತು ಇದರ ಪರಿಣಾಮವಾಗಿ ಯೋಜನೆಯ ಪ್ರಕಾರ ನಡೆಯಬೇಕೆಂದಿದ್ದ ನಮ್ಮ ನಾಯಕರ ಆಸೆ ಈಡೇರುತ್ತಿಲ್ಲ. N.E.S. ಡಿಪಾರ್ಟ್‌ಮೆಂಟಿಗೆ ವ್ಯವಸಾಯ ಇಲಾಖೆಯಿಂದಾಗಲಿ, ಪಶುವೈದ್ಯ ಇಲಾಖೆಯಿಂದಾಗಲಿ, ಅಥವಾ ಯಾವುದೇ ಇಲಾಖೆಗಾಗಲಿ, ಎಕ್ಸ್‌ಟೆನ್‌ಷನ್ ಆಫೀಸರ್ ಬಂದಿದ್ದರೆ ಅವರಿಗೆ ಸಹಕಾರ ಈ ಇಲಾಖೆಗಳಿಂದ ದೊರೆಯುತ್ತಾ ಇಲ್ಲ. ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಕೋ-ಆರ್ಡಿನೇಷನ್ ಮತ್ತು ಕೋ-ಆಪರೇಷನ್ ಬೇಕಾಗುತ್ತದೆ. ಒಂದು ಆಲೋಚನೆ ಮಾಡೋಣ. ಕ್ರೆಡಿಟ್ ಸಿಸ್ಟಮ್, ಎಂದರೆ ಏನು ಸಾಲ ಕೊಡುತ್ತಾರೆ ಅದು, ಇವೊತ್ತಿನ ದಿವಸ ಬಹಳ ಉಪಕಾರ ಮಾಡಿದೆ. ದೇಶದ ರೈತರಿಗೆ ಅದರಲ್ಲಿ ಅಡಚಣೆಗಳು ಬಹಳ ಜಾಸ್ತಿಯಾಗಿವೆ. ಈಗತಾನೆ ಹಿಂದೆ ಕೆಲವು ಬೇಡಿಕೆಗಳಮೇಲೆ ಮಾತನಾಡಿ ಮಾನ್ಯ ಸದಸ್ಯರು ಹೇಳಿದ್ದನ್ನು ಕೇಳಿದ್ದೇವೆ. ಸರ್ಕಾರ ಕೊಡುವ ವಿಧಾನ ಸರಿ. ಆದರೆ ಅದು ಸಮಯಾದ ಕಾಲದಲ್ಲಿ ಸಿಕ್ಕುತ್ತಾ ಇಲ್ಲ. ಇದಕ್ಕೆ ಕಾರಣ ರಿಜಿಸ್ಟ್ರೇಷನ್ ಅಥವಾ ಖಾತೆ ಟ್ರಾನ್ಸ್‌ಫರ್ ಆಗದೆ ಇರತಕ್ಕದ್ದು ಅಥವಾ ಡಾಕ್ಯುಮೆಂಟ್ ಇರತಕ್ಕವರಿಗೆ ತಾಲ್ಲೂಕು ಕಛೇರಿಯಲ್ಲಿ ಇರತಕ್ಕ ರೆಕ್ಟಿಫಿಕೇಷನ್ ಪತ್ರಗಳು ಸಿಕ್ಕದೆ ಇರುವುದು, ಹೀಗೆ ಅಡಚಣೆಗಳು ಇವೆ ಎಂದು ಹೇಳುತ್ತಿದ್ದಾರೆ. ಆ ಅಡಚಣೆಗಳನ್ನು ತೊಡೆದುಹಾಕಿದ್ದರೆ ಅಷ್ಟು ಸಾಲ ದೊರೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಇಲಾಖೆಯು ಈ ತೊಡಕುಗಳನ್ನು ಬಿಡಿಸುವುದಾದರೆ ಈ ಯೋಜನೆಯಿಂದ ಬಹಳ ಉಪಕಾರವಾಗುತ್ತದೆ. ಈಗ ಸ್ನೇಹಿತರು ಅನೇಕರು ಹೇಳುತ್ತಾರೆ, ಈ ಇಲಾಖೆಯಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಪ್ರಧಾನ್ಯತೆ ಕೊಟ್ಟಿಲ್ಲ ಎಂದು. ಸ್ಕೂರ್ ಬಿಲ್ಡಿಂಗ್, ಭಜನಮಂದಿರ ಇವುಗಳಿಗೆ ಗಮನ ಕೊಟ್ಟಿದ್ದಾರೆ. ನಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ 100 ರಲ್ಲಿ 90 ಭಾಗ ಹಣವಿನಿಯೋಗ ಆಗಬೇಕಾಗಿತ್ತು. ಅದು ಆಗದೆ ಎಕನಾಮಿಕ್ ಸ್ಟ್ಯಾಂಡರ್ಡ್ ಇಂಪ್ರೂವ್ ಆಗುವುದಕ್ಕೆ ಸಾಧ್ಯವಿಲ್ಲ. ಇದು ಆಗಬೇಕು ಎಂದು ಹೇಳುತ್ತೇನೆ. ಅದೂ ಅಲ್ಲದೆ ಪೌಲ್ಟ್ರಿ ಫಾರಂ, ಕಾಂಪೋಸ್ಟ್ ಗೊಬ್ಬರ ತಯಾರಿಸುವ ಕೆಲಸವನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಮಾಡುವುದು ಈ ಯೋಜನೆಯ ಮುಖ್ಯಕರ್ತವ್ಯ. ಪೌಲ್ಟ್ರಿಫಾರಂ ಆಗಲೀ, ಪಶುವೈದ್ಯ ಅಭಿವೃದ್ಧಿ ಆಗಲಿ, ವ್ಯವಸಾಯಕ್ಕೆ ಆಗಲಿ ಪ್ರಾಧಾನ್ಯತೆ ಕೊಡುತ್ತಾ ಇಲ್ಲ ಈಗ ವಿಲೇಜ್ ಲೀಡರ್ಸ್ ಟ್ರೈನಿಂಗ್ ಕ್ಯಾಂಪ್ ಎಂದು ಅನೇಕ ಕಡೆ ಮಾಡುತ್ತಿದ್ದಾರೆ. ಟ್ರೈನಿಂಗ್ ನಡೆಸಿ ಮೂರು ದಿವಸಗಳಾದಮೇಲೆ ಅವರು ಅಲ್ಲಿಂದ ಹೋಗುತ್ತಾರೆ. ಎರಡು ಮೂರು ತಿಂಗಳಿಗೆ ಪುನಃ ಅಲ್ಲಿಗೆ ಹೋಗಿ ನಿರ್ದಿಷ್ಟವಾಗಿ ನೀವು ಏನು ಮಾಡಿದ್ದೀರಿ ಎಂದು ಕೇಳುವುದು ಮುಖ್ಯವಾದ ವಿಷಯ. ಅದನ್ನು ಅಷ್ಟಾಗಿ ಫಲಪ್ರದವಾಗಿ ಮಾಡುತ್ತಾ ಇಲ್ಲ. ಇಲಾಖೆಯವರು ಹೆಚ್ಚಿನ ಗಮನಕೊಟ್ಟು ಮಾಡಬೇಕು ಎಂದು ಹೇಳುತ್ತೇನೆ. ಅದು ಜನಗಳ ಒಂದು ಯೋಜನೆಯೇ ಸರಿ. ಇವೊತ್ತಿನ ದಿವಸ ನಮ್ಮ ರೈತರ ವಿದ್ಯೆ ಉನ್ನತಮಟ್ಟದಲ್ಲಿ ಇಲ್ಲದೆ ಇರುವುದರಿಂದ ಯೋಗ್ಯರಾದ ಮತ್ತು ಸತ್ಯಸಂಧ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ನಡೆಯಬೇಕು. ನಮ್ಮ ರೈತರೇ ಈ ಯೋಜನೆಗಳನ್ನು ಕಾರ್ಯಗತ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಕೋ-ಆಪರೇಟೀವ್ ಫಾರಂ ಮಾಡಬೇಕೆಂದು ಪ್ರಧಾನಿ ನೆಹರು ಏನು ಹೇಳುತ್ತಿದ್ದರೋ ಅದಕ್ಕೆ ಮನ್ನಣೆ ಕೊಟ್ಟು ಕೋ-ಆಪರೇಟೀವ್ ಫಾರಂ ಮಾಡಲೇಬೇಕು. ಅದನ್ನು ಮಾಡದೆ ಹೋದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಯಾವೊಂದು ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಎಡರು ತೊಡರುಗಳು ಬರುತ್ತವೆ. ಗ್ರಾಮಪಂಚಾಯತಿಗಳ ಆವಶ್ಯಕತೆ ಇದೆ. ಗ್ರಾಮದಲ್ಲಿ ವೈಮನಸ್ಯ ಹೋಗಲಾಡಿಸುವುದು ಮೊದಲನೆಯ ಕರ್ತವ್ಯ. ಗ್ರಾಮ ಸೇವಕರು ತಮಗೆ ಸೇರಿದ ಪ್ರತಿಯೊಂದು ಗ್ರಾಮದಲ್ಲಿ ನಿಕಟಸಂಬಂಧವನ್ನು ಇಟ್ಟುಕೊಂಡು ಅವರ ಅವಶ್ಯಕತೆಗಳನ್ನು ಇಲಾಖೆಗೆ ತಿಳಿಸಿ, ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆ ಬಹಳ ಹೆಚ್ಚಿನ ಚುರುಕಿನಿಂದ ಕೆಲಸ ಮಾಡದೇ ಹೋದರೆ ಕೆಲಸಕಾರ್ಯಗಳು ಅಷ್ಟು ಫಲಪ್ರದವಾಗುವುದಿಲ್ಲ. ಜೊತೆಗೆ ಅಧಿಕಾರಿಗಳು ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಹೀಗೆ ಖರ್ಚಾಗುವಾಗ ರೈತರುಗಳನ್ನು ಆಕರ್ಷಿಸುವ ವ್ಯವಸ್ಥೆ ಮಾಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೆಲಸಕಾರ್ಯಗಳು ಸರಿಯಾಗಿ ಆಗುವುದಾದರೆ ಅದರಿಂದ ಹೆಚ್ಚಿನ ವಿಷಯಗಳನ್ನು ರೈತರು ತಿಳಿದುಕೊಳ್ಳಬಹುದು. ಇದಕ್ಕೆ ಸಂಬಂಧಪಟ್ಟ ಯಾವ ಯಾವ ಅಧಿಕಾರಿಯಾಗಲಿ ದೇಶ ಪ್ರೇಮದಿಂದ ಕೆಲಸ ಮಾಡಬೇಕು. ಕೆಲವು ಕಡೆ ಈ ಇಲಾಖೆಯಲ್ಲಿಯೂ ಲಂಚ ಇದೆ ಎಂದು ಹೇಳುತ್ತಾರೆ. ಬೇರೆ ಇಲಾಖೆಯಲ್ಲಿ ಅದು ಇವೊತ್ತು ಇರಬಹುದು. ನಾಳೆ ಕಡಮೆ ಆಗಬಹುದು. ಅದು ಬೇರೆ. ಆದರೆ ಈ ಯೋಜನೆಯಲ್ಲಿ ಅಂಥ ಅಂಶಗಳು ಕಂಡುಬಂದರೆ ಇಲಾಖಾ ಅಧಿಕಾರಿಗಳು ತಕ್ಷಣ ಕ್ರಮ ತೆಗೆದುಕೊಂಡು ಹೆಚ್ಚಿನ ರೀತಿಯಲ್ಲಿ ನೋಡಬೇಕಾದುದು ಮುಖ್ಯ. ಇಂಥ ಯೋಜನೆ ಭಾರತದಲ್ಲಿ ಹೆಚ್ಚಿನ ಉತ್ಪಾಪಹವನ್ನು ತರುವ ಯೋಜನೆ. ಇದು ಯಶಸ್ವಿಯಾಗುವುದಕ್ಕೋಸ್ಕರ ಎಲ್ಲರೂ ದುಡಿಯೋಣ. ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ರೂರಲ್ ಇಂಡಸ್ಟ್ರೀಸ್ ಓವರ್ ಲ್ಯಾಪಿಂಗ್ ಆಗಿದೆ ಎಂದು ಹೇಳುತ್ತಿದ್ದಾರೆ. ಇತರ ಇಲಾಖೆಗಳ ಯಾವುವೂ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮಾಡುವ ಕೆಲಸವನ್ನು ಮಾಡಿಲ್ಲ ಎಂದು ಹೇಳುತ್ತೇನೆ. ಇತರ ಇಲಾಖೆಯಲ್ಲಿ ಯಾವುದಾದರೂ ಕೆಲಸ ಮಾಡುತ್ತಾ ಇದ್ದರೆ ಅದನ್ನು ನಿಲ್ಲಿಸಿ ಈ ಇಲಾಖೆಯಲ್ಲಿ ಮಾಡಿಸಬೇಕು. ಇರಿಗೇಷನ್ ವೆಲ್ಸ್, ಪಂಪ್‌ಸೆಟ್ಸ್, ವ್ಯವಸಾಯಕ್ಕೆ ಕೊಡುವ ಇತರ ಅನುಕೂಲಗಳು ಇತರ ಇಲಾಖೆಗಳಿಂದ ಕೊಡುತ್ತಿದ್ದಾರೆ. ಅದನ್ನು ನಿಲ್ಲಿಸಿ ಇದರ ಮೂಲಕ ಕೊಡುವುದಾದರೆ ಬಹಳ ಸಂತೋಷ. ಈ ಇಲಾಖೆಗೆ ಕೊಡುವ ಖರ್ಚು ಮಿಗುತ್ತದೆ. ಹೀಗೆ ಒಂದು ದೃಷ್ಟಿಯಿಂದ ಸಾಲ ಕೊಡುವ ವಿಧಾನವನ್ನು

(ಶ್ರೀ ಆಲೂರು ಹನುವಂತಪ್ಪ)

ಆಲೋಚನೆ ಮಾಡೋಣ. ಇಷ್ಟು ದಿವಸ N.E.S. ನಲ್ಲಿ ರೂರಲ್ ಇಂಡಸ್ಟ್ರೀಸ್ ಬ್ಯಾಂಕಿನಿಂದ ರೈತರಿಗೆ ಅನುಕೂಲವಾಗಿಲ್ಲ. ಸಾಲಕ್ಕೆ ಅರ್ಜಿ ಹಾಕಬೇಕು ಎಂದರೆ ಎಷ್ಟೋ ಕಷ್ಟ ಇದೆ. ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು. ಅನೇಕ ಎಡರು ತೊಡರುಗಳಿವೆ. ಅವುಗಳನ್ನು ನಿವಾರಣೆಮಾಡುವುದಕ್ಕೋಸ್ಕರ ಆಯಾ ಹೋಬಳಿಯಲ್ಲಿ ಈ ಸಾಲ ಕೊಡುವ ವ್ಯವಸ್ಥೆ ಮಾಡದೇ ಹೋದಪಕ್ಷಕ್ಕೆ ಅರ್ಜಿ ಹಾಕಿದಮೇಲೆ ಅಲ್ಲಿಗೆ ಇಲಾಖಾಧಿಕಾರಿಗಳು ಹೋದರೆ ಗ್ರಾಮ ಸೇವಕರ ಹಿಂಬೆ ಮುಂದೆ ತಿರುಗಿ ರೈತರು ನಿರುತ್ಸಾಹಿಗಳಾಗುತ್ತಾರೆ. ಈ ಯೋಜನೆಯಲ್ಲಿ ಉತ್ಸಾಹ ಕಡಮೆ ಆಗುವುದಕ್ಕೆ ಎಡೆ ಕೊಡಬಾರದು. ಹೋಬಳಿ ನರ್ಕರ್‌ನಲ್ಲಿ ರೈತರಿಗೆ ಅನುಕೂಲಗಳನ್ನು ಮಾಡಿಕೊಡುವ ವ್ಯವಸ್ಥೆ ಮಾಡಬೇಕು. ಮಹಾ ಪ್ರಧಾನಿಗಳು ಅನಕ್ಕೆ ವಹಿಸಿದ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕಾರ್ಯಗತ ಮಾಡಲು ನಾವೆಲ್ಲರೂ ದುಡಿಯೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪುಟ್ಟೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿರತಕ್ಕ ಲೋಪ ದೋಷಗಳನ್ನು ಪೊದಲು ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ತಿಳಿಸಿ ಕೂನೆಗೆ ಬೇರೆ ವಿಷಯ ಹೇಳುತ್ತೇನೆ. N. E. S. ಸ್ಟಾಫ್ ಕ್ವಾರ್ಟರ್ ವಿಷಯದಲ್ಲಿ ಅರಕಲಗೂಡು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಅರಕಲಗೂಡು ತಾಲ್ಲೂಕು ಅಮಲ್ದಾರರಿಗೆ ತಾಲ್ಲೂಕು ಆಫೀಸು ಬಾಜು ಇರತಕ್ಕ ಪ್ಲೀಡರ್ ಶ್ರೀಕಂಠಯ್ಯನವರ ಮೂರನೆಯ ಸರ್ವೇ ನಂಬರ್ ಎರಡನೆಯ ಪೋಡಿನ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು 3 ನೆಯ ಸಪೆಂಬರ್ 1957 ರಲ್ಲಿ ತಿಳಿಸಿದರು. ಹಾಗೆ ತಿಳಿಸಿದನಂತರ ಅಮಲ್ದಾರರು ಶ್ರೀಮಾನ್ ಶ್ರೀಕಂಠಯ್ಯನವರಿಗೆ ನೀವು ನಮ್ಮ ಕೋರ್ಟ್‌ನಲ್ಲಿ ಹಾಜರಾಗಿ ನಿಮ್ಮ ಸಮಜಾಯಿಷಿ ಹೇಳಿಕೆ ಕೊಡಬೇಕು ಎಂದು 13 ನೆಯ ಡಿಸೆಂಬರ್ 1957 ರಲ್ಲಿ ಬರೆದರು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಅನಾವಶ್ಯಕ.

ಶ್ರೀ ಪುಟ್ಟೇಗೌಡ.—ಈ ವಿಚಾರವು N. E. S. ಗೆ ಸಂಬಂಧಪಟ್ಟಿರುತ್ತದೆ. ತಹಸೀಲ್ದಾರರು ಪ್ಲೀಡರ್ ಶ್ರೀಕಂಠಯ್ಯನವರಿಗೆ ಜಮೀನು ಅಕ್ವೈರ್ ಮಾಡತಕ್ಕ ವಿಚಾರದಲ್ಲಿ ಹೇಳಿಕೆಯನ್ನು ಕೊಡಬೇಕು ಎಂದು 13 ನೆಯ ಡಿಸೆಂಬರ್ 1957 ರಲ್ಲಿ ನೋಟೀಸ್ ಕೊಟ್ಟಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರು, Land Acquisition Officer ಎಷ್ಟು ಕಾಂಪೆನ್‌ಸೇಷನ್ ಗೊತ್ತುಮಾಡುತ್ತಾರೆಯೋ ಅದನ್ನು ತೆಗೆದುಕೊಳ್ಳುತ್ತೇನೆ, ಈ ದಿವಸವೇ ಜಮೀನನ್ನು ನಿಮ್ಮ ಸುಪರ್ದಿಗೆ ವಹಿಸುತ್ತೇನೆ, ಕಾಂಪೆನ್‌ಸೇಷನ್ ಮಾತ್ರ ತಗೆದು ಕೊಳ್ಳಲು ಬದ್ಧನಾಗಿದ್ದೇನೆ ಎಂದು 27ನೆಯ ಡಿಸೆಂಬರ್ 1957ರಲ್ಲಿ ತಹಸೀಲ್ದಾರರ ಹತ್ತಿರ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಾದಮೇಲೆ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿಗಳು ಕಟ್ಟಡಗಳನ್ನು ಕಟ್ಟಲು ನರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಣೆ ಮಾಡಿದ್ದಾರೆ. ಮೊದಲು 23 ನೆಯ ಜನವರಿ 1958 ರಲ್ಲಿ ಪ್ರಕಟಣೆಯಾಗಿದೆ. ಎರಡನೆಯ ಸಲ 30ನೆಯ ಜನವರಿ 1958 ರಲ್ಲಿ ಪ್ರಕಟನೆಯಾಗಿದೆ. ಇಷ್ಟಾದಮೇಲೆ ಟೆಂಡರ್‌ಗಳನ್ನು ಕರೆದು, comparative statement ಹಾಕಿ, ಯಾರದು ಕಡಮೆ ಟೆಂಡರು ಇತ್ತೋ ಅವರಿಗೆ 14 ನೆಯ ಫೆಬ್ರವರಿ 1958 ರಲ್ಲಿ ಕಟ್ಟಡದ ಕೆಲಸವನ್ನು ವಹಿಸಿದ್ದಾರೆ. ಆ ಸ್ಥಳದಲ್ಲಿ ಊರಿನ ಮುಖಂಡರು, ಅಡ್ವೈನರಿ ಕಮಿಟಿ ಸದಸ್ಯರು, ಬ್ಯಾಂಕ್ ಡೆವಲಪ್‌ಮೆಂಟ್ ಆಫೀಸರ್, ಇತರ ಅಧಿಕಾರಿಗಳೂ ಸೇರಿದ್ದು 20 ನೆಯ ಫೆಬ್ರವರಿ 1958 ರಲ್ಲಿ ಗುದ್ದಲಿ ಪೂಜೆ ಸಹ ನಡೆಯಿತು. ಇಷ್ಟೆಲ್ಲ ಆದಮೇಲೆ ಶ್ರೀಮಾನ್ ಶ್ರೀಕಂಠಯ್ಯನವರು ಬರೆದು ಕೊಟ್ಟ ಹೇಳಿಕೆಯನ್ನು ಜಿಲ್ಲಾಧಿಕಾರಿಗಳು ಟೀಕಿಸಿ 'ನೀವು ಕೊಟ್ಟಿರತಕ್ಕ ಹೇಳಿಕೆ ಸಮರ್ಪಕವಾಗಿಲ್ಲ, ನೀವು ಬೇರೆ ಹೇಳಿಕೆ ಕೊಡಬೇಕು, ಎಂದು 6 ನೆಯ ಫೆಬ್ರವರಿ 1958ರಲ್ಲಿ ಅರಕಲಗೂಡು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿಗೆ, ಶ್ರೀಕಂಠಯ್ಯನವರಿಂದ ಬೇರೆ ಹೇಳಿಕೆಯನ್ನು ಅಮಲ್ದಾರರು ತೆಗೆದುಕೊಳ್ಳಬೇಕು ಎಂದು ಪತ್ರ ಬರೆದು ಕಳುಹಿಸಿದ್ದಾರೆ. ಡೆಪ್ಯುಟಿ ಕಮೀಷನರು ಒಂದು ತಿಂಗಳು ಹತ್ತು ದಿನ ನಿಧಾನ ಮಾಡಿ ಜವಾಬು ಕಳುಹಿಸಿದ್ದಾರೆ. ಅರಕಲಗೂಡು ಬಿ.ಡಿ.ಓ. ರವರು 25 ದಿನ ನಿಧಾನಮಾಡಿ ಪ್ಲೀಡರ್ ಶ್ರೀಕಂಠಯ್ಯನವರಿಗೆ ತಿಳಿಸಿದ್ದಾರೆ. 25 ದಿನಗಳು ತಮ್ಮಲ್ಲಿಯೇ ಕಾಗದವನ್ನು ಇಟ್ಟುಕೊಂಡಿದ್ದರು. ಅರಕಲಗೂಡು B.D.O. ಅವರು ಈಗ ಕೊಟ್ಟಿರತಕ್ಕ ಜಮೀನು ತಕರಾರಿನಲ್ಲಿದೆಯಾದ್ದರಿಂದ ನರ್ವೆ 328ನೆಯ ನಂಬರು ಜಮೀನನ್ನು ಅಕ್ವೈರ್ ಮಾಡಿಕೊಂಡು ಕೊಡಬೇಕು ಎಂದು 2 ನೆಯ ಮಾರ್ಚ್ 1958 ರಲ್ಲಿ ಪೌರ ಸಭಾಧ್ಯಕ್ಷರಿಗೆ ಪತ್ರ ಬರೆದರು. 3 ನೆಯ ಮಾರ್ಚ್ 1958 ರಲ್ಲಿ ಶ್ರೀಕಂಠಯ್ಯನವರಿಗೆ ಬೇರೆ ಹೇಳಿಕೆ ಕೊಡಬೇಕು ಎಂದು ತಿಳಿಸಿ 2 ನೆಯ ಫೆಬ್ರವರಿ 1958 ರಲ್ಲಿ ಎಂದರೆ ಒಂದು ದಿನ ಮೊದಲು ಹೈನ್ಯೂಲು ಕಾಂಪೌಂಡಿನಲ್ಲಿರತಕ್ಕ ಜಾಗದಲ್ಲಿ ಎರಡು ಎಕರೆ ಜಾಗವನ್ನು ಅಕ್ವೈರ್‌ಮಾಡಿ staff quarter, office ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಪೌರ ಸಭಾಧ್ಯಕ್ಷರಿಗೆ B.D.O. ಅವರು ತಿಳಿಸಿದ್ದಾರೆ. ಇದಾದನಂತರ ಶ್ರೀಕಂಠಯ್ಯನವರಿಂದರಾಗಲಿ, ಪೌರ ಸಭಾಧ್ಯಕ್ಷರಿಂದಲಾಗಲಿ ಉತ್ತರವನ್ನು ನಿರೀಕ್ಷಿಸದೆ B.D.O. ಅವರು ಹೈನ್ಯೂಲಿನ ಆವರಣದ ಮೈದಾನದಲ್ಲಿ ಎರಡು ಎಕರೆ ಜಾಗವನ್ನು ಬಿಟ್ಟುಕೊಡಬೇಕು ಎಂದು 6 ನೆಯ ಮಾರ್ಚ್ 1958 ರಲ್ಲಿ ಪುನಃ ಕೇಳಿದ್ದಾರೆ. ಪೌರ ಸಭಾಧ್ಯಕ್ಷರು ಸರ್ವೆ 328ನೆಯ ನಂಬರು ಜಮೀನಿನ ವಿಷಯದಲ್ಲಿ ಅಲೂರಿನಲ್ಲಿದ್ದ ಶ್ರೀ ಕೆ. ಪಿ. ವಿಶ್ವನಾಥರಾಯರು ವಗೈರೆಯವರನ್ನೂ ಮತ್ತು ಹೊಳೆನರಸೀಪುರದ ಪ್ಲೀಡರ್ ಶ್ರೀಕಂಠಯ್ಯನವರನ್ನೂ ಆಯಾ ಸ್ಥಳಗಳಿಗೆ ಹೋಗಿ ಒಪ್ಪಿಸಿ 9ನೆಯ ಮಾರ್ಚ್ 1958 ರಲ್ಲಿ ಲಿಖಿತ ಮೂಲಕ B.D.O. ಅವರಿಗೆ ತಿಳಿಸಿ ತಹಸೀಲ್ದಾರ್ ಮುಖಾಂತರ ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಟ್ಟಡವನ್ನು ಕಟ್ಟಿಸಬಹುದು ಎಂದು ಹೇಳಿದ್ದಾರೆ. ಇದಾದಮೇಲೆ ಕೆ. ಪಿ. ವಿಶ್ವನಾಥರಾಯರ ತಮ್ಮ ಕೆ. ಪಿ. ವೆಂಕಟರಾಮಯ್ಯನವರು 328ನೆಯ ಸರ್ವೆ ನಂಬರು ಜಮೀನನ್ನು ನಿಮ್ಮ ಸ್ವಾಧೀನಕ್ಕೆ ಬಿಟ್ಟಿದ್ದೇನೆ, ಕಟ್ಟಡವನ್ನು ಕಟ್ಟಿಸಬಹುದು ಎಂದು 10 ನೆಯ ಮಾರ್ಚ್ 1958 ರಲ್ಲಿ ಲಿಖಿತ ಹೇಳಿಕೆಯನ್ನು ಕೊಟ್ಟಿದ್ದಾರೆ. ಇಷ್ಟಾದಮೇಲೆ ಇನ್ನೊಂದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಅಡ್ವೈನರಿ ಕಮಿಟಿಯ ಮೆಂಬರುಗಳಿಗೆ ಈ ನಡವಳಿಕೆಗಳನ್ನು ತಿಳಿಸದೆ, 15ನೆಯ ಮಾರ್ಚ್ 1958 ರಲ್ಲಿ ಮೀಟಿಂಗನ್ನು ಕರೆದು, ಮೀಟಿಂಗ್ ನಂದರ್ಭದಲ್ಲಿ ಮಾತ್ರ ಅವರಿಗೆ ತಿಳಿಸಿ, ಹೈನ್ಯೂಲು ಆವರಣದ ಮೈದಾನದ ಪೈಕಿ ಎರಡು ಎಕರೆ ಜಮೀನನ್ನು ಕೊಡಬೇಕೆಂದು ಪೌರನಭಾಧ್ಯಕ್ಷರನ್ನು ಕೇಳಲು ತೀರ್ಮಾನಿಸಿದರು. ಎಂದರೆ ಶ್ರೀ ಕೆ. ಪಿ. ವೆಂಕಟರಾಮಯ್ಯನವರು 10 ನೆಯ ತಾರೀಖು ಬರೆದು

ಕೊಟ್ಟಂದ ಹೇಳಿಕೆಯನ್ನು 15 ನೆಯ ತಾರೀಖು ನಡೆದ ಮೀಟಿಂಗ್‌ನಲ್ಲಿ ಹಾಜರು ಮಾಡಲಿಲ್ಲ. ಇದಾನಂತರ 26 ನೆಯ ತಾರೀಖು ಪೌರ ಸಭಾಧ್ಯಕ್ಷರು ಮೀಟಿಂಗ್ ಮಾಡಿ ಹೈನ್ಯೂಲು ಕಟ್ಟಬೇಕಾದರೆ ಹತ್ತು ಎಕರೆ ಜಾಗಬೇಕು, ಅದರಲ್ಲಿ ಎರಡು ಎಕರೆಯನ್ನು ಕೊಡುವುದಕ್ಕಾಗುವುದಿಲ್ಲ, ಶ್ರೀ ಕೆ. ಪಿ ವಿಶ್ವನಾಥರಾಯರು ಮುಫತ್ತಾಗಿ ಬರೆದುಕೊಟ್ಟಿರುವ ಜಮೀನಿನಲ್ಲಿ ಕಟ್ಟಡಗಳನ್ನು ಕಟ್ಟಬಹುದು ಎಂದು ನಿರ್ಣಯಮಾಡಿ ಕಳುಹಿಸಿದರು. ಶ್ರೀ ಕೆ. ಪಿ. ವಿಶ್ವನಾಥರಾಯರು ತಮ್ಮ ಜಮೀನಿನಲ್ಲಿ ಎಂದರೆ 28 ನೆಯ ಸರ್ವೆ ನಂಬರಿನಲ್ಲಿ ಒಂದು ಎಕರೆ ಎಂಟು ಗುಂಟೆ ಜಮೀನನ್ನು ಮುಫತ್ತಾಗಿ ಕೊಡಲು ಒಪ್ಪಿ ಬರೆದು 30 ನೆಯ ಮಾರ್ಚಿ 1958 ರಲ್ಲಿ ಮಾನ್ಯ ಉಪಮಂತ್ರಿಗಳಿಗೆ ಕಳುಹಿಸಿದ್ದಾರೆಂದು ತಿಳಿದುಬಂದಿದೆ.

ಕೊಳೇ ನರಸೀಪುರದ ಪ್ಲೀಡರ್ ಶ್ರೀಕಂಠಯ್ಯನವರ ಜಮೀನಿನಲ್ಲಿ ಮನೆ ಕಟ್ಟುವುದಕ್ಕೆ ಕಾಂಪೆಟೆನ್ಸೇಷನ್ ಕೇಳಿರುವ ವಿಚಾರದಲ್ಲಿ ಉತ್ತರ ಕೊಡದೆ ಇರುವುದರಿಂದ, ಶ್ರೀಕಂಠಯ್ಯನವರು 4ನೆಯ ಏಪ್ರಿಲ್ 1958ರಲ್ಲಿ ನೀವು ದುಡ್ಡು ಕೊಡದೆ ಇದ್ದರೂ ಚಿಂತೆಇಲ್ಲ, ನಾನು ಜಮೀನನ್ನು ಮುಫತ್ತಾಗಿ ಕೊಡುತ್ತೇನೆಂದು ಖರೀದಿ ಪತ್ರ ಬರೆದು ಕಳುಹಿಸಿದ್ದಾರೆಂದು ಗೊತ್ತಾಗಿದೆ. ಅದು ಮಾನ್ಯ ನಚಿವರಿಗೆ ಬಂದಿರಬಹುದು. ಜಿಲ್ಲಾಧಿಕಾರಿಗಳು 4 ನೆಯ ಏಪ್ರಿಲ್ 1958 ರಿಂದ ನಾಲ್ಕು ದಿನಗಳು ಅರಕಲಗೂಡು ತಾಲ್ಲೂಕಿನಲ್ಲಿ ಪ್ರವಾಸಮಾಡಿ, ನಾಮಕರಣ ಸದಸ್ಯರನ್ನು ಭೇಟಿಮಾಡಿ ಬಂದು 7 ನೆಯ ಏಪ್ರಿಲ್ 1958 ರಲ್ಲಿ ಅಡ್ಜೈನರಿ ಬೋರ್ಡಿನ ಮೀಟಿಂಗನ್ನು ಕರೆದು, ತಾವೇ ಅಧ್ಯಕ್ಷತೆ ವಹಿಸಿ, ಬೇರೆ ಗ್ರಾಮದ 58 ನೆಯ ಸರ್ವೆ ನಂಬರು ಜಮೀನನ್ನು ಅಗ್ರಿಕಲ್ಚರಲ್ ಸರ್ಟಿಫಿಕೇಟ್ ಇಲ್ಲದೆ, ಎಕ್ಸಿಕ್ಯೂಟಿವ್ ಇಂಜಿನಿಯರು ಅಥವ ಹೆಲ್ತ್ ಆಫೀಸರ ಅಭಿಪ್ರಾಯವನ್ನು ಪಡೆಯದೆ, ಅಕ್ವೆಜಿಷನ್ ಪ್ರೊಸಿಡಿಂಗ್ಸ್ ಸಹ ನಡೆಯದೆ, ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ತಿಳಿಸಿ ಮೀಟಿಂಗ್‌ನಲ್ಲಿ ಆ ವಿಷಯವನ್ನು ತಂದು ತೀರ್ಮಾನ ಮಾಡಿಕೊಂಡಿದ್ದಾರೆ. ಇದಕ್ಕೆ ಮುಂಚೆ ಎಕ್ಸಿಕ್ಯೂಟಿವ್ ಇಂಜಿನಿಯರು ಮತ್ತು ಹೆಲ್ತ್ ಆಫೀಸರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದ ಮತ್ತು ಮಾನ್ಯ ಉಪಸಚಿವರೂ ನೋಡಿದ್ದು, ಎಲ್ಲರೂ spot inspection ಮಾಡಿದ್ದ ಜಾಗವನ್ನು ಬಿಟ್ಟು ಮಂತ್ರಿಗಳ ಆಫೀಸಿನಿಂದ ಒಂದು ಚೆಲಗಾಟ್ಯಾಂ ಬಂದಿದ್ದರೂ ಅದನ್ನು ಸಹ ಲೆಕ್ಕ ಎಡದೆ, ಸ್ವೇಚ್ಛಾಪ್ರವರ್ತನೆಯಿಂದ, 24ನೆಯ ತಾರೀಖು ಜಮೀನನ್ನು ತಾವು ತೆಗೆದುಕೊಂಡಿರುವುದರಿಂದ ಅದಕ್ಕೆ ಪೊದಲು ಪ್ರಾತಸ್ಯ ಕೊಡಬೇಕು ಎಂದು ಅಡ್ಜೈನರಿ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನ ಮಾಡಿದ್ದಾರೆ. ಆ ಮೀಟಿಂಗಿನಲ್ಲಿ ನಾನು ವಿರೋಧಿಸಿದ್ದೇನೆ. ಇದಾದನಂತರ ಹಾಸನ ಜಿಲ್ಲೆಯ ವಿಧಾನ ಸಭಾಸದಸ್ಯರಾದ ಹೊಳೇನರಸೀಪುರದ ವೀರಪ್ಪನವರು, ಕೆ. ಟಿ. ದಾಸಪ್ಪನವರು, ಎಚ್. ಜಿ. ನರಸಿಂಹೇಗೌಡರು, ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎ. ಎಚ್. ರಾಮರಾಯರು ನಾನು ಮತ್ತು ಕೆಲವು ಜನರೂ ಮಾನ್ಯ ಉಪಮಂತ್ರಿಗಳನ್ನು ಕಂಡು, ತಾಲ್ಲೂಕಾಫೀಸಿನ ಬಾಜೂದಲ್ಲಿರತಕ್ಕ ಜಾಗದಲ್ಲಿ N. E. S. ಕಟ್ಟಡಗಳನ್ನು ಕಟ್ಟಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಅರ್ಜಿ ಸಹ ಕೊಟ್ಟಿದ್ದೇವೆ. ವಿಚಾರ ಇನ್ನೂ ಯಾವ ಮಟ್ಟದಲ್ಲಿದೆ ಎಂದು ಗೊತ್ತಾಗಿಲ್ಲ.

ಸರ್ವೆ ನಂಬರ್ 57-58 ರ ಪಕ್ಕದಲ್ಲಿ ಸ್ಮಶಾನವಿದೆ. ಆ ಜಾಗ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಸರ್ವೆ ನಂಬರು 58 ರ ಹೆಸರು ಏನಿದೆ ಎಂದರೆ, ಹಳ್ಳಿ ಕಡೆ ಆತ್ತಿಮರದ ಹೊಲ, ಬೇವಿನ ಮರದ ಹೊಲ ಎಂದು ಕರೆಯುವಂತೆ ಇದಕ್ಕೆ ಚಕ್ಕಳದ ಮಂಡಿ ಹೊಲ ಎಂದು ಹೆಸರಿದೆ. ಈ ಜಮೀನು ನಂಜುಂಡೇಶ್ವರ ಸ್ವಾಮಿಗೆ ಸೇರಿದ್ದು, ರುದ್ರಭೂಮಿ ಅದರ ಪಕ್ಕದಲ್ಲಿಯೇ ಇದೆ.

3-30 P.M.

ಯಾವ ಉದ್ದೇಶದಿಂದ, ಯಾರ ಹೇಳಿಕೆಯಮೇಲೆ ಈ 58ನೆಯ ನಂಬರನ್ನು ತೆಗೆದುಕೊಂಡರೋ ಗೊತ್ತಿಲ್ಲ. ಈ ವಿಚಾರದಲ್ಲಿ ಹಾಸನ ಜಿಲ್ಲಾ ಮುಖಂಡರು ತಮ್ಮ ಉಪಮಂತ್ರಿಗಳ ಆಫೀಸಿಗೆ ನಾವು ಹೇಳತಕ್ಕ ಜಾಗದಲ್ಲಿ ಬಿಲ್ಡಿಂಗ್ ಕಟ್ಟಲು ಅವಕಾಶ ಕೊಟ್ಟಿದ್ದೀರೇ ಆದರೆ, ಅರಕಲಗೂಡು ತಾಲ್ಲೂಕಿನಲ್ಲಿ ಕಾಂಗ್ರೆಸ್ಸಿನ ಹೆಸರೇ ಇರುವುದಿಲ್ಲ, ನಮ್ಮ ಮುಖಂಡರು ಎಲ್ಲಿ ಹೇಳಿದ್ದಾರೋ ಅಲ್ಲೇ ಕಟ್ಟಬೇಕು ಎಂದು Trunk Call ಮಾಡಿದ್ದಾರೆ. ಆದರೆ ಇದನ್ನ ತಾಲ್ಲೂಕ್ ಆಫೀಸಿನ ಹತ್ತಿರವೇ ಕಟ್ಟುವುದರಿಂದ ಸಬ್ ರಿಜಿಸ್ಟ್ರಾರ್ ಆಫೀಸು, ಟ್ರೆಜರಿ, ಪೋಲೀಸ್ ಸ್ಟೇಷನ್, ಸಹಕಾರಿ ಸಂಘ ಎಲ್ಲಾ ಒಂದೇ ಜಾಗದಲ್ಲಿ ಹತ್ತಿರವೇ ಇರುವಂತಾಗಿ ಆ ತಾಲ್ಲೂಕಿಗೆ ಬರತಕ್ಕ ರೈತರು ತಮ್ಮ ಎಲ್ಲಾ ಸರ್ಕಾರೀ ಕೆಲಸಗಳನ್ನೂ ಸುಖವಾಗಿ ಮಾಡಿಕೊಂಡು ಹಿಂತಿರುಗಿ ಹೋಗುವುದಕ್ಕೆ ಬಸ್ ಅನುಕೂಲವೂ ಚೆನ್ನಾಗಿರುತ್ತದೆ. ಆದ್ದರಿಂದ ತಾಲೋಕು ಆಫೀಸು ಪಕ್ಕದಲ್ಲಿಯೇ ಗುದ್ದಲೀ ಪೂಜೆ ಮಾಡಿರತಕ್ಕ ಜಾಗದಲ್ಲಿ ಆಫೀಸನ್ನೂ, ಪ್ಲೀಡರ್ ಶ್ರೀಕಂಠಯ್ಯನವರ ಸರ್ವೆ 3/2ನೆಯ ಜಮೀನಿನಲ್ಲಿ ಸ್ಟಾಫ್ ಕ್ವಾರ್ಟರ್ಸನ್ನೂ ಕಟ್ಟಬೇಕು. ಮಾಚಗೌಡನಹಳ್ಳಿ ಸರ್ವೆ ನಂಬರ್ 58ನೆಯ ಜಾಗ 1¼ ಮೈಲಿ ದೂರವಾಗಿರುತ್ತದೆ. ಇದರಲ್ಲಿ ಕಟ್ಟಡ ಕಟ್ಟಲು ಸ್ಥಳ ಯೋಗ್ಯವಾಗಿಲ್ಲ. ಆದ್ದರಿಂದ ತಾಲೋಕಿನ ಆಫೀಸು ಪಕ್ಕದಲ್ಲಿಯೇ ಕಟ್ಟಬೇಕಾಗಿ ಅರಿಕೆ ಮಾಡಿಕೊಳ್ಳುವುದರ ಮೂಲಕ ಅಭಿಪ್ರಾಯಪಡುತ್ತೇನೆ. ಆದರೆ, ಈ ಡೆಪ್ಯುಟಿ ಕಮಿಷನರು ಬಂದಮೇಲೆ ಇವರು ಅರಕಲಗೂಡು ತಾಲ್ಲೂಕಿಗೆ ಸೇರಿದ ಹನ್ಯಾಳು ಗ್ರಾಮದಲ್ಲಿ ಅರ್ಧ ಕೆಲಸವಾಗಿದ್ದ N.E.S. ಕಟ್ಟಡವನ್ನು ರುದ್ರಪಟ್ಟಣಕ್ಕೆ ಬದಲಾಯಿಸಿದ್ದರು. ಹನ್ಯಾಳು ಗ್ರಾಮದವರು ಡಿವಿಜ್ ಕಮಿಷನರನ್ನು ನೋಡಿ ಸ್ಥಳ ಪರೀಕ್ಷೆಮಾಡಿದನಂತರ ಪುನಃ ಹನ್ಯಾಳುಗ್ರಾಮಕ್ಕೆ ಡಿವಿಜ್ ಕಮಿಷನರು ಕಟ್ಟಡವನ್ನು ವರ್ಗ ಮಾಡಿದರು. D. C. ಯವರು—ಅವರಿಗೇನು ಹಾರ ಹಾಕಲಲ್ಲವೋ ಅಥವಾ ನಿಂಬೆ ಹಣ್ಣು ಕೊಡಲಲ್ಲವೋ ಗೊತ್ತಿಲ್ಲ-ಅಂತು ಅವರು ಹೀಗೆಂದು ಹೇಳಿ N.E.S.ನ V.L.W. ಕ್ವಾರ್ಟರ್ಸನ್ನು ಬೇರೆ ಗ್ರಾಮಕ್ಕೆ ಬದಲಾಯಿಸಿದರು. ತಾವು ಅಂದರೆ ಉಪಮಂತ್ರಿಗಳು, ಅಲ್ಲಿಗೆ ಬಂದಿದ್ದರೂ ಈ ವಿಷಯದಲ್ಲಿ ಇನ್ನೂ ಮೈಮನಸ್ಯ ಹೋಗಿಲ್ಲ. ಸಾಮಾನು ತುಂಬುವುದಕ್ಕೆ ರುದ್ರಪಟ್ಟಣಕ್ಕೆ ಹೋದಾಗ ಇನ್ನೂ ನಂದರ್ಭ ಬಹಳ ಬಿಗಡಾಯಿಸಿತು. ಕೊನೆಗೆ ಕೆಲವರ ಸಮಾಧಾನದಿಂದ ಸಾಮಾನನ್ನು ತರಲಿಲ್ಲ. ಹೀಗೆಲ್ಲಾ ಆಗಿರುವುದನ್ನು ನೋಡಿದರೆ ನಿಮಗೆ ಅರ್ಥವಾಗುತ್ತದೆ. ಮುಂಚೆ ಅರಕಲಗೂಡಿನಲ್ಲಿ ಐದು ವರ್ಷದ ಹಿಂದೆ ಬಿಲ್ಡಿಂಗ್ ಕಟ್ಟುವುದಕ್ಕೆ ಯಾರೂ ಆ ಜಾಗವನ್ನು ಕೇಳಿರಲಿಲ್ಲ. ಆವರೇ ಆಫೀಸಿನ ಜಾಗ, ಸರ್ವೆ 3/2ನೆಯ ಜಮೀನು ಇದೆಲ್ಲವನ್ನೂ ಸರ್ಕಾರಿ ಕಟ್ಟಡಗಳನ್ನು ಕಟ್ಟಲು ನಿರ್ದರ ಮಾಡಿಕೊಂಡಿದ್ದುದಕ್ಕೆ ಡೆಪ್ಯುಟಿ ಕಮಿಷನರು ಹೀಗೆ ಸ್ವೇಚ್ಛಾವರ್ತನೆಯಿಂದ ನಡೆಯುತ್ತಿರುವುದನ್ನು

(ಶ್ರೀ ಪುಟ್ಟೇಗೌಡ)

ನೋಡಿದರೆ ಅಲ್ಲಿನ ಜನರಿಗೆ ಬಹಳ ಅನಾನುಕೂಲ ವಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ಜಿಲ್ಲೆಯಲ್ಲಿರುವ ಎಂಟು ಲಕ್ಷ ಜನರೂ ಅವರನ್ನು ಡೆಪ್ಯುಟಿ ಕಮೀಷನರ್ ಎಂದೇ ಭಾವಿಸುವುದಿಲ್ಲ. ಕೋರ್ಟಿನಲ್ಲಿ ಹೋಗಿ Evidence ಅಪರಾಧಿ ಯಾಗಿ ಕೂಡ ಕೊಟ್ಟಿದ್ದಾರೆ. ಹಾಸನ ಜಿಲ್ಲೆಯಲ್ಲಿ ನವಾಬಗಿರಿ ನಡೆಯುತ್ತಿದೆ. Note ಹಾಕುವ ವರೊಬ್ಬರು D.C., ರುಜು ಮಾಡುವವರೊಬ್ಬರು D.C., ಇಂಥವರನ್ನು ಹಾಕಿ ಹಾಸನದ ಜನರಿಗೆ ತುಂಬ ಅನಾನುಕೂಲವಾಗಿದೆಯೆಂದು ಹೇಳಬೇಕಾಗಿದೆ, ಆದ್ದರಿಂದ ಊರಿನಲ್ಲೆಲ್ಲಾ ವೈಮನಸ್ಯ ಕಟ್ಟಿ ಕೊಂಡು ವಾಸಮಾಡಬೇಕಾಗಿದೆ. ಆದಷ್ಟು ಜಾಗ್ರತೆ ಈ ಅಡಳಿತವನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ N.E.S. ವಿಚಾರದಲ್ಲಿ ಎರಡೇ ಮಾತುಗಳನ್ನು ಹೇಳಬಯಸುತ್ತೇನೆ. N.E.S. ಕಮಿಟಿಯೆಲ್ಲಿದೆಯೋ ಅಲ್ಲಿ ಯಾವಕಡೆ ಗಾಡಿ ಹೊಡೆಯಬೇಕೆಂದು ಕೂಡ ಗೊತ್ತಿಲ್ಲದಿರುವಂಥ ಜನರನ್ನು ಹತ್ತು ಹತ್ತು ಹಳ್ಳಿಗೆ ಒಬ್ಬರಂದು Village Worker ನೇಮಿಸಿ, ಅವರಿಗೊಂದು ಕಾರು ಬೇರೆ ಕೊಟ್ಟಿದ್ದೀರಿ. ಊಟಕ್ಕೆ ಹೋಗಬೇಕಾದರೆ ಕಾರು, ಹಳ್ಳಿಯಕಡೆ ಹೋಗಬೇಕಾದರೆ ಕಾರು, ಸಿನಿಮಕ್ಕೆ ಕಾರು, ನಂಟರ ಮನೆಗೆ ಕಾರು, ತಿಂಡಿಗೆ ಹೋದರೂ ಕಾರು, ಮತ್ತೆ ಊಟಕ್ಕೆ ಹೋದರೂ ಕಾರು—ಹೀಗೆ ನಡೆಯುತ್ತಿದೆ ಅವರ ಕೆಲಸ. ಅಲ್ಲದೆ ಈ B.D.O.ಗಳಿಗೆ ಬಹಳ ಹೆಚ್ಚಿನ Powers ಕೊಟ್ಟಿದ್ದೀರಿ. ಅವರು ತಮ್ಮದೇ ದೊಡ್ಡ ಹುದ್ದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಯಾರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೂ ಅವರಿಗೆ ಆಗದು. ಇವರು ಮಾಡುವ ಕೆಲಸವೋ ದೇವರಿಗೇ ಗೊತ್ತು. ಇದೇ ರುದ್ರಪಟ್ಟಣದ ಹತ್ತಿರ ಹನ್ಯಾಳು ಗ್ರಾಮಕ್ಕೆ ಹೋಗುವ ದಾರಿಯಲ್ಲಿ culvert ಕಟ್ಟಿದ್ದಾರೆ. 1,500 ರೂಪಾಯಿನ ಬಿಲ್ ಹಾಕಿದ್ದಾರೆ. ಕೆಲಸ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ಗುರುತು ಹಚ್ಚಿಕೊಂಡು ಪರಿಶೀಲನೆ ಮಾಡಬೇಕು. ಹೀಗೆ ಸಣ್ಣ ಜನರಿಗೆ ದೊಡ್ಡ ಹುದ್ದೆ ಕೊಟ್ಟು ಅವರು ಸ್ವೇಚ್ಛೆಯಿಂದ ವರ್ತಿಸುವುದನ್ನು ತಾವು ಪರಿಶೀಲನಬೇಕೆಂದು ಹೇಳುತ್ತೇನೆ. ತಾವು ನಮ್ಮ ತಾಲ್ಲೂಕಿಗೆ ಬಂದಾಗ ಇದನ್ನು ಮುಖ್ಯವಾಗಿ ನೋಡಬೇಕು. ಕೆಲಸ ಸರಿಯಾಗಿಲ್ಲವೆಂದು Certificate ಕೊಟ್ಟಿರುವದು ನನಗೆ ಜ್ಞಾಪಕವಿದೆ. ಒಟ್ಟಿನಲ್ಲಿ N.E.S. ಧ್ಯೇಯ ಸಾಧನೆಗಿಂತಲೂ ಗ್ರಾಮಗಳಲ್ಲಿ ಪಾರ್ಟಿ ವೈಷಮ್ಯಗಳು ಅಭಿವೃದ್ಧಿಯಾಗುತ್ತವೆ ಎಂದು ವಿಷಾದದಿಂದ ಹೇಳಬಯಸುತ್ತೇನೆ.

ಶ್ರೀ ಜೆ. ಪಿ. ಮಲ್ಲಾರಾಧ್ಯ (ನಂಜನಗೂಡು).—ಮಾನ್ಯಮಂತ್ರಿಗಳು ಸರ್ಟಿಫಿಕೇಟ್ ಕೊಟ್ಟಿದ್ದಾರೆಯೇ?

ಶ್ರೀ ಪುಟ್ಟೇಗೌಡ.—ಹೇಳುತ್ತೇನೆ, ಆಮೇಲೆ.

ಈ ಬಿ.ಡಿ.ಓ.ಗಳು ಒಂದು ಊರಿನಿಂದ ಇನ್ನೊಂದು ಊರಿಗೆ ತಮ್ಮ ಕೈಕೆಳಗಿನ ಅಧಿಕಾರಿಗಳು ವರ್ಗ ವಾಗಿ ಹೋದಾಗ ಅವರ Conduct Bookನ್ನು ಯಾರು ಬರೆಯಬೇಕೆಂಬುದನ್ನು ನೋಡಬೇಕು. ಸಬ್ ಡಿವಿಜ್ ಆಫೀಸರು ಬರೆಯುವ ಬದಲು B.D.O. ರವರೇ ಬರೆದಿರತಕ್ಕದ್ದನ್ನು ನಾನು ನೋಡಿದ್ದೇನೆ. Conduct Bookನ್ನು ಬರೆದುಕೊಂಡಿರುವ ಸಂದರ್ಭ ಗಳನ್ನು ನೋಡಿದ್ದೇನೆ. ಅವರಿಗೇ ಈ Power ಇದೆಯೋ ಎಂಬುದನ್ನು ತಾವು ಪರಿಶೀಲನೆಮಾಡ ಬೇಕು. ಮತ್ತು ತಾಲ್ಲೂಕ್‌ಆಫೀಸ್ ಹತ್ತಿರ ಶ್ರೀಪ್ಲೀಡರು ಶ್ರೀಕಂಠಯ್ಯ ಅವರು ಮುಫತ್ತಾಗಿ ಕೊಟ್ಟಿರುವ ಜಾಗದಲ್ಲಯೇ ಸ್ಟಾಫ್ ಕ್ವಾರ್ಟರ್ಸ್ Building ಕಟ್ಟಬೇಕೆಂದು ಒತ್ತಿ ಹೇಳುತ್ತಾ ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆ ಗಳನ್ನು ಸಲ್ಲಿಸುತ್ತೇನೆ.

* Sri G. ANNA RAO (Afzalpur).—Sir, I should like to offer some of my suggestions about the working of the N.E.S., C.D. and P.I.D. projects. In the first instance, I find that the spirit which pervades this movement is of self-help and co-operation. In the countries which are ruled by dictators or in other words in totalitarian countries, the co-operation of the people is commandeered by the Government itself. But in democratic countries, the case is quite the reverse. It is the duty of the Government in democratic countries to take the co-operation and collaboration of the people voluntarily and this is a very difficult process which it is the duty of the Government to propagate and to reach the hearts of the people and thus change them completely. We see, Sir, that it is not the creation of some material assets that counts so much, but it is the development of the people themselves, the change in the psychology of the people that is much needed in our country. But I think, Sir, we have not succeeded in that so far, because community work is there by way of contribution of labour, by way of cash and in other ways. The people have no doubt contributed something to the development of this country, but there is no psychological develoment so far leading to the progress of the community itself. Community work is very different from community development and so it should not suffice only to build some material assets, but at the same time there should be a psychological change and that psychological change has not come so far. Now, as I see, we have got about 27 C.D. blocks, 71 N.E.S. blocks and 20 P.I.D. (Post Intensive Development) Blocks in our State. In our State we have got about 25,800 villages and of those villages, we have been able to cover about 13,437, that is to say, 51·9 per cent of the villages have been covered so far. Still

there remain 49 per cent of the villages to be covered. In this connection, I should like to bring to the notice of the Government that the coverage, as mentioned in the Mysore State map brought out by the Statistical Department, is somewhat fallacious. Because the villages which have been shown to be covered are really not covered, in as much as— (Interruption)-I am speaking generally. Take for instance, the N.E.S. blocks, the C.D. or P.I.D. blocks. I must say that the benefits are not distributed equally among the villages. In the N.E.S. or C.D. blocks, what happens is, some 20 villages are covered and about 80 villages are uncovered.

It is very strange that the Community Project administration should include a village merely on the ground that a single farmer has been given taccavi loan for sinking a well. If any individual is benefited in a village, could the C.P. administration assume that the whole village is covered under the NES or CP Scheme? Therefore, it is very necessary that the distribution of benefits should be equal. On the contrary, what we find now is that the distribution of benefits is unequal. If this is the pace of development, can we hope to cover all the villages by the end of the Second Five-Year Plan? That would not be possible. I would therefore suggest that the period for covering all the villages under these projects should be extended by at least three years or more. We should also ensure that the benefits accruing to the people are designed to change the psychological outlook of the people. I will illustrate my point. Suppose a particular village is given improved seeds. The people in that village use it for a particular year and discontinue it in the following years. Would such a thing achieve any result? Therefore it is very necessary that the approach of the people, their traditional way of thinking, is changed, so that what is given to them now is not washed away in future years. Such an achievement is possible only if the people change their practices in all spheres of activity, may it be in the agricultural or health field. We should drive home to the villager the need to alter the pattern of life through improved practices and unless this is done, I am afraid, our attempts would not bear fruits.

The present allotment of funds for the various NES, CD and PID projects are not adequate. The money not spent within the three-year period should be retained and should be carried over to the succeeding years. For the PID schemes, the sum of Rs. 2 lakhs now provided is paltry, because all the villages are not covered; only the villages on the road side are covered This should not be the case, since our aim should be to cover all the villages.

The Planning Commission has set up an Evaluation Board and it has given its report. We have no such body at the State level in our State. We should set up an *ad hoc* body to examine the results of our efforts. It is not enough that we sit in this Assembly and declare that so many villages have been covered and that so much money has been spent. We must set up an *ad hoc* body to evaluate the achievements from time to time.

At present we have *ad hoc* advisory bodies at the block level and at the district level. I feel that these bodies should be democratised. At present, the Members are nominated by Government. It is quite essential that all the Panchayats should be brought together at the block level and they should hold indirect elections. Some 20 or 30 members could be elected by the process of indirect election and that body should be entrusted with this work. There should be a reorganisation of the District bodies. At the district level I suggest that we adopt the three-tier system, *i.e.*, the Panchayats, the Panchayat Samitis in a particular block and the District Samiti. These bodies should be able to effectively co-ordinate and carry out the various activities.

We should have BDOs, who have not served in the Revenue Department, because the Revenue Department has an authoritarian outlook, which is detrimental to the working of the Community Project administration. The officers should be development-minded. They should be trained in extension methods.

(SRI G. ANNA RAO)

The Collector should function as a Development and not Revenue Officer. An additional Collector should be appointed so that he will look after all the revenue work and the Collector should be called District Development Officer and not Deputy Commissioner or Collector.

Sri RAMAKRISHNA HEGDE.—Even now he is called the Deputy Development Commissioner.

Sri G. ANNA RAO.—But the word 'Commissioner' should go. He should be merely District Development Officer.

The BDOs and Grama Sevikas occupy a pivotal position. We do not have Social Education Officers in the project areas. These three officers should be borne on the cadre of the Community Project administration and not on the State cadre. There are various Extension Officers who think that they belong to the parent department and are only technical officers. This mentality should go.

They should think that they are Extension Officers. And what is 'Extension'? 'Extension' means improvement of villages. Fifty years ago in America this work was started. Three cadres were created of graduates who took training in extension methods. The lady graduates went to do work among the womenfolk and the men graduates went to work in the Men's Clubs. They have done a great deal of service in the extension methods. What I want to emphasise is that that mentality should come here because what we have seen here is that the rural people have suffered because of the urban mentality of the officers and that is the main hitch. This mentality should go so that they may do some good to the villages. So, I appeal to the Government to look into all these matters and do some good to the villages because the community project administration has come into existence with the sole object of doing away with whatever difference we find in the rural parts and urban parts. In Japan and America what we see is that all the amenities which are available in the cities are also made available to the villages. Therefore, this is a very important task of the Government and the Community Project Administration has to to be toned up so that it will result in good to the villages.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೆ, ಈದಿನ ನಮ್ಮ ಮುಂದಿರುವ 40ನೆಯ ಡಿಮ್ಯಾಂಡಿನಲ್ಲಿ 2,08,97,000 ರೂಪಾಯಿಗಳನ್ನು ಸರ್ಕಾರದವರು 1958-59ನೆಯ ಸಾಲಿಗೆ ಖರ್ಚು ಮಾಡಬೇಕೆಂದು ಕೇಳಿದ್ದಾರೆ. ನಿಜವಾಗಿಯೂ ಇವರ ಖರ್ಚುಮಾಡುವ ಜನರೆ! ಈ ಇಲಾಖೆ National Enemy No 2 ಎಂದು ನನಗನ್ನಿಸುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು Enemy No. 1 ಎಂತಲೂ ಕಮ್ಯುನಿಸ್ಟರನ್ನು Enemy No. 2 ಎಂತಲೂ ಕರೆದಿದ್ದಾರೆ. ನಾನಾದರೋ ಇದು ಸಮಾಜಕ್ಕೆ ಎರಡನೆಯ ಶತ್ರು ಎಂದು ಭಾವಿಸುತ್ತೇನೆ. ಇಷ್ಟು ಹಣವನ್ನು ಏನೋ ಒಂದು ಉದಾತ್ತ ಧ್ಯೇಯವನ್ನಿಟ್ಟುಕೊಂಡು, ಹಳ್ಳಿಯ ಜನರನ್ನು ಅಭಿವೃದ್ಧಿಮಾಡಬೇಕು, ಆ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು, ಅವರಲ್ಲಿ ಹೊಸ ರಕ್ತವನ್ನು ತುಂಬಿ ಒಳ್ಳೆಯ ಜನರನ್ನಾಗಿ ಮಾಡಬೇಕು ಎಂದು ಹೊರಟಿದ್ದಾರೆ. ಆದರೆ ಆದೆಲ್ಲವೂ ಸತ್ಯಕ್ಕೆ ದೂರವಾಗಿದೆ ಎಂದು ಭಾಸವಾಗುತ್ತದೆ. ಹಿಂದೆ ಇದೇ ಸಭೆಯಲ್ಲಿ ಉತ್ತರ ಹೇಳುತ್ತಾ ಮುಖ್ಯ ಮಂತ್ರಿಗಳು ಶ್ರೀ ಬೋರಣ್ಣ ಗೌಡರಿಗೆ ಕೆಲವು ವಿವರಗಳನ್ನು ಹೇಳಿದ್ದಾರೆ. ಆ ಸ್ಥಳದಲ್ಲಿರುವ ಕೇಂದ್ರದಲ್ಲಿ ಎಷ್ಟು ಕೆಲಸವಾಗಿದೆ ಎಂದರೆ, ಹನ್ನೊಂದು ಸಾವಿರ ರೂಪಾಯಿನ ಕೆಲಸಮಾಡುವುದಕ್ಕೆ ಹದಿನಾಲ್ಕು ಸಾವಿರ ರೂಪಾಯಿನ ಪೆಟ್ರೋಲ್ ಖರ್ಚುಮಾಡಿದ್ದಾರೆ. ಇಷ್ಟು ಕೋಟಿ ರೂಪಾಯಿ ಖರ್ಚುಮಾಡಿ, ಇಷ್ಟು ಜನ ಸೋಷಿಯಲ್ ವರ್ಕರ್ಸ್, ವಿಲೇಜ್ ಲೆವೆಲ್ ವರ್ಕರ್ಸ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ಮುಂತಾದವರನ್ನೆಲ್ಲಾ ನೇಮಕಮಾಡಿದ್ದರೂ ಮುಕ್ಕಣ್ಣಪ್ಪ ಬಯ್ಯುತ್ತಾರೆ, ಇದೇನು ಎನಿಸಬಹುದು ಸರ್ಕಾರದವರಿಗೆ. ಆದರೆ ಇಷ್ಟು ಭಾರಿ ಹಣವನ್ನು ಖರ್ಚುಮಾಡಿ ಜನರಿಗೆ ಪ್ರತಿಫಲ ದೊರೆತಿದೆಯೆ ಎಂದರೆ, ಏನೂ ಇಲ್ಲ. ಎಮ್ಮೆ ಎಂಥ ಕರುಹಾಕಿತು ಎಂದರೆ, ಕಣ್ಣು ಕಾಲು ಇಲ್ಲದೇಯಿರುವ ಕರುವನ್ನು ಹಾಕಿದೆ ಎಂದು ಹೇಳುವ ಹಾಗಾಗಿದೆ! ಇಷ್ಟು ದೊಡ್ಡ ಸಂಸ್ಥೆ ದೇಶಕ್ಕೆ ಏನು ಮಾಡಿದೆ ಎಂದರೆ, ಬರಿಯ ಜೀಪ್‌ಗಳಲ್ಲಿ ಕುಳಿತು ಕೊಂಡು ಓಡಾಡುವುದು, ಡ್ರೈವರುಗಳೆನಿಸುತ್ತಾರೆ, ಅವರ ಕೈಯಲ್ಲಿ ಜೀಪ್‌ಗಳಿವೆ ಎಂದು ಹೇಳಬೇಕಾಗಿದೆ. ಚಿಕ್ಕನಾಯಕನಹಳ್ಳಿಯ ದಾರಿಯಲ್ಲಿ ಒಂದು ರಸ್ತೆಯಿದೆ; ಅದು ನಮ್ಮಪ್ಪ ಅಥವ ತಾತನ ಕಾಲದಿಂದಲೂ ಇದ್ದ ರಸ್ತೆ. ಅದಕ್ಕೆ ಈಗ ಎಕ್. ಇ. ಎಸ್. ರಸ್ತೆ ಎಂದು ಬೋರ್ಡ್ ಇದೆ. ನಾಗವಳ್ಳಿ ಬ್ಲಾಕ್ ಮಾಡಿದರು, ಎಷ್ಟೋ ಲಕ್ಷ ರೂಪಾಯಿ ಖರ್ಚು ಮಾಡಿದರು. ಅವರು ಹೇಳಿದ ತತ್ವದ ಮೇಲೆ, ಉದ್ದೇಶದ ಪ್ರಕಾರ ಮತ್ತು ಜನರು ನಿರೀಕ್ಷಿಸಿದಷ್ಟು ಅದರಿಂದ ಫಲ ಬಂದಿದೆ ಎಂದು ಹೇಳಿದರೆ ಈ ಕೂಡಲೆ ಒಪ್ಪುತ್ತೇನೆ. ದೇವರು ಸೃಷ್ಟಿ ಮಾಡುವುದರಲ್ಲಿ ಕೂಡ ತಗ್ಗುದಿಣ್ಣೆ ಮಾಡಿದ್ದಾನೆ, ಮನುಷ್ಯ ತಪ್ಪು ಮಾಡುವುದಿಲ್ಲವೆ ಎಂದು ಉತ್ತರ ಹೇಳಬಹುದು. ನಾನು ಅದನ್ನು ಒಪ್ಪುವುದಿಲ್ಲ. ಸರ್ಕಾರ ಏನು ಕೆಲಸಮಾಡಬೇಕೆಂದಿದೆಯೋ ಅದನ್ನು ಸರಿಯಾಗಿ ರೈತನಿಗೆ ಅನುಕೂಲವಾಗುವ ಹಾಗೆ ಮಾಡಲಿ. ಆದರೆ ಹಾಗೆ ಮಾಡುವುದಿಲ್ಲ; ಕೆಲಸವಿಲ್ಲದೆ ಇರುವ ಜನರಿಗೆ, ಪಬ್ಲಿಕ್

ನರ್ಸಿಸ್ ಕಮಿಷ್ ಮೂಲಕ ಕೆಲಸಗಳನ್ನು ದೊರಕಿಸಿ ಕೊಡಲು ಮಾಡಿದ್ದಾರೆಯೇ ಹೊರತು ಬೇರೆ ಉದ್ದೇಶ ವಿಲ್ಲ. ಉದಾಹರಣೆಗೆ, ಗುಬ್ಬಿಗೆ ಮೊನ್ನೆತಾನೇ ರಾಷ್ಟ್ರೀಯ ವಿಸ್ತರಣಾ ಕೇಂದ್ರವನ್ನು ಕೊಟ್ಟಿದ್ದಾರೆ. ಅದು ನನ್ನ ಕ್ಷೇತ್ರ. ಸರ್ಕಾರ ಅಂಥಾ ಲಜ್ಜಾಸ್ಪದವಾದ ಕೆಲಸವನ್ನು ಮಾಡಬಾರದು ಎಂದು ನನಗನ್ನಿಸುತ್ತದೆ. ಅಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಅಕೌಂಟ್ಸ್ ಅಧಿಕಾರಿಗಳನ್ನು ಕಂಡರೆ ಹೆದರುತ್ತಾರೆ. ಇನ್ನೊಬ್ಬ ಅಧಿಕಾರಿ ಮತ್ತೊಬ್ಬ ಅಧಿಕಾರಿಯನ್ನು ಕಂಡರೆ ಹೆದರುತ್ತಾನೆ. ಈಗ ತಾನೇ ದಿಗ್ಬಿ ತೆಗೆದುಕೊಂಡು ಪರೀಕ್ಷೆ ಪಾಸು ಮಾಡಿಕೊಂಡು ಬಂದಿರುವವರನ್ನು ಅಲ್ಲಿ ನೇಮಕಮಾಡಿಕೊಂಡಿದ್ದಾರೆ. ಗ್ರಾಮ ಕೈಗಾರಿಕೆ ಸಹಕಾರ ಸಂಘಗಳ ಇನ್‌ಸ್ಪೆಕ್ಟರ್ರಿದ್ದರೆ, ಅವರಿಗೆ ಕೆಲಸ ಗೊತ್ತಿಲ್ಲ. ವಿಲೇಜ್ ಲೆವಲ್ ವರ್ಕರ್ಸ್ ಎಂದರೆ, ಗ್ರಾಮಗಳನ್ನು ನಮ ಮಾಡುವವರು ಎಂದರ್ಥವಾಗುತ್ತದೆ. ಇವರಿಲ್ಲದಿದ್ದರೂ ಇನ್ನು ಹತ್ತು ಭೂಕಂಪವಾದರೆ ಹಳ್ಳಿಗಳೆಲ್ಲವೂ ನಮವಾಗುತ್ತವೆ, ನೆಲ ನಮವಾಗುತ್ತದೆ. ಈ ವಿಲೇಜ್ ಲೆವೆಲ್ ವರ್ಕರ್ಸ್ ಏನು ಮಾಡುತ್ತಿದ್ದಾರೋ ನನಗಂತೂ ತಿಳಿಯುವುದಿಲ್ಲ. ಅವರಿಗೆ ಕನ್ನಡದಲ್ಲಿ ಪತ್ರ ಬರೆಯುವುದಕ್ಕೆ ಗೊತ್ತಿಲ್ಲ, ಇಂಗ್ಲಿಷ್ ಅರ್ಥವಾಗುವುದಿಲ್ಲ. ಇವರೇನಿದ್ದರೂ ಊರು ಊರಿಗೆ ಹೋಗಿ ಅಲ್ಲಿ ಎಷ್ಟು ಕೋಳಿಗಳಿವೆ, ಎಷ್ಟು ಕುರಿಗಳಿವೆ, ಎಷ್ಟು ದನಗಳಿವೆ, ಎಷ್ಟು ರೊಪ್ಪಗಳಿವೆ ಮುಂತಾದ್ದನ್ನು ಬರೆದುಕೊಂಡು ಬರುವುದು. ಈ ಕೆಲಸಗಳನ್ನಾದರೂ ಸರಿಯಾಗಿ ಮಾಡುತ್ತಾರೆಯೆ ಎಂದರೆ ಅದೂ ಇಲ್ಲ. ನೀವು ಏನು ಕೆಲಸಮಾಡುತ್ತೀರಿ ಎಂದು ಕೇಳಿದರೆ, ಸರ್ಕಾರದವರು ಕಳುಹಿಸಿದ್ದಾರೆ ಎಂದು ಹೇಳುತ್ತಾರೆ. ಆ ಹಳ್ಳಿಗಳಲ್ಲಿರುವ ಸ್ಕೂಲು ಮೇಷ್ಟ್ರುಗಳೊಡನೆ ಸೇರಿಕೊಂಡು ಊರಿನಲ್ಲಿ ಪಾರ್ಟಿಗಳನ್ನು ಕಟ್ಟುವ ಕೆಲಸ ಮಾಡುತ್ತಾರೆ. ಅವರವರು ಜಗಳ ಮಾಡಿದರೆ ಅವರನ್ನು ಕೋರ್ಟಿಗೆ ಕಳುಹಿಸುತ್ತಾರೆ ಈ ಗ್ರಾಮ ಸುಧಾರಕರು. ಹೀಗೆ ದೇಶದ ಇಷ್ಟು ಭಾರಿ ಹಣವನ್ನು ಯಾವ ಉದ್ದೇಶದಿಂದ ಖರ್ಚು ಮಾಡುತ್ತಿದ್ದಾರೋ ಅದು ನಿಷ್ಪಲವಾಗಿದೆ. ಆದುದರಿಂದ ಈ ವಿಲೇಜ್ ವರ್ಕರ್ಸ್ ಅಥವ ವಸೂಲ್ ಬಾಜಿಗಳ ನೇಮಕವನ್ನು ನಿಲ್ಲಿಸಿ ತರುಣರಿಗೆ ಸರಿಯಾದ ತರಪೇತು ಕೊಟ್ಟು ಕೆಲಸ ಮಾಡಿಸಬೇಕು. ನಾವು ಮುಂಡ್ಕದಲ್ಲಿ ತರಪೇತು ಕೊಟ್ಟಿದ್ದೇವೆಂದು ಸರ್ಕಾರದವರು ಹೇಳಬಹುದು. ಇದು ಹೇಗಿದೆಯೆಂದರೆ, ಹಳ್ಳಿಗಳಲ್ಲಿ ಬೈಲಾಟಗಳನ್ನಾಡುವುದಕ್ಕೆ ಒಂದು ತಿಂಗಳು ಪ್ರಾಕ್ಟೀಸ್‌ಮಾಡಿ ಸತ್ಯಹರಿಶ್ಚಂದ್ರ ಮುಂತಾಗಿ ಆಡಿಸುತ್ತಾರೆ; ಹಾಗಾಗಿದೆ ಈ ತರಪೇತು.....

ಶ್ರೀ ಎಂ. ಕೆ. ಬೊಮ್ಮೇಗೌಡ.—ಸರಿಯಾದ ತರಪೇತು ಎಂದು ಹೇಳುತ್ತಾರೆ, ಹಾಗೆಂದರೇನು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನಾದರೂ ಹೇಳುವುದೇನೆಂದರೆ, ಮಂತ್ರಿಗಳ ತಲೆ bankrupt ಆಗಿದ್ದರೂ ಚಿಂತೆಯಿಲ್ಲ, ಅಲ್ಲಿ ಕೆಲಸ ಮಾಡುವವನ ತಲೆ ಸರಿಯಾಗಿರಬೇಕು. ಗ್ರಾಮ ಸುಧಾರಕರ ತಲೆಯಲ್ಲಿ ಬುದ್ಧಿ ಇರಬೇಕು. ಇಲ್ಲಿ ಮಂತ್ರಿಗಳ ಮತ್ತು ಸೆಕ್ರೆಟೆರಿಗಳ ತಲೆಯಲ್ಲಿ ಬುದ್ಧಿ ಇಲ್ಲದಿದ್ದರೂ ಚಿಂತೆಯಿಲ್ಲ,

4 P.M.

ಗ್ರಾಮ ಸುಧಾರಕನ ತಲೆಯಲ್ಲಿ ಬುದ್ಧಿಯಿಲ್ಲದಿದ್ದರೆ ನಮ್ಮ ಕೆಲಸವೆಲ್ಲಾ ತಲೆಕೆಳಗಾಗುತ್ತದೆ. ಗ್ರಾಮಾಂತರಗಳಿಂದ ದೇಶದ ತಳಹದಿಕಟ್ಟಬೇಕು. ಅಲ್ಲಿಂದ ಕಟ್ಟದಿದ್ದರೆ ಏನು ಮಾಡಿದರೂ ಪ್ರಯೋಜನವಾಗುವುದಿಲ್ಲ. ನೀವು ಸರ್ಕ್ಯುಲರ್ ಕಳುಹಿಸಿದರೆ ಮುದರಿಂದ, ಪ್ರಚಾರ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಪ್ರಯೋಜನವಾಗಿಯೂ ಆಗಬೇಕಾದರೆ ಗ್ರಾಮ ಸುಧಾರಕ ಬುದ್ಧಿವಂತನಾಗಿರಬೇಕು. ಅದಕ್ಕೆ ಗ್ರಾಮ ಸುಧಾರಕರನ್ನು ಸರಿಯಾದ ರೀತಿಯಲ್ಲಿ ತರಪೇತು ಮಾಡಿ ಗ್ರಾಮಾಂತರಗಳಿಗೆ ಕಳುಹಿಸಬೇಕು. ನೀವು ಕಳುಹಿಸಿರುವ ಗ್ರಾಮ ಸುಧಾರಕರು ಸ್ಕೌಟ್ಸ್ ದಲ್ಲಿರುವ ಸಿಪಾಯಿಗಳ ಹಾಗೆ, ಅವರಿಗೆ ಸರಿಯಾಗಿ ತರಪೇತು ಮಾಡದಿದ್ದರೆ ಬಂದೂಕ ತೆಗೆದುಕೊಂಡು ಹೊಡಿ ಎಂದರೆ ನಿಮ್ಮ ಕಡೆಗೇ ಹೊಡೆದರೆ ಏನು ಮಾಡುವುದು ? ಸಮಾಜವನ್ನು ಭದ್ರವಾದ ತಳಹದಿಯ ಮೇಲೆ ಕಟ್ಟಬೇಕೆಂಬುದು ಜಯಪ್ರದವಾಗುತ್ತಿಲ್ಲ. ಜಯಪ್ರದವಾಗಬೇಕಾದರೆ ಗ್ರಾಮ ಸುಧಾರಕ ಮೊಟ್ಟಮೊದಲು ಬುದ್ಧಿವಂತನಾಗಿರಬೇಕು, ಉನ್ನತ ಮೇಧಾವಿಯಾಗಬೇಕು. ಈಗ ಅದೆಲ್ಲಾ ಶೂನ್ಯವಾಗಿದೆ. ಯೋಚನೆ ಮಾಡಿ ನಡೆಮಾಡಿ.

ಇನ್ನೊಂದು ಹೆಣ್ಣುಮಕ್ಕಳನ್ನು ಬೇರೆ ಗ್ರಾಮಗಳಿಗೆ ಕಳುಹಿಸಿದ್ದೀರಿ. ಅವರಿಗೆ ಸುಮಾರು 15-16 ವರ್ಷ ವಯಸ್ಸಾಗಿರುತ್ತದೆ. ಅವರಿಗೆ ಅಡಿಗೆಗೆ ಉಪ್ಪು ಹಾಕುವುದಕ್ಕೆ, ಹುಳಿ ಹಿಂಡುವುದಕ್ಕೆ ಬರುವುದಿಲ್ಲ. ಎಷ್ಟು ಜನರಿಗೆ ಅಡಿಗೆ ಮಾಡಬೇಕೆಂದು ತಿಳಿಯುವುದಿಲ್ಲ. ಈಗತಾನೆ ಅವರು ಸ್ಕೂಲು ಕಾಲೇಜುಗಳಿಂದ ಬಂದಿರುವವರು. ಜೀಪ್‌ನಲ್ಲಿ ಕಳುಹಿಸಿದರೆ ಊರು ತುಂಬಾ ಮೆರವಣಿಗೆ ಮಾಡಿಕೊಂಡು ಬರುತ್ತಾರೆ.

Sri G. SIVAPPA.—Does he mean that old ladies must be appointed ?

Sri C. J. MUCKANNAPPA.—No Sir, you must give them proper training. ಒಂದು ದಿವಸ ಒಂಭತ್ತು ಮಕ್ಕಳನ್ನು ಹೆತ್ತತಾಯಿಗೆ ಇಂಥ ಹೆಣ್ಣುಮಕ್ಕಳು ಮಗು ಹೀಗೆ ಹೆರಬೇಕು, ಬಾಣಂತನ ಹೀಗೆ ಮಾಡಬೇಕು, ಸ್ನಾನ ಹೀಗೆ ಮಾಡಬೇಕು ಎಂದು ಹೇಳುತ್ತಿದ್ದರು. ಇದನ್ನು ನೋಡಿದರೆ ನಾಚಿಕೆಯಾಗುತ್ತದೆ. ಆ ತಾಯಿಗಿಂತ ಈ ಹೆಣ್ಣುಮಕ್ಕಳಿಗೆ ತಿಳಿವಳಿಕೆ, ಅನುಭವ ಇದೆಯೇ ? ಬೇಗ ಸ್ವಲ್ಪ ಓದಿ ಸರಿಯಾಗಿ ಅನುಭವವಿಲ್ಲದೆ ಏನೋ ಹೇಳಿದರೆ ಪ್ರಯೋಜನವೇನು ! ಸರಿಯಾಗಿ ಇವರಿಗೆ ಒಂದು ವರ್ಷವಾದರೂ ಟ್ರೈನಿಂಗ್ ಕೊಡಬೇಕಾಗಿತ್ತು. ಟ್ರೈನಪ್ ಮಾಡಿ ಏನು ಮಾಡಬೇಕೆಂಬುದನ್ನು ಹೇಳಿ. ಅದಿಲ್ಲದೆ ಅಡಿಗೆಗೆ ಮೆಣಸಿನಕಾಯಿ ಇಷ್ಟು ಹಾಕಬೇಕು, ಉಪ್ಪು ಇಷ್ಟು ಹಾಕಬೇಕು ಎಂಬುದು ಹೇಗೆ ಗೊತ್ತಾಗುತ್ತದೆ, Better training must be given. ಎಂ. ಬಿ. ಬಿ. ಎಸ್. ಪಾಸು ಮಾಡಿರುವ ಡಾಕ್ಟರು ಬುದ್ಧಿವಂತರಾಗಿರಬಹುದು. ಆದರೆ ಪಾಸು ಮಾಡಿದ ತಕ್ಷಣ ಆಪರೇಷ್ಟ್ ಥಿಯೇಟರಿಗೆ ಆಪರೇಷ್ಟ್ ಮಾಡಲು ಬಿಡುವುದಿಲ್ಲ. ಹಾಗೆಯೇ ಹೊಸದಾಗಿ ಸ್ಕೂಲಿನಿಂದ ಬಂದ ಹೆಣ್ಣುಮಕ್ಕಳಿಗೆ ಸರಿಯಾದ ರೀತಿಯಲ್ಲಿ ತರಪೇತು ಕೊಡದಿದ್ದರೆ ಸಾಕಷ್ಟು ಅವರಿಂದ ಸಹಾಯವಾಗುವುದಿಲ್ಲ. ಆದರಿಂದ ತರಪೇತು ಕೊಟ್ಟು ನ್ಯೂನತೆಯಿರುವುದನ್ನು ಹೋಗಲಾಡಿಸಬೇಕು. ಯಾರಿಂದ ಪುರೋಭಿವೃದ್ಧಿ ದೇಶದ ಬೆಳೆವಣಿಗೆ ನಿರೀಕ್ಷಿಸುತ್ತೀರೋ, ಯಾರನ್ನು ದೇಶದಲ್ಲಿ ನಂದಾದೀಪವೆಂದು ಕರೆಯುತ್ತೀರೋ, ಯಾರಿಂದ ಫಲ ನಿರೀಕ್ಷೆ ಮಾಡತ್ತೀರೋ ಅಂಥ ಸ್ತ್ರೀ ಸಮಾಜ ಬೆಳೆಸಲು, ಒಳ್ಳೆಯ ಪುತ್ರರತ್ನವನ್ನು ಕೊಡುವ ಸಮಾಜ ಬೆಳೆಸಲು, ಒಳ್ಳೆಯ ಹೆಣ್ಣುಮಕ್ಕಳನ್ನು ತಯಾರು ಮಾಡಲು ಯೋಜನೆ ಮಾಡಿ ತರಪೇತು ಕೊಟ್ಟು ಆಕೆಯಿಂದ ದೇಶೋದ್ಧಾರವಾಗುವಂತೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ.

(SRI C. J. MUCKANNAPPA)

ಈಗ ಎಕ್. ಇ. ಎನ್. ಕೊ-ಆಪರೇಷ್ಟ ಆಫೀಸರ್, ಎಕ್ಸ್‌ಟೆಷ್ಟ ಆಫೀಸರ್ ವಿಚಾರ ಹೇಳಿದರು. ಗುಬ್ಬಿಗೆ ಹೋಗಿ ಬೆಳೆಯುವ ಭತ್ತ ಕೊಡಿ ಎಂದರೆ ಎದ್ದು ಭಾಷಣ ಮಾಡುತ್ತಾರೆ ಎಂದು ಹೇಳಿದರೆ ಮಾನ್ಯ ರುದ್ರಪ್ಪನವರಿಗೆ ಕೋಪ ಬರಬಹುದು. ದೊಡ್ಡ ದೊಡ್ಡ ಚಿತ್ರಗಳನ್ನು ಆಚ್ಚು ಹಾಕಿಸಿ ಜಾವಡಿಗಳಲ್ಲಿ ಹಾಕಿದರೆ ಹೆಚ್ಚಾಗಿ ಬೆಳೆಯುತ್ತಾರೆಯೇ ಎಂದು ಡಾ॥ ನಾಗೂರ್‌ರವರು ಹೇಳಿದರು. ಗೊಬ್ಬರ ಕೊಡಿ, ಒಳ್ಳೆಯ ಬೀಜ ಕೊಡಿ, ಎತ್ತು ಕೊಡಿ, ಒಳ್ಳೆಯ ತಳಿಬೆಳೆ ನುವುದಕ್ಕೆ ಅವಕಾಶ ಮಾಡಿ. ಅದು ಬಿಟ್ಟು ಬರೀ ಭಾಷಣ ಮಾಡಿದರೆ ಪ್ರಯೋಜನವೇನು? ಹೊರಗಿ ವರು ನಮ್ಮನ್ನು ಕಂಡರೆ ನಗುತ್ತಾರೆ. ನಿಜವಾಗಿಯೂ ನಮ್ಮ ಸ್ಥಿತಿಗತಿ ನೋಡಿದರೆ ನಾಚಿಕೆಯಾಗುತ್ತದೆ. ರೆಸಿಡೆನ್ಸಿಯಲ್ಲಿ ಹೊರಗಿನಿಂದ ಬರುವ ಗಣ್ಯ ವ್ಯಕ್ತಿಗಳಿಗೆ ಊಟ ಹಾಕಿದರೆ ನಮ್ಮ ರಾಜ್ಯವನ್ನು ರಾಷ್ಟ್ರರಾಜ್ಯ ವೆಂದು ಹೊಗಳುತ್ತಾರೆ. ನಮ್ಮ ಅಧಿಕಾರಿಗಳ ನಂಬ್ಯೆ ವಿಪರೀತವಾಗಿದೆ, ಎಕ್.ಇ.ಎನ್. ಖಾತೆ ಶಿಥಿಲವಾಗಿದೆ. ಅದನ್ನು ರೀ ಓರಿಯೆಂಟ್‌ಮಾಡಿ. ಹೆಸರು ಏನು ಬೇಕಾದರೂ ಇಡಿ. ಬೇಕಾದ ಕೆಲಸವಾಗಬೇಕು, ಜನ ನಿರೀಕ್ಷಿಸುವಷ್ಟು ಫಲ ಬರಬೇಕು. ಇದು ಮುಖ್ಯ. ಶ್ರೀ ಅಣ್ಣಾರಾವ್ ಹೇಳಿದಹಾಗೆ ನಿರೀಕ್ಷೆ ಮಾಡಿರುವ ಕೆಲಸವಾಗಬೇಕು. ನನ್ನ ಕ್ಷೇತ್ರದಲ್ಲಿ ಕೆಲಸ ಪ್ರಾರಂಭವಾಗಿ ವರ್ಷವಾಯಿತು. ಡೆಪ್ಯುಟಿ ಮಿನಿಸ್ಟರು ಬಂದು ನೋಡಬಹುದು, ಅಂಕಿಅಂಶ ಶೇಖರಣೆ ಮಾಡಿಲ್ಲ. ಒಂದು ಸಮಿತಿ ಮಾಡಿದ್ದಾರೆ, ಗುಬ್ಬಿ ಮುನಿಸಿಪಾಲಿಟಿಯಿಂದ ಆರು ಜನರನ್ನು ಆ ಸಮಿತಿಗೆ ಹಾಕಿದ್ದಾರೆ. ನಾವು ಕೊಟ್ಟ ಸೂಚನೆಗೆ ಬೆಲೆಯಿಲ್ಲ. ಮೂರು ಜನ ಕೌನ್ಸಿಲರುಗಳನ್ನು, ಮೂರು ಮಂದಿ ವ್ಯಾಪಾರಸ್ಥರನ್ನು ಗುಬ್ಬಿ ಟೌನ್‌ನಿಂದ ಆ ಸಮಿತಿಗೆ ಹಾಕಿದ್ದಾರೆ. ಹಳ್ಳಿಯವರು ಅಲ್ಲಿ ಎಷ್ಟು ಜನರಿದ್ದಾರೆ? ಆರು ಜನರಲ್ಲಿ ಮೂರು ಜನ ಕಂಟ್ರಾಕ್ಟರುಗಳು. ತುಮಕೂರಿನಲ್ಲೂ ಹೀಗೆಯೇ ಇದೆ. ಅಲ್ಲಿ ಮಾಡಿರುವ ಸಮಿತಿಯಲ್ಲಿರುವವರೆಲ್ಲಾ ನಬ್ ಕಂಟ್ರಾಕ್ಟರುಗಳು. ಹೀಗೆ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವಾಗ ಆ ಕ್ಷೇತ್ರದ ಸದಸ್ಯರನ್ನು ಮತ್ತು ಆಜು ಬಾಜು ಜನರನ್ನು ಕೇಳಬೇಡವೆ? ಈಗ ಚುನಾಯಿಸಿರುವ ಸದಸ್ಯರು ಗೌರವಸ್ಥರೇ ಒಳ್ಳೆಯವರೇ ಎಂದು ಕೇಳುತ್ತಿಲ್ಲ. ಒಂದು ಸಮಿತಿ ರಚನೆಮಾಡಿ ಕೆಲಸ ಮಾಡುವಾಗ ಆ ಕ್ಷೇತ್ರ ಪ್ರತಿನಿಧಿಸುವ ಈ ಸಭೆಯ ಸದಸ್ಯರನ್ನು ಕೇಳಿದ್ದರೆ ಕೀರ್ತಿ ಕದಮೆಯಾಗುತ್ತಿತ್ತೆ? ಶ್ರೀ ಅಣ್ಣಾರಾವ್ ಹೇಳಿದ್ದನ್ನು ನಾನು ಮತ್ತೆ ಹೇಳುತ್ತಿದ್ದೇನೆ. ಮಂತ್ರಿಗಳು ಮತ್ತು ಇತರರು ಎಲ್ಲಾ ವಶೀಲ ಬಾಜಿ ಕೆಲಸಕ್ಕೆ ಇಳಿದಿದ್ದೀರಿ. ಈ ಮಾನ್ಯ ಸಭೆಯಲ್ಲಿರುವ 11 ಜನ ಮಂತ್ರಿಗಳು ಮತ್ತು ಮೂರು ಜನ ಉಪಮಂತ್ರಿಗಳು ವಶೀಲ ಬಾಜಿ ಕೆಲಸಕ್ಕೆ ಇಳಿದಿದ್ದಾರೆ

ಶ್ರೀ ರಾಮಕೃಷ್ಣ ಹೆಗ್ಗಡೆ.—ಡೆಪ್ಯುಟಿ ಕಮಿಷನರು ನಿಮ್ಮನ್ನು ಕೇಳಿ ಮಾಡಲಿಲ್ಲ ಎಂಬುದು ಇಷ್ಟೆಲ್ಲಾ ಟೀಕೆಗೆ ಕಾರಣವೇ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೇಳುವುದರಲ್ಲೇನು ತಪ್ಪಿದೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ತಾಲ್ಲೂಕು ಕಮಿಟಿ ಮಾಡಿಕೊಂಡಿದ್ದಾರೆ. It is a small Congress Committee which is an agent of the Government on behalf of the organisation. ನನಗೆ ಮಾನ್ಯ ಮಂತ್ರಿಗಳಲ್ಲಿ ಬಹಳ ಗೌರವವಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಅವರು ಬಹಳ ಬುದ್ಧಿವಂತರು. ಅವರಿಗೆ ಹೆಚ್ಚಾಗಿ ಹೇಳುತ್ತಿಲ್ಲ. ಅವರು ಮಾಡುವ ಕೆಲಸ, ಆರ್ಡರು ಅಧಿಕಾರಿಗಳಿಗೆ ವಿರೋಧವಾಗಿದೆ.ಮೊದಲು ಅದನ್ನು ಸರಿ ಮಾಡಿ, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಕೆಲಸವೆಲ್ಲವನ್ನೂ ಅಮಲ್ದಾರರಿಗೆ ವಹಿಸಿ. ಅಮಲ್ದಾರರಿಗೆ ಈಗ ಕೆಲಸ ಬಹಳ ಕಡಮೆಯಾಯಿತು. ಅವರು ವಸೂಲಿ ಕೆಲಸ ಮಾತ್ರ ಮಾಡುತ್ತಿದ್ದಾರೆ. ತಾಲ್ಲೂಕಿನಲ್ಲಿ ಬಿ. ಡಿ. ಓ. ಮತ್ತು ಅಮಲ್ದಾರರು ಇಬ್ಬರೂ ಇರುತ್ತಾರೆ. ಅಮಲ್ದಾರರಿಗೆ ಈ ಕೆಲಸ ಕೊಟ್ಟು ವ್ಹಿಪ್ ಮಾಡಬೇಕು. ತಾಲ್ಲೂಕಿಗೆ ಬಿ.ಡಿ.ಓ. ಬಂದರೆ ಅಮಲ್ದಾರರು ಬರುವುದಿಲ್ಲ, ಅಮಲ್ದಾರರು ಬಂದರೆ ಬಿ.ಡಿ.ಓ. ಬರುವುದಿಲ್ಲ. ಆದ್ದರಿಂದ ಬಿ.ಡಿ.ಓ.ಗಳನ್ನು ತೆಗೆದು ಅಮಲ್ದಾರರುಗಳಿಗೇ ಈ ಕೆಲಸ ಕೊಡಿ, ಅವರಿಗೆ ಜೀಪು ಕೊಡಿ, ಅವರೇ ಎಲ್ಲಾ ಕೆಲಸ ಮಾಡಬಲ್ಲರು. ಅಲ್ಲದೆ ಬಿ. ಡಿ. ಓ. ಗ್ರಾಮಗಳಿಗೆ ಹೋದಾಗ ಎಷ್ಟೋ ಕಡೆ ಪಟೇಲ ಶಾನುಭೋಗರಿರುವುದಿಲ್ಲ. ಜನರ ಸಹಕಾರದಿಂದ ಕೆಲಸವಾಗಬೇಕೆಂದು ಶ್ರೀ ಅಣ್ಣಾ ರಾವ್ ಹೇಳಿದರು. ಸರ್ಕಾರ ಹೋಗಿ ಸಹಕಾರ ಸಿಕ್ಕಬೇಕಾದರೆ ರೆವೆನ್ಯೂ ಅಧಿಕಾರಿಗಳಿಗೆ ಈ ಅಧಿಕಾರ ಕೊಡಬೇಕು. ಒಬ್ಬ ಅಧಿಕಾರಿಯಿದ್ದರೆ ಅದರಿಂದ ಕೆಲಸ ಚೆನ್ನಾಗಿ ಆಗುತ್ತದೆ.

ಒಂದು ಊರಿನಲ್ಲಿ ಒಂದು ಹಳ್ಳಿಗೆ ಹೋಗಿದ್ದೆ. ಅಲ್ಲಿ ಪಟೇಲ, ಶಾನುಭೋಗರು ಸಹಕಾರ ಕೊಡುತ್ತಿಲ್ಲ. ಅಲ್ಲಿ ಮನೆಕಟ್ಟಬೇಕಾದರೆ ಅಮಲ್ದಾರರು ಹೇಳಿದರೆ ಮಾಡುತ್ತೇನೆ ಎಂದು ಹೇಳಿದರು. ಬಿ. ಡಿ. ಓ. ಗೆ ಹಾಗೆ ಆರ್ಡರ್ ಮಾಡಲು ಅಧಿಕಾರವಿಲ್ಲ. ಅಮಲ್ದಾರರಿಗೆ ಕಾಗದಪತ್ರಗಳನ್ನು ಬಲ್ಡ್ ಅಪ್ ಮಾಡುವ ಅಧಿಕಾರವಿದೆ. ಕೂಡಲು ಇಲ್ಲದೇ ಇರುವ ಮನು ತುರುಬು ನೆನೆಸಿಕೊಂಡ ಎಂಬ ಗಾದೆಯಂತೆ ದುಡ್ಡನ್ನು ಖರ್ಚುಮಾಡುವ ಅಧಿಕಾರವಿದ್ದರೂ ಚಲಾವಣೆ ಮಾಡುವ ಅಧಿಕಾರವಿಲ್ಲ. ಅರ್ಜುನನ ರಥದಲ್ಲಿ ಉತ್ತರನು ಕುಳಿತುಕೊಂಡಂತೆ ಅಮಲ್ದಾರರ ಕೈಲಿ ಈ ಬಿ. ಡಿ. ಓ. ಗಳನ್ನು ಕುಳ್ಳಿರಿಸಿದ್ದಾರೆ. ಬಿ. ಡಿ. ಓ. ಗಳ ಜೊತೆಯಲ್ಲಿ ಅಮಲ್ದಾರರು ಸಹಕಾರಮಾಡಬೇಕು. ಹಾಗೆ ಮಾಡದಿದ್ದರೆ ಉಗ್ರವಾದ ಕ್ರಮಗಳನ್ನು ರೆವಿನ್ಯೂ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳಬೇಕು ಇಲ್ಲದಿದ್ದರೆ ನಿರೀಕ್ಷಣೆಮಾಡಿದಷ್ಟು ಫಲ ದೊರಕುವುದಿಲ್ಲ. ಇನ್ನು ಕೆಲವು ಸ್ಥಳಗಳಲ್ಲಿ ಭಾವಿ ತೆಗೆಸಿದ್ದಾರೆ. ಭಾವಿಗಳು ಎಲ್ಲೆಲ್ಲಿ ಇಡೆಯೋ ಅಲ್ಲಿ ಕುಡಿಯುವುದಕ್ಕೆ ನೀರು ಕೊಟ್ಟಿಲ್ಲ. ಪ್ಲಾಟ್‌ಫಾರಂಇಲ್ಲ. ಆದ್ದರಿಂದ ಉತ್ತಮವಾದ ಭಾವಿಗಳನ್ನು ಕಟ್ಟಿಸಬೇಕು. ಇನ್ನು ರಸ್ತೆಗಳನ್ನು ಮಾಡಿದ್ದಾರೆ. ಜೀಪ್‌ನಲ್ಲಿ ಹೋಗಬಹುದು. ಒಂಬತ್ತು ಅಂಗುಲ ಕಾರಿನಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಮೂರುದಿನಗಳು ಅಲ್ಲಿಯೇ ಉಪವಾಸವಿದ್ದು ಆಮೇಲೆ ಬರಬೇಕಾಗುತ್ತದೆ. ವಿಲೇಜ್ ಕಮ್ಯೂನಿಕೇಷನ್ಸ್ ರಸ್ತೆಗಳು ಹಾಳಾಗಿ ಹೋಗಿವೆ. ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳು ದೊಡ್ಡ ಹೆಸರನ್ನು ಹೊಂದಿದ್ದರೂ ಅವುಗಳಿಂದ ನಿರೀಕ್ಷಿಸಿದಷ್ಟು ಫಲ ಜನತೆಗೆ ದೊರಕಿಲ್ಲ. ಅದಕ್ಕೋಸ್ಕರ ಅವರು ಈಗಲಾದರೂ ಯೋಚನೆಮಾಡಿ ಒಳ್ಳೆಯ ಗ್ರಾಮ ಸುಧಾರಕರನ್ನು ನೇಮಿಸಬೇಕು. ಈ ವಿಚಾರವಾಗಿ ಗ್ರಾಮ ಸೇವಕರು, ಬಿ. ಡಿ. ಓ. ಎಕ್ಸ್‌ಟೆಷ್ಟ ಆಫೀಸರ್, ದೀರ್ಘವಾಗಿ ಯೋಚಿಸಿ ಒಳ್ಳೆಯ ಅನುಭವ ಪಡೆದಿರುವವರನ್ನು ಅಲ್ಲಿಗೆಹಾಕಿ ಅವರ ಅನುಭವದ ತಿರುಳು ಜನಗಳಿಗೆ ಸಿಕ್ಕುವಂತೆ ಮಾಡಿದ್ದಾದರೆ

ಆಗ ಈ ಇಲಾಖೆಗೆ ಬೆಲೆಬರುವ ಹಾಗಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಿಮ್ಮ ತತ್ವಕ್ಕೆ ವಿರೋಧವಾಗಿ ನಡೆಯುವ ಕಮಿಟಿಗಳು ಇವೆ. ಕಂಟ್ರಾಕ್ಟರುಗಳು ಇದ್ದಾರೆ. ನಿಮಗೆ ಬೇಕಾದಂಥ ವಶೀಲಿ ಬಾಜಿಜನ ಇದ್ದಾರೆ. ಅವರನ್ನು ತೆಗೆದು ಹಾಕಿ ಒಂದು ಹೊಸ ಶಕ್ತಿ, ಹೊಸ ಹುರುಪು, ಹೊಸ ಚೈತನ್ಯ ಉಂಟುಮಾಡಿ ಅವರು ಹಣ ಖರ್ಚುಮಾಡುವಂತೆ ತಾವು ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸ್ವಾಮಿ, ಎಕ್. ಐ. ಎಸ್. ವಿಚಾರವಾಗಿ ನಾಲ್ಕು ಮಾತುಗಳನ್ನಾಡ ಬೇಕೆಂದು ನಾನು ನಿಂತಿದ್ದೇನೆ. ನಾನು ಮಾತನಾಡಲು ನಿಂತಾಗಲೇ ವ್ಯವಸಾಯ ಮಂತ್ರಿಗಳು ಹೊರಟುಹೋದರು. ನಮ್ಮ ತಾಲ್ಲೂಕಿನಲ್ಲಿ ಈ ಎಕ್. ಐ. ಎಸ್. ಕೆಲಸ ಬಹುಕಾಲದಿಂದ ಅಂದರೆ ಸುಮಾರು ನಾಲ್ಕು ನಾಲ್ಕೂವರೆ ವರ್ಷಗಳಿಂದ ನಡೆಯುತ್ತಿದೆ. ಎಕ್. ಐ. ಎಸ್. ಬಂದು ಜನತೆಗೆ ಹೆಚ್ಚಿನ ಅನುಕೂಲ ಮತ್ತು ಬಹಳ ಉಪಕಾರವಾಗುತ್ತದೆಂದು ನಾನು ತಿಳಿದುಕೊಂಡಿದ್ದೆನು. ಈ ಮೂರು ವರ್ಷಗಳು ನಮ್ಮ ತಾಲ್ಲೂಕಿನಲ್ಲಿ ಎಕ್. ಐ. ಎಸ್. ವರ್ಕ್ ಮಾಡಿದ್ದಾರೆ. ಅಲ್ಲಿ 60 ಸಾವಿರ ಪಾಪ್ಯುಲೇಷ್ ಇರತಕ್ಕ 100 ಹಳ್ಳಿಗಳನ್ನು ತೆಗೆದುಕೊಂಡು ಕೆಲಸ ಮಾಡಿದರು. ಒಟ್ಟಿನಲ್ಲಿ ತಾಲ್ಲೂಕಿನಲ್ಲಿರತಕ್ಕ ಪ್ರಜಾ ಸಂಖ್ಯೆ ಹೆಚ್ಚು ಕಡಮೆ ಒಂದು ಲಕ್ಷ ಇದೆ. ಇನ್ನೂ ಸುಮಾರು 20 ಸಾವಿರ ಪ್ರಜಾಸಂಖ್ಯೆ ಬಿಟ್ಟುಹೋಗಿದೆ. ಮೊದಲು ಪ್ರಾರಂಭದಲ್ಲಿ ಯಾವ ಪ್ರದೇಶ ಬಿಟ್ಟು ಹೋಗಿತ್ತೋ ಆ ಪ್ರದೇಶದವರು ನಮಗೆ ಎಕ್. ಐ. ಎಸ್. ಕೊಡಬೇಕು ಎಂದು ಬಹಳವಾಗಿ ಅಪೇಕ್ಷೆ ಮಾಡಿದರು. ಎರಡು—ಮೂರು ವರ್ಷಗಳಾದ ಮೇಲೆ ಕೊಟ್ಟರು. ಎಕ್. ಐ. ಎಸ್. ಏರಿಯಾದ ಆಡಳಿತದ ಬಗ್ಗೆ ಕಟುವಾಗಿ ಮಾತನಾಡತಕ್ಕದ್ದು ಸರ್ಕಾರಕ್ಕೆ ಅಷ್ಟು ರುಚಿಸಿದೆಯೋ ಇಲ್ಲವೋ ಗೊತ್ತಿಲ್ಲ. ಆಲ್ ಇಂಡಿಯಾ ಪ್ಯಾಟರ್ನಿನಂತೆ ಇಲ್ಲಿರುವ ಎಸ್ಟಾಬ್ಲಿಷ್‌ಮೆಂಟ್ ಜಾಸ್ತಿಯಾಗಿದೆ. ಅದನ್ನು ಬದಲಾವಣೆ ಮಾಡಬೇಕೆಂದರೆ, ಅದಕ್ಕೆ ಕೇಂದ್ರ ಸರ್ಕಾರದವರ ಅನುಮತಿ ಕೇಳಬೇಕು. "Our hands are tied. We have to work according to the Delhi Plan and whatever the Delhi Government says" ಎಂದು ಹೇಳುತ್ತಾರೆ. ಶ್ರೀ ಮುಕ್ಕಣ್ಣಪ್ಪನವರು ತಾಲ್ಲೂಕ್ ಲೆವಲ್‌ನಲ್ಲಿರತಕ್ಕ ಡೆವಲಪ್‌ಮೆಂಟ್ ಫಂಡ್‌ನ್ನೆಲ್ಲಾ ಖರ್ಚುಮಾಡಿದ್ದಾರೆ, ಆದರೆ ಮಾಡಬೇಕಾದ ಕೆಲಸವನ್ನು ಇನ್ನೂ ಮಾಡಲಿಲ್ಲವೆಂದು ಹೇಳಿದರು. ರೆವಿನ್ಯೂ ಇನ್‌ಸ್ಪೆಕ್ಟರ್, ಅಗ್ರಿಕಲ್‌ಚರಲ್ ಇನ್‌ಸ್ಪೆಕ್ಟರ್, ವೆಟರಿನರಿ ಇನ್‌ಸ್ಪೆಕ್ಟರ್ ರವರಿಗೆ ಅಷ್ಟೊಂದು ಹಣವನ್ನು ಕೊಟ್ಟರೆ, ನ್ಯಾಷನಲ್ ಡೆವಲಪ್‌ಮೆಂಟ್ ಆಕ್ಟಿವಿಟೀಸನ್ನು ಚೆನ್ನಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದನ್ನು ಮಾಡುವುದಕ್ಕೆ our State Government is helpless. ಇಂಡಿಯಾ ಸರ್ಕಾರದವರಿಗೆ ಒಳಪಟ್ಟಂಥಾದ್ದರಲ್ಲಿ ಇದು ಅತಿಮುಖ್ಯವಾದ ಬಾಬು. ಎಕ್. ಐ. ಎಸ್. ಎಂಬುದನ್ನು ಯಾವ ಒಂದು ಆಶಾಭಾವನೆಯಿಂದ ಕೇಂದ್ರ ಸರ್ಕಾರ ಮಾಡಿದೆಯೋ, ಯಾವ ಒಂದು ಉದ್ದೇಶದಿಂದ ಮಾಡಿದೆಯೋ ಆ ಆಶೆ ಮತ್ತು ಉದ್ದೇಶ ಪರಿಪೂರ್ಣವಾಗಿಲ್ಲ. ಹೆಚ್ಚಿನ ಅನಕ್ಕೆ ಜನರಲ್ಲರಬೇಕು. ಅವರಲ್ಲಿ ಹೋಗಿ ಲೋಕಲ್ ಕಂಟ್ರಿಬ್ಯೂಷ್ ವಸೂಲುಮಾಡಬೇಕು. ಇಲ್ಲದೇ ಇದ್ದರೆ ಕಾಲಗತಿಸಿ ಹೋಗುತ್ತದೆ. ಆದರೆ ಏನೊಂದು ಅಪೇಕ್ಷೆ ಇಟ್ಟುಕೊಂಡಿದ್ದೇವೋ ಅದು ನೆರವೇರುವುದಿಲ್ಲ. ಇದರ ಬಗ್ಗೆ ಕಾಂಗ್ರೆಸ್ ಪಾರ್ಟಿಯಿಂದ, ಪಿ. ಎಸ್. ಪಿ. ಸೋಷಿಯಲಿಸ್ಟ್ ಪಾರ್ಟಿಯಿಂದ ಎಷ್ಟೊಳ್ಳೆಷ್ಟ ರಿಪೋರ್ಟ್ ಬರುತ್ತಿದೆ. ಯಾವರೀತಿ ಅವರು ವರದಿ ಮಾಡುತ್ತಿದ್ದಾರೆಂಬುದು ಅದು ಒಂದೂ ಅರ್ಥವಾಗುವುದಿಲ್ಲ. ಪ್ರತಿ ವರ್ಷವೂ ಸೈಟಿಸ್‌ಫ್ಯಾಕ್ಟರಿ ಎಂದು ವರದಿಬರುತ್ತಿದೆ. ಆ ರೀತಿ ಮಾಡಲಿಕ್ಕೆ ನಮ್ಮ ಆಫೀಸರುಗಳು ಚೆನ್ನಾಗಿ ಕಲಿತಿದ್ದಾರೆ. ಅದರಲ್ಲಿ ಸಂಶಯ ಪಡಬೇಕಾದ ಅಂಶವೇನೂ ಇಲ್ಲ. ಮಾನ್ಯ ಸಚಿವರಾದ ಶ್ರೀ ಎಚ್. ಎಸ್. ರುದ್ರಪ್ಪನವರಿಗೆ ಒಂದು ವಿಷಯವನ್ನು ತಿಳಿಸಲು ಇಚ್ಛೈಯುಳ್ಳವನಾಗಿದ್ದೇನೆ. ವಿಲೇಜ್ ಲೆವಲ್ ವರ್ಕರ್ಸ್ ಲೇಡಿ ಸೋಷಿಯಲ್ ವರ್ಕರ್ಸ್, ಲೇಡಿ ವೆಲ್‌ಫೇರ್ ಆಫೀಸರ್ಸ್, ಬಿ. ಡಿ. ಒ. ಗಳು, ಸರ್ವೆ ಇಂಜಿನಿಯರುಗಳು, ಎರಡು ಜೀಪುಗಳು ಇಷ್ಟೆಲ್ಲಾ ಇಂಜೆನ್ಸಿವ್ ಡೆವಲಪ್ ಮೆಂಟಗೋನ್ಸರ ಮತ್ತು ಅಗ್ರಿಕಲ್ಚರಲ್. ಅಸಪೆಕ್ಟಿಗೆ ಹೆಚ್ಚಿಗೆ ಪ್ರೋತ್ಸಾಹ, ಉತ್ತೇಜನಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಹತ್ತು ಹಳ್ಳಿಗಳಿಗೆ ಒಬ್ಬ ವಿಲೇಜ್ ಲೆವಲ್ ವರ್ಕರ್ ಇರುತ್ತಾರೆ. ಅವನಿಂದಲೇ ಆ ಯೋಜನೆನಿಂತಿದೆಯೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. He is the main man. ಪ್ರತಿಯೊಂದು ಹಳ್ಳಿಯಲ್ಲಿಯೂ ಎಷ್ಟು ಸೊಸೈಟಿಗಳನ್ನು ಸ್ಥಾಪನೆ ಮಾಡಿದ್ದಾರೆ, ಸಹಕಾರ ಸಂಘಗಳ ಮೂಲಕ ಪೊಡಿಯಂಟಮ್ಸ್, ಲಾಂಗ್‌ಟರ್ಮ್ ಸಾಲದೊರೆತು, ಋಣವಿಮುಕ್ತನಾಗಿದ್ದಾನೆಯೇ ಎಂಬುದನ್ನು ಸರ್ವೆ ಮಾಡಬೇಕು. ಅಮೋನಿಯಂ ಸಲ್ಫೇಟ್, ಸೂಪರ್ ಸಲ್ಫೇಟನ್ನು ಎಷ್ಟು ಉಪಯೋಗಿಸಿದ್ದಾನೆಂಬುದನ್ನು ನೋಡಬೇಕು. ಹಿಂದಿನ ಪರಿಸ್ಥಿತಿ ಎಷ್ಟರಮಟ್ಟಿಗೆ ಇಂಪ್ರೂವ್ ಆಗಿದೆ, ಅವನಿಗೆ ಪೊಡಿಯಂಟಮ್ಸ್, ಷಾರ್ಟ್‌ಟರ್ಮ್ ಸಾಲ ಎಷ್ಟು ಒದಗಿದೆ ಮತ್ತು ಅವನ ಕುಟುಂಬದ ಮಟ್ಟ ಎಷ್ಟಿದೆಯೆಂಬುದನ್ನು ಶೋಧನೆಮಾಡಿದರೆ, ಎಲ್ಲಿ ಡೆವಲಪ್‌ಮೆಂಟ್ ಆಗಿದೆ, ಎಲ್ಲಿ ಆಗಿಲ್ಲವೆಂಬುದನ್ನು ಅಧಿಕಾರವರ್ಗದವರಿಂದ ತಿಳಿದುಕೊಳ್ಳಬಹುದು. ಮಾನ್ಯ ಸಚಿವರಿಗೆ ಈ ವಿಷಯ ಚೆನ್ನಾಗಿ ಗೊತ್ತಿದೆ.

ನಮ್ಮಲ್ಲಿ ಬೇಕಾದಷ್ಟು ಜನ ಆಫೀಸರುಗಳು ಇದ್ದಾರೆ. ಇಷ್ಟುಜನ ಇದ್ದರೂ ಏನು ಕೆಲಸಮಾಡುತ್ತಾರೆ? ಎಜುಕೇಟೆಡ್‌ಗೆ ಎಂಪ್ಲಾಯ್‌ಮೆಂಟ್ ಕೊಡಬೇಕು ಎಂದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದೆ. ಮಾಡಿರತಕ್ಕ ಯೋಜನೆಗಳನ್ನು ತೆಗೆದುಕೊಂಡರೆ ಅದಕ್ಕೆ ಅವಕಾಶವಾಗಲಾರದು. It is a scheme where Mr. Nehru is interested. You tell Mr. Nehru himself. ನಿಜವಾದ ಸಂಗತಿ ಹೇಳುವುದಕ್ಕೆ ಏತಕ್ಕೆ ಹೆದರಬೇಕು? 72 ಹಳ್ಳಿಗಳಿಗೆ ಎರಡೆರಡು ಜೀಪುಗಳನ್ನ ಕೊಟ್ಟಿದ್ದಾರೆ ಈ ಜೀಪುಗಳನ್ನು ಯಾವರೀತಿ ಉಪಯೋಗಮಾಡುತ್ತಿದ್ದಾರೆ? ಹಣ ಯಾವರೀತಿ ವಿನಿಯೋಗವಾಗುತ್ತದೆ? ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ 10-15 ಪರ್ಸೆಂಟ್ ಯಾವರೀತಿಯಲ್ಲಿದೆಯೋ ಇಲ್ಲಿಯೂಕೂಡ ಅದೇರೀತಿಇದೆಯೆಂದು ಹೇಳಬೇಕಾಗಿದೆ. ಅವರಮೇಲೆ ಇರುವ ಚಾರ್ಜುಗಳನ್ನ ಹೇಳಬೇಕಾದುದು ಅನಾವಶ್ಯಕ. ಸರ್ಕಾರಕ್ಕೆ ಈ ವಿಚಾರಗಳೆಲ್ಲಾ ಗೊತ್ತಿದೆ. ಅವರೂ ಸಹ ಅಲ್ಲಲ್ಲಿ ಆಯಾಯಮಟ್ಟದಲ್ಲಿ ತಿಳಿಸಬೇಕು. I do not understand why the Government of Mysore is not bold enough to tell all these things to the Planning Commission

(ಶ್ರೀ ಜಿ. ಶಿವಪ್ಪ)

and the Government of India. ಏತಕ್ಕೆ ಹೇಳಬಾರದು ಎಂದು ಕೇಳುತ್ತೇನೆ. ನನಗೆ ಮಂತ್ರಿ ಸ್ಥಾನ ಬೇಕುಎಂದು ಅಲ್ಲಿಗೆ ಹೋದಕೂಡಲೇ ಆಲೋಚನೆ ಬರುತ್ತದೆ, ಪೊಟಿನ್ಸಿ ಕಳೆದುಕೊಳ್ಳುತ್ತಾರೆ. ಶ್ರೀ ರುದ್ರಪ್ಪನವರಿಗೆ ಗೊತ್ತು. V.L.W.S. ಸೆಲೆಕ್ಷನ್ ಸರಿಯಾಗಿ ಮಾಡಿಲ್ಲ ಎಂಬುದು ಅವರಿಗೆ ಗೊತ್ತಿದೆ. ಹತ್ತು ಹಳ್ಳಿಗಳಿಗೊಂದು ಹೆಡ್‌ಕ್ವಾರ್ಟರ್ಸ್ ಮಾಡಿದ್ದಾರೆ. ಊರಿನ ವಿವರಗಳು ಗೊತ್ತಾಗುವುದಿಲ್ಲ. ಶ್ರೀ ನೆಹರು ರವರ ಐಡಿಯ ಉತ್ಕೃಷ್ಟವಾದುದು ; ಮತ್ತು ಸರ್ವ ಶ್ರೇಷ್ಠವಾದದ್ದು. It may not be an utter failure ; any way it is not satisfactory. ಇಲ್ಲಿ ಪರಕನುಬನ್ನು ಮಾಡಬೇಕುಎಂದು ಇದೆ. ಅಲ್ಲಿ ಕೂಲಿಸಿಕ್ಕುವಂತೆಮಾಡಿ, ಪ್ರತಿಯೊಂದೂ B.D.O. ಮಾಡಬೇಕು, ಅದಕ್ಕೆ ಚೈತನ ಬೇಕು, ಹೊಸ ಸಮಾಜ ಸ್ಥಾಪನೆಮಾಡುವ ವಾತಾವರಣ ಕಲ್ಪನೆಮಾಡಬೇಕು ಎನ್ನುವುದೇ ಪ್ಲಾನಿಂಗ್ ಕಮಿಷನ್ನಿನ ಉದ್ದೇಶ. ನೆಹರೂರವರು ಪಾರ್ಲಮೆಂಟಿನ ಮುಂದೆ ಎರಡನೇ ಪಂಚವಾರ್ಷಿಕ ಯೋಜನೆ ಇಟ್ಟಾಗ ಹೇಳಿದಮಾತನ್ನು ಎಷ್ಟರಮಟ್ಟಿಗೆ ಸಾರ್ಥಕಗೊಳಿಸುತ್ತಾ ಇದ್ದೇವೆ ಎನ್ನುವುದನ್ನು ಅವರಿಗೆ ತಿಳಿಸಬೇಕು ಎಂದುಕೇಳಿಕೊಳ್ಳುತ್ತೇನೆ. ಇಷ್ಟಾದಮೇಲೆ ವರ್ಕಿಂಗ್ ವಿಚಾರದಲ್ಲಿ ಕೆಲವು ವಿಷಯ ಹೇಳಬೇಕುಎಂದು ಅಪೇಕ್ಷೆಪಡುತ್ತೇನೆ. ಶ್ರೀ ಪುಟ್ಟೇಗೌಡರು ಕಾಂಗ್ರೆಸ್‌ನವರನ್ನು ನೇಮಕ ಮಾಡಿದ್ದಾರೆ ಎಂದು ಹೇಳಿದರು. It is a wrong thing. ಕಾಂಗ್ರೆಸ್‌ನವರನ್ನು ನೇಮಕಮಾಡಿಲ್ಲ. ಹೊಳಲ್‌ಕೆರೆಯಲ್ಲಿ ಏನಾಗಿದೆ ಎಂದರೆ 90 per cent of the members of the Board are not Congress people and they are those who have no sympathy with Sri Duggappa and Sri Shivappa. That has been done by influential men. They are the Government. I must boldly say it is done under the influence of certain men. ಅದು ನ್ಯಾಯವೇ ? ಸ್ವಾಮಿ ನ್ಯಾಯಹೇಳುವ ಜನ ಪಂಚಾಯತಿಹೇಳುವ ಜನ ವಕೀಲ ಬಾಜಿಮಾಡುವುದೇ ! ಅದರಲ್ಲಿ ಮೂರು ನಾಲ್ಕು ಜನಗಳು ಮುನಿಸಿಪಾಲಟಿಯಲ್ಲಿ ಇರತಕ್ಕಂಥವರು ಇದ್ದಾರೆ. ಕೆಲವರು ಸೋಷಿಯಲ್ ಸರ್ವೀಸ್ ಇರಲಿ ಕೊನೆಗೆ ಮೀಟಿಂಗಿಗೆ ಕರೆದರೂ ಬರುವುದಿಲ್ಲ. Of course Sri Duggappa and myself are *ex-officio* people. ಕಾಂಗ್ರೆಸ್‌ನವರನ್ನೇ ಮಾಡಿದ್ದಾರೆ ಎಂದು ಹೇಳಿದರೆ ನಾನು ಹೇಳುತ್ತೇನೆ, ಸರ್ಕಾರ ಅಲ್ಲೂ ತಪ್ಪುಮಾಡಿದೆ, ನಾನ್-ಕಾಂಗ್ರೆಸ್ಸಿನವರನ್ನು ನೇಮಕಮಾಡಿ ಇಲ್ಲೂ ತಪ್ಪು ಮಾಡಿದೆ. ಅವರಿಗೂ ಕೊಟ್ಟರು, ಇವರಿಗೂ ಕೊಟ್ಟರು. ಏತಕ್ಕೆ ಹೀಗೆ ಮಾಡಿದರು ಎಂದು ಕೇಳುತ್ತೇನೆ.

ಆ ಮೇಲೆ B.D.O.ಗಳ ಸೆಲೆಕ್ಷನ್ ಅನ್ನು ಪೊನ್ನಪ್ಪ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮೊದಲು ಗೌರ್ನಮೆಂಟ್ ರೂಲ್ಸ್ ಫ್ರೇಂ ಮಾಡಿಬಿಟ್ಟು 50 ಅಥವಾ 25 B.D.O.ಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದರು. ಸರ್ಕಾರಕ್ಕೆ ಬೇಕಾಗಿರತಕ್ಕವರು ವಶೀಲಬಾಜಿ ಮಾಡಿದ್ದಾರೆಂದು ಕಾಣುತ್ತದೆ. They need not be graduates ಎಂದು ಪಬ್ಲಿಕ್ ಸರ್ವೀಸ್ ಕಮಿಷನ್ ರೂಲ್ಸ್ ಚೇಂಜ್ ಮಾಡಿಕಳುಹಿಸಿದ್ದಾರೆ. ಅದು ನ್ಯಾಯವೇ ? ಸರ್ಕಾರ ಎಂಬುದು ಸೇಕ್ರೆಡ್ ಬಾಡಿ ಇದ್ದಹಾಗೆ. ತಮಗೆ ಬೇಕಾದವರಿಗೆ ಅಡ್ಜಸ್ಟ್‌ಮಾಡುವ ಹಾಗಿದ್ದರೆ ಹೇಗೆ ? ಗ್ರಾಜುಯೇಟ್ಸ್‌ಶಕ್ಯತೆ ನಾನ್ ಗ್ರಾಜುಯೇಟ್ಸ್ ಶಕ್ಯತೆ ಎಲ್ಲಿ ? ಗ್ರಾಜುಯೇಟ್ಸ್ ಬೇಕಾದಷ್ಟು ಜನ ಇದ್ದಾರೆ. Graduation is an additional qualification. At the same time, they may be efficient. Why should you change the rule after lapse of a certain time ? ಅದು ವಶೀಲಬಾಜಿಯಲ್ಲವೇ ? ನೀವು ಓತ್ ತೆಗೆದುಕೊಂಡಿದ್ದೀರಿ. ಗವರ್ನರ್ ಮುಂದೆ ಸ್ಪೀಕರ್ ಮುಂದೆ ನೀವು ಸ್ಟೇರ್ ಮಾಡಿದ್ದೀರಿ. ಅಂಥವರು ವಶೀಲಿ ಬಾಜಿಗೆ ಏತಕ್ಕೆ ಒಳಗಾಗುತ್ತೀರಿ ಎಂದು ಕೇಳುತ್ತೇನೆ. ಸ್ವಾಮಿ, ಸೋಷಿಯಲ್ ವೆಲ್‌ಫೇರ್ ಅಕ್ಟಿವಿಟೀಸ್ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲೂ ಕೂಡ ಬರುತ್ತದೆ ಎಂದು ಕಾಣುತ್ತದೆ. N.E.S. ಬ್ಲಾಕ್‌ನಲ್ಲಿಯೂ ಇದೆ. ಹಳ್ಳಿಯ ಜನಗಳಲ್ಲಿ 90 ಪರ್ಸೆಂಟ್ ಇಲ್ಲಿಟರೇಟ್ಸ್ ಇದ್ದಾರೆ. ಅಲ್ಲಿಗೆ ಸೋಷಿಯಲ್ ಆರ್ಗನೈಜರ್ಸ್ ಹೋಗಿ ಬೋಧೆ ಮಾಡಬೇಕು. ಯಾವ ರೀತಿ ಮಕ್ಕಳನ್ನು ಸಾಕಬೇಕು ಎನ್ನುವುದನ್ನು ಹೇಳಿಕೊಡಬೇಕು. ನನ್ನ ಅನುಭವದಲ್ಲಿ ಸೋಷಿಯಲ್ ಆರ್ಗನೈಜರ್‌ಗಳನ್ನು ಆರು ತಿಂಗಳಿಗೆ ಒಬ್ಬೊಬ್ಬರನ್ನು ನಗರ್ವಾಣ್ ಮಾಡುತ್ತಾರೆ. I have seen them. I know how they are working. I do not know for what purpose they are working and for whose benefit they are working. As my friend said, they simply parade in the jeeps. It may not be wrong if I say they are fashionable people, selected by the Public Service Commission. Do they go an approach our illiterate ladies ? What is the work they have done and to what extent benefits are accrued by the N.E.S ? ಇವೆಲ್ಲಾ ನೋಡಿ ಏನಾಗುತ್ತದೆ ಎಂದರೆ ಇಂಥ ಆರ್ಗನೈಜೇಷನ್ ಇಟ್ಟುಕೊಳ್ಳುವುದು ಬೇಡವೆಂದು ಸೆಂಟ್ರಲ್ ಗೌರ್ನಮೆಂಟಿಗೆ ಹೇಳಬೇಕು. ಕಂಪ್ಲೀಟ್ ಸೆಟ್‌ಅಪ್ ಬದಲಾವಣೆಮಾಡಬೇಕು. ಇದರಲ್ಲಿ ನೆಹ್ರೂರವರಿಗೆ ಹೆಚ್ಚಿನ ಪ್ರೀತಿ ಬೇರೆ ಇರುವುದರಿಂದ ಅಷ್ಟರವರೆಗೆ ನಾವು ಸುಮ್ಮನೆ ಇರಬೇಕಾಗಿದೆ. ಈ ಸೆಟ್‌ಅಪ್ ಬದಲಾವಣೆ ಮಾಡಬೇಕು. ಅದನ್ನು ಬದಲಾವಣೆಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಒಂದು ಸಣ್ಣ ವಿಚಾರದಲ್ಲಿ N.E.S. Committee ಯಲ್ಲಿ ನೇಮಕ ಮಾಡುವುದು ಸಮುದ್ರದಲ್ಲಿ ಮೀನು ಹಿಡಿದಂತೆ. ಇದರಲ್ಲಿಯೂ ಕೂಡ ಮಂತ್ರಿಗಳು ವಶೀಲಬಾಜಿಮಾಡಬೇಕು ? ಬೇಕಾದವರಿಗೆ ಅಪಾಯಿಂಟ್‌ಮೆಂಟ್ ಮಾಡಿದರೆ ಅವನ್ನು ಹೇಳುವುದು ಕಷ್ಟವಾಗುತ್ತದೆ.

Sri RAMAKRISHNA HEGDE.—I refute it.

Sri G. SIVAPPA.—You cannot refute it. I challenge if you refute it.

Sri RAMAKRISHNA HEGDE.—Members of the committee are not appointed by any Minister. They are appointed by Deputy Commissioners.

ವ್ಯಾಪ್ತಿ ಕ್ರಮಾಂಕ Accession No. ...
ದಿನಾಂಕ Date.....

Sri G. SIVAPPA.—I know they are appointed by Deputy Commissioners. ಮಂತ್ರಿಗಳು ಮಾಡಿದ್ದರೆ ಬಹಳ ಚೆನ್ನಾಗಿ ಮಾಡುತ್ತಿದ್ದರು. ಅವರಿಗೆ ಯೋಗ್ಯತೆ ಇದೆ ಮತ್ತು ತಾಲ್ಲೂಕಿನ ಅನುಭವ ಇರುತ್ತದೆ.

To escape Sivappa, Sri Duggappa and others they give the authority to make appointments to the Deputy Commissioner and instruct the Deputy Commissioner to appoint the persons mentioned by them or those who are very closely connected with Government. Then when I ask them why Sivappa and Sri Duggappa are not appointed, they say they are not the appointing authority, but the Deputy Commissioner is the appointing authority and so they cannot do anything. In this way we are helpless.

ಹೀಗೆ ಹೇಳುವದರ ಅರ್ಥವೇ ಆಗುವದಿಲ್ಲ. ಇನ್ನು ಮಾತನಾಡಲು ಕಾಲಾವಕಾಶವಿಲ್ಲದ ಕಾರಣ ನನ್ನ ಭಾಷಣವನ್ನು ಇಲ್ಲಿಗೆ ಮುಗಿಸುತ್ತೇನೆ.

4-30 P.M.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ವಿಸ್ತರಣ ಯೋಜನೆ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಬಗ್ಗೆ ಸರ ಕಾರದವರು 2,08,97,000 ರೂಪಾಯಿಗಳನ್ನು ಈ ಬೇಡಿಕೆಯ ಮೂಲಕ ಕೇಳಿದ್ದಾರೆ. ಆದರೆ ಇಷ್ಟು ದುಡ್ಡನ್ನು ಕೊಟ್ಟರೆ ಜನಗಳಿಗೆ ಎಷ್ಟರ ಮಟ್ಟಿಗೆ ಅನು ಕೂಲವಾಗುತ್ತದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ಹೇಳ ಬೇಕಾಗಿದೆ. ಮಾನ್ಯ ಮಂತ್ರಿಗಳು ತಮ್ಮ ಅನುಭವಕ್ಕೆ ಏನು ಬಂದಿದೆ ಎಂಬುದನ್ನು ಹೇಳಿದ್ದಾರೆ. ಬಹು ಮಟ್ಟಿಗೆ ನಾನು ಅದನ್ನು ಅನುಮೋದಿಸುತ್ತೇನೆ. ಇದು enemy No. 1 ಎಂದು ಕೆಲವು ಸ್ನೇಹಿತರು ಹೇಳಿದರು. ಆದರೆ N.E.S. ಅಂದರೆ New Exploitation Scheme ಆಗಿದೆ ಎಂದು ನಾನು ಹೇಳು ತ್ತೇನೆ. ಜನರ ಜೀವನ ಮಟ್ಟವನ್ನು ಅಭಿ ವೃದ್ಧಿ ಪಡಿಸುವ ಸ್ಕೀಂ ಇದು ಅಲ್ಲ. ಜನರನ್ನು ಶೋಷಣೆಮಾಡಿ ದೇಶವನ್ನು ಅಧೋಗತಿಗೆ ತರುವ ಸ್ಕೀಂ ಇದು ಆಗಿದೆ. ಯೋಜನೆಯ ತತ್ವ ನೋಡಿದರೆ ಬಹಳ ಸೊಗಸಾಗಿದೆ. ಜಾರಿಗೆ ತರುವ ವ್ಯಕ್ತಿಗಳ ಭಾವನೆ ನೋಡಿದರೆ ನಿಜವಾಗಿಯೂ ನಾಚಿಕೆಯಾಗು ವಂತಾಗಿದೆ. ಈ ಇಲಾಖೆಯಲ್ಲಿ ಮೂರು ಅಕ್ಷರಗಳ ಆಫೀಸರರು ಬಹಳವಾಗಿದ್ದಾರೆ. D.E.O., B.D.O., V.L.W. Gent organiser, social organiser, lady social organiser, Advisory Committee, Extension officer ಇತ್ಯಾದಿ ಅನೇಕ ಆಫೀಸರು ಇದ್ದಾರೆ. ಈ Advisory Committee, B.D.O. Committee ವೈಶಿಷ್ಟ್ಯ ಹೇಳಿದರೆ ಅದು ಯಾವ ಮಟ್ಟದಲ್ಲಿ ಇದೆ ಎಂದರೆ ನಿಜವಾಗಿಯೂ ನಾಚಿಕೆಗೇಡು ಎಂದು ಹೇಳಬಹುದು. ಸರಕಾರದವರು ನಿರ್ದಿಷ್ಟವಾದ ನೂಚನೆಗಳನ್ನು ಕೊಟ್ಟಿದ್ದಾರೆ. ಹಳ್ಳಿ ಗಾಡಿನ ಸಂಪತ್ತು ಇಟ್ಟುಕೊಂಡು ಕೆಲಸ ಮಾಡಬೇಕು, ನೇಮಕಮಾಡಬೇಕು ಎಂದು ಹೇಳಿದ್ದರು. ಹಾಸನ, ಅರಕಲಗೂಡು, ಹೊಳೆನರಸೀಪುರ ಇವುಗಳ ಬಗ್ಗೆ Advisory Committeeಯವರು ಸುಳ್ಳು ರಿಪೋರ್ಟ್ ಮಾಡಿದ್ದಾರೆ ಎಂದು ನಾಯಕನ ಹಳ್ಳಿಯ ಬಗ್ಗೆಯೂ ಸುಳ್ಳು ರಿಪೋರ್ಟು ಮಾಡಲಾಗಿದೆ. ಡೆಪ್ಯೂಟಿ ಮಿನಿಸ್ಟರ ಗಮನಕ್ಕೆ ತಂದರೂ ಸಹ ಏನೂ ಆಗಿಲ್ಲ. ಬಹುಶಃ ಆ ತಾಲ್ಲೂಕಿನ ಎಂ. ಎಲ್. ಎ. ಯನ್ನು ಸಮಾರಂಭಕ್ಕೆ ಆಮಂತ್ರಿಸದೇ ಇರುವದಕ್ಕೆ ಅವರು ದೂರು ಕೊಟ್ಟಿರಬಹುದೆಂದು ಊಹೆಮಾಡಿ ಮೊದಲೇ ಹೋಗಿ ಮಂತ್ರಿಗಳಿಗೇ ರಿಪೋರ್ಟು ಮಾಡುತ್ತಾರೆ. ಮೈಸೂರು ಸಂಸ್ಥಾನದಲ್ಲಿಯ ಹರಿಜನರ ಸಮ್ಮೇಳನಕ್ಕೆ ಎರಡು ಮೂರು ಸಾವಿರ ಜನ ಬಂದಿದ್ದರು. ಡೈರೆಕ್ಟರಾದ ಮರಿದೇವೇ ಗೌಡರು ಸಹ ಬಂದಿದ್ದರು. ಹರಿಜನರ ಈ ಸಮ್ಮೇಳ ನಕ್ಕೆ ಅಲ್ಲಿಯ ಅಧಿಕಾರಿಗಳು ಯಾವ ಸಹಾಯ ಸಹ ಕಾರವನ್ನೂ ಕೊಡಲಿಲ್ಲ. ಅಂದು ಜೀಪ್ ತೆಗೆದುಕೊಂಡು ಹೇಮಾವತಿ ನದಿಯ ದಂಡೆಯ ಮೇಲೆ ಪಿಕ್‌ನಿಕ್‌ಗಾಗಿ ಬಿಸೀ ಭಾತು ಊಟ ಮಾಡಲು ಹೋಗಿದ್ದರು. N.E.S. ಗೆ ಎಷ್ಟು ದುಡ್ಡು ಖರ್ಚಾಗುತ್ತಾ ಇದೆ! ತೆರಿಗೆಯ ರೂಪದಿಂದ ವಸೂಲುಮಾಡಿದ ಹಣವನ್ನೇಕೆ ಹೀಗೆ ವ್ಯರ್ಥವಾಗಿ ಖರ್ಚುಮಾಡುತ್ತಿದ್ದಾರೆ! ಈ ವಿಷಯ ವನ್ನು ಡೆಪ್ಯೂಟಿ ಮಿನಿಸ್ಟರ ಗಮನಕ್ಕೆ ತಂದಾಗ ಯಾಕೆ ಯೋಚನೆ ಮಾಡಲಿಲ್ಲ? ಹೊಳೆನರಸೀಪುರದಲ್ಲಿ ಕಂಡೆಂ ಆದ ನಬ್ ಇಂಜಿನಿಯರ್‌ನ್ನು ಇಟ್ಟುಕೊಂಡು ಕೆಲಸ ಮಾಡಲಾಗುತ್ತಿದೆ. ಅವರಿಗೆ ನಡೆಯಲಿಕ್ಕೆ ಆಗುವದಿಲ್ಲ. ಜನರ ಸಂಪರ್ಕವನ್ನು ಇಟ್ಟುಕೊಳ್ಳದ ಅಧಿಕಾರಿಯು ಜನರ ಸಹಾರ್ದವನ್ನು ಇಟ್ಟುಕೊಳ್ಳಲು ಆಗುವದಿಲ್ಲ. ಗಂಜಿ causeway ಕೆಲಸಕ್ಕೆ ನಾಲ್ಕು ಸಾವಿರ ರೂಪಾಯಿ ಖರ್ಚಿಗೆ, ಆ ಸ್ಥಳಕ್ಕೆ ಹೋಗಿ ನೋಡಲಲ್ಲ, ಹಾಗೆಯೆ ಮಂಜೂರು ಮಾಡಿದರು. ಮೂರು ನಾಲ್ಕು ತಿಂಗಳುಗಳಲ್ಲಿ ಅದೇ ಕೊಚ್ಚಿಕೊಂಡು ಹೋಯಿತು. ಅದಕ್ಕಾಗಿ ಯಾವ ತನಿಖೆಯನ್ನೂ ಮಾಡಲಿಲ್ಲ. ಕಂಡೆಂ ಆದ ಮನುಷ್ಯನನ್ನು ಇಟ್ಟುಕೊಂಡು ಕೆಲಸ ಮಾಡು ತ್ತಿದ್ದಾರೆ. ರಿಪೋರ್ಟು ಮಾಡಿದರೂ ಏನೂ ಆಗಿಲ್ಲ. C.D.O. ಸುಮಾರು ಲಕ್ಷಾಂತರ ರೂಪಾಯಿ ಖರ್ಚನ್ನು ಮಾಡುತ್ತಿದ್ದಾರೆ. ಇಂಥ ಅಧಿಕಾರಿ ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ. ಕೋಟ್ಯಂ ತರ ರೂಪಾಯಿಗಳನ್ನು ಹಾಳುಮಾಡುತ್ತಿದ್ದಾರೆ. ಪ್ರಜೆಗಳಿಗೆ ಅನುಕೂಲವಾಗಿಲ್ಲ. ಒಂದು ಸರಿ ಯಾದ ರೀತಿಯಲ್ಲಿ ಅನುಕೂಲವಾಗುತ್ತಿಲ್ಲ. ಹಾಸನ ದಲ್ಲಿ ವ್ಯವಸಾಯ ಮಂತ್ರಿಗಳು ಸಿಕ್ಕಿದ್ದರು. ಅವರು ಯಾರನ್ನು ವಿಚಾರಿಸಬೇಕೋ ಅಂಥವರನ್ನು ವಿಚಾರಿ ಸುವುದಿಲ್ಲ. ತಮಗೆ ಬೇಕಾದವರನ್ನು ಭೇಟಿ ಮಾಡಿ ಎಕರೆಗೆ 250 ರೂಪಾಯಿಯಂತೆ ಜಮೀನುಕೊಟ್ಟು ಬಿಡಬೇಕೆಂದು ಶಿಫಾರಸು ಮಾಡುತ್ತಾರೆ. ಈ ಯೋಜ ನೆಗಾಗಿ ಎರಡು ಕೋಟಿ ಏಕೆ? ನಾಲ್ಕು ಕೋಟಿ ಹಣ ಕೊಡೋಣ. ಆದರೆ ಜನ ಸಾಮಾನ್ಯರಿಗೆ ಅನುಕೂಲ ವಾಗುತ್ತಿದೆಯೇ? ಖಂಡಿತವಾಗಿ ಅನುಕೂಲವಾಗು ತ್ತಿಲ್ಲ. ಆದ ದರಿಂದ ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ನಿಗಾ ಕೊಡಬೇಕು. ಅಧಿಕಾರಿಗಳ ಮೇಲೆ ತಕ್ಕ ಬಂದೋಬಸ್ತು ಮಾಡದೇ ಇದ್ದರೆ ಕಾರ್ಯ ಯಶಸ್ವಿಯಾಗುವದಿಲ್ಲ. ಜನಸಾಮಾ ನ್ಯರಿಗೆ ಹಿತವಾಗುವದಿಲ್ಲ. ಈ ಯೋಜನೆಯ ಮುಖ್ಯ ಗುರಿ ಏನೆಂದರೆ ಡೆಪ್ಯೂಟಿ ಕಮಿಷನರ್, ಎಕ್ಸಿಕ್ಯೂ ಟಿವ್ ಇಂಜಿನಿಯರರು ತಾಲ್ಲೂಕಿನಲ್ಲಿ ತಿರುಗಿ ಬಂದು ಪ್ರೋಗ್ರಾಂ ಹಾಕಬೇಕು ಎಂದು ಇದೆ.

The Deputy Commissioner and the Exeuctive Engineer, after obtaining the opinion of the Block Advisory Committee, will draw up a common programme

(ಶ್ರೀ ವೈ. ವೀರಪ್ಪ)

in respect of the works to be taken in each N.E.S. Block, etc., etc.

ಇದರಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರರ ಹೆಸರೇ ಇಲ್ಲ. ಅವರ ಹೆಸರು ಇರಬೇಕಾಗಿತ್ತು. ಅವರು ನಲಹೆ ಕೊಡಬೇಕಾಗುತ್ತದೆ. ಯಾವ ಕಾರಣದಿಂದ ಆ ಕಮಿಟಿಯಲ್ಲಿ ಅವರು ಇಲ್ಲ? ಹೀಗಾದರೆ ಯಾವ ರೀತಿ ಇಲಾಖೆಯಿಂದ ಇಲಾಖೆಗೆ ಸಹಕಾರ ಪಡೆದು ಯೋಜನೆ ಯಶಸ್ವಿಯನ್ನಾಗಿ ಮಾಡುತ್ತಾರೆಂದು ನಾನು ಪ್ರಶ್ನೆ ಕೇಳುತ್ತೇನೆ. ಅಮಲ್ದಾರರು ತಾಲ್ಲೂಕಿನಲ್ಲಿ ಎಲ್ಲ ರೊಡನೆ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಪಟೇಲ ಶಾನಭೋಗರು ಸಹಕಾರಮಾಡುತ್ತಾರೆ. ಅಂಥವರ ಸಹಾಯ ಸಹಕಾರ ತೆಗೆದುಕೊಳ್ಳದೆ, ಅವರು ಪೂರ್ವ ಎಂದರೆ ಇವರು ಪಶ್ಚಿಮ, ಅವರು ಉತ್ತರ ಎಂದರೆ ಇವರು ದಕ್ಷಿಣ ಎಂದರೆ ತಾಲ್ಲೂಕಿನ NES ಮತ್ತು CDಗಳಲ್ಲಿ ನಿಜವಾಗಿಯೂ ಕೆಲಸ ಸರಿಯಾಗಿ ಆಗುತ್ತಿಲ್ಲ. ಮಂತ್ರಿಗಳು ಸೆಕ್ರೆಟರಿಯವರು ಪ್ರವಾಸ ಮಾಡುತ್ತಾರೆ; ಎಲ್ಲೆಲ್ಲಿ ತೋರಣ ಕಟ್ಟಿರುತ್ತಾರೋ ಅಲ್ಲಿಗೆ ಹೋಗಿ ಬರುತ್ತಾರೆ. ಏನು ಅವ್ಯವಸ್ಥೆ ನಡೆದಿದೆ ಅದನ್ನು ನೋಡುವುದಿಲ್ಲ. ಇಷ್ಟು ವರ್ಷ ಕೆಲಸಮಾಡಿದರೂ ಯಾವದೇ ಒಬ್ಬ BDOವಿಗೆ ನಮ್ಮ ಹೊಳೇನರಸೀಪುರ ತಾಲ್ಲೂಕಿನಲ್ಲಿಯ ಊರಹೆಸರುಗಳು ಗೊತ್ತಿಲ್ಲ. ಮೂಡಲ ಕೊಪ್ಪದಲ್ಲಿ 10-15 ಒಕ್ಕಲುಗಳು ಇದ್ದಾರೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆಯಾಗಿಲ್ಲ. ಇಂಥ ಊರುಗಳಿಗೆ ಮೊದಲು ಕೆಲಸವಾಗಬೇಕು. ಯಾವುದೇ ಅಧಿಕಾರಿಯಾಗಲಿ ಅಥವಾ ಮಂತ್ರಿಗಳೇ ಆಗಲಿ ಎಷ್ಟು ಹಳ್ಳಿಗಳಿಗೆ ಹೋಗಿ ನೋಡಿದ್ದಾರೆ? ಜೀಪ್‌ನಲ್ಲಿ ಕುಳಿತು ಹೋಗಿ ರೋಡ್ ಪಕ್ಕದಲ್ಲಿರುವ ಊರಿಗೆ ಹೋಗುವುದು ಮಾಡಿದರೆ ಈ ರಾಷ್ಟ್ರೀಯ ವಿಸ್ತರಣ ಯೋಜನೆಗೆ ದ್ರೋಹ ಮಾಡಿದಂತಾಗುವುದು. ನೂರು ವರ್ಷಗಳಾದರೂ ಯೋಜನೆಯು ಯಶಸ್ವಿಯಾಗುವದಿಲ್ಲ. ಆದುದರಿಂದ ಬಹಳ ತೀವ್ರ ಕ್ರಮ ತೆಗೆದುಕೊಳ್ಳಬೇಕು, ಒಂದೊಂದು ಊರಿಗೆ ಸರ್‌ಪ್ರೈಜ್ ವಿಜಿಟ್ ಕೊಟ್ಟರೆ ಎಲ್ಲವೂ ತಿಳಿಯುವುದು.

ಹಾಗೆ ಮಾಡದಿದ್ದರೆ ಖಂಡಿತವಾಗಿಯೂ ಕೆಲಸ ಆಗುವುದಿಲ್ಲ. ಆ ದೃಷ್ಟಿಯಿಂದ ಬಹಳ ತೀಕ್ಷ್ಣವಾಗಿ ಕಾರ್ಯಕ್ರಮತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮೈನರ್ ಇರಿಗೇಷನ್ ಮತ್ತು ಹೆಚ್ಚು ಆಹಾರ ಬೆಳೆ ಬೆಳೆಯುವ ವಿಷಯದಲ್ಲಿ ಅಂಕಿ ಅಂಶಗಳು ಎಷ್ಟೋ ಇವೆ. ಏನು ಕೆಲಸಮಾಡಬೇಕು ಯಾವ ಕೆಲಸಮಾಡ ಬೇಕು ಎಂದು ಇದ್ದಿರೋ ಆ ಕೆಲಸ ಮಾಡಿಲ್ಲ.

[SMT. VIJAYA RAGHVENDER RAO in the Chair]

ಎಇ. ಇ. ಎಸ್.ನಲ್ಲಿ ಬಿ. ಡಿ. ಓ. ಮತ್ತು ಅಮಲ್ದಾರರು ಇದ್ದಾರೆ. ಇದಕ್ಕೆ ಬದಲಾಗಿ ಆ ಬಿ.ಡಿ.ಓ. ಗಳ ಕೆಲಸವನ್ನು ಸಹ ಅಮಲ್ದಾರರಿಗೇ ವಹಿಸಿಕೊಟ್ಟರೆ ಒಳ್ಳೆಯದು; ಅವರ ಹತ್ತಿರ ಎಲ್ಲಾ ಸಮಾಚಾರಗಳೂ ಇರುತ್ತವೆ. ಆದ್ದರಿಂದ ಅವರ ಕೆಲಸದ ಜೊತೆಗೆ ಈ ಕೆಲಸವನ್ನು ಸಹ ಸರಿಯಾಗಿ ಮಾಡುತ್ತಾರೆ ಎಂದು ಹೇಳಬಲ್ಲೆ. ಎಸ್. ಕೆ. ಡೇ ಅವರು ಒಂದು ಯೋಜನೆ ತಯಾರು ಮಾಡಿರಬಹುದು ಆದರೆ ಅವರು ನಮ್ಮ ನ್ಹಳದ ಕಷ್ಟಸುಖ ನೋಡಿರುವವರಲ್ಲ. ಹಳ್ಳಿಯಲ್ಲಿ ಒಳ್ಳೆಯ ಕೆಲಸ ಆಗುತ್ತದೆಯೇ ಇಲ್ಲವೇ ಎಂಬುದನ್ನು ನಾವು ಅರಿತು ಸೂಕ್ಷ್ಮವಾದ ತಿದ್ದುಪಡಿಗಳನ್ನು ಸುಧಾರಣೆ ಗಳನ್ನು ಮಾಡಬೇಕೆಂದು ವರದಿ ಮಾಡಿದರೆ ಅದನ್ನು ಅವರು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಮೊನ್ನೆ ದಿನ ನಂದಿ ಬೆಟ್ಟದಲ್ಲಿ ನಡೆದ ಸೆಮಿನಾರ್‌ನಲ್ಲಿ ಹೇಳಿದರಂತೆ : The greatest enemy is the Central Secretariat ಎಂದು. The greatest enemy is not only the Central Secretariat but also the Secretariat of the State ಎಂದು ಹೇಳಬಹುದು. ಏಕೆಂದರೆ ನೀವು ತೀಕ್ಷ್ಣವಾದ ಸಂಪರ್ಕ ಇಟ್ಟುಕೊಂಡು ಸೂಪರ್‌ವಿಜ್ ಮಾಡುತ್ತಿಲ್ಲ. ಆರು ತಿಂಗಳು ಒಂದು ವರ್ಷಕ್ಕೆ ಒಮ್ಮೆ ಹೋಗುತ್ತೀರಿ. ಆ ದೃಷ್ಟಿಯಿಂದ ಅಧಿಕಾರಿ ಗಳು ಯಾವ ಮಟ್ಟದಲ್ಲಿ ಕೆಲಸ ಮಾಡಬೇಕೋ ಆ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ.

ಇನ್ನು ಈ ಅಡ್ವೈಸರಿ ಕಮಿಟಿಗೆ ಸದಸ್ಯರನ್ನು ನೇಮಕಮಾಡುವಾಗ ಒಂದು ನಿರ್ದಿಷ್ಟವಾದ ನಿಯಮ ಇಟ್ಟುಕೊಳ್ಳಿ. ನಿಜವಾಗಿಯೂ ಹಳ್ಳಿಯ ಜನರ ಸಂಪರ್ಕ ಅತನಿಗೆ ಇದೆಯೆ, ಕೆಲಸಕಾರ್ಯಗಳನ್ನು ಮಾಡಿಸುವುದರಲ್ಲಿ ಅನುಭವವಿದೆಯೇ ಇಲ್ಲವೇ ಎಂಬು ದನ್ನು ವಿಮರ್ಶೆಮಾಡಿ ಎಂ. ಎಲ್. ಎ ಗಳ ಸಹಕಾರ ಪಡೆದು ಕೆಲಸಮಾಡಿದರೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಖಂಡಿತವಾಗಿಯೂ ಆಗುವು ದಿಲ್ಲ ಎಂದು ಹೇಳುತ್ತೇನೆ. ಆ ದೃಷ್ಟಿಯಿಂದ ಎಂ. ಎಲ್. ಎ.ಗಳ ಸಹಕಾರವನ್ನು ಪಡೆದುಕೊಳ್ಳಬೇಕೆಂದು ನಿರ್ದಿಷ್ಟವಾಗಿ ಎಕ್ಸಿಕ್ಯೂಟಿವ್ ಇಂಜಿನಿಯರು, ಡೆಪ್ಯೂಟಿ ಕಮೀಷನರು ಮತ್ತು ಎಇ. ಇ. ಎಸ್. ಅಧಿಕಾರಿಗಳಿಗೆ ನೂಚನೆ ಕೂಡಬೇಕೆಂದು ಹೇಳುತ್ತೇನೆ.

ಹೊಳೇನರಸೀಪುರದ ಸಿ.ಡಿ.ಎಸ್. ಬ್ಲಾಕಿಗೆ ಕೆಲವು ಯಂತ್ರೋಪಕರಣಗಳನ್ನಿಗ ಸರ್ಕಾರದವರು ಒದಗಿ ಸಿದ್ದಾರೆ. ಸುಮಾರು 30 ಸಾವಿರ ರೂಪಾಯಿಗಳ ಬೆಲೆ ಆಗಬಹುದು, ಅಷ್ಟು ಸಾಮಾನುಗಳನ್ನು ಒದಗಿ ಸಿದ್ದಾರೆ. ಕೆಲವು ಮೈಕ್ ಸೆಟ್ಸ್‌ಗಳೂ, ಡ್ರಾಮ ಸೆಟ್ಸ್‌ಗಳೂ, ಹೊಲಿಗೆ ಯಂತ್ರಗಳೂ—ಹೀಗೆಲ್ಲ ಒದಗಿ ಸಿದ್ದಾರೆ. ಆದರೆ ನಾವು ಈ ಸಭೆಯಲ್ಲಿ ಅನೇಕ ವಿಚಾರ ಗಳನ್ನು ತಿಳಿಸುತ್ತಿದ್ದಾಗ್ಗೂ ಮಾನ್ಯ ಡೆಪ್ಯುಟಿ ಮಿನಿ ಸ್ಟರ್ ಅವರು ಯಾವ ಒಂದು ವಿಷಯವನ್ನೂ ಸಹ ಅವರು ನೋಟ್ ಮಾಡಿಕೊಳ್ಳುತ್ತಿಲ್ಲ. ಬಹಳ ಅಲಕ್ಷ್ಯ ದಿಂದ ಇರುವಂತೆ ಕಾಣುತ್ತಿದೆ. ನನ್ನ ತಾಲ್ಲೂಕಿನಲ್ಲಿ ಗುಬ್ಬಿಹಳ್ಳಿ ಎಂಬ ಗ್ರಾಮಕ್ಕೆ ಎರಡು ಹೊಲಿಗೆ ಯಂತ್ರ ಗಳನ್ನು ಸಪ್ಲೈ ಮಾಡಿದ್ದಾರೆ. ಜನರು ಬಟ್ಟೆ ಹೊಲಿಯು ವುದನ್ನು ಕಲತುಕೊಳ್ಳಲೆಂಬ ಉದ್ದೇಶದಿಂದ ಅವುಗಳ ನ್ನೊದಗಿಸಿದ್ದಾರೆ. ಆದರೆ ಈ ದಿವಸ ಆ ಎರಡು ಹೊಲಿಗೆ ಯಂತ್ರಗಳೂ ತುಕ್ಕು ಹಿಡಿದು ಬಿದ್ದಿವೆ. ಅವುಗಳ ಬಗ್ಗೆ ಯಾರೊಬ್ಬರೂ ನಿಗಾ ಕೊಟ್ಟು ನೋಡು ತ್ತಿಲ್ಲ. ನಾವಾದರೋ ಇಲ್ಲಿ ಏನಾಕಾರಣ ಯಾವು ದನ್ನೂ ಟೀಕೆ ಮಾಡುತ್ತಿಲ್ಲ. ರಚನಾತ್ಮಕ ರೀತಿಯಾದ ಟೀಕೆಗಳನ್ನು ಮಾಡಿ ಸರ್ಕಾರದ ಕೆಲಸ ಕಾರ್ಯಗಳು ಹೇಗೆ ನಡೆಯಬೇಕೆಂಬುದನ್ನು ರೂಪಿಸಲು ಇಷ್ಟೆಲ್ಲಾ ಹೇಳುತ್ತಿದ್ದೇವೆಯೇ ಹೊರತು ಈ ಬಗ್ಗೆ ಯಾರೇನೂ ತಪ್ಪಾಗಿ ತಿಳಿದುಕೊಳ್ಳಬೇಕಾಗಿಲ್ಲ. ಜನರಿಂದ ನಾನಾ ರೀತಿಯಲ್ಲಿ ನಿಮಗೆ ಸಹಕಾರ ಬೇಕೆಂದು ಕೇಳುತ್ತಿ ದ್ದೀರಿ. ನಿಮ್ಮ ಸ್ಕೀಮು ಬರಿ ತತ್ವ ಮತ್ತು ನೀತಿ ಚಿಂತಾಮಣಿಗಳ ಗಣಿಯಿಂದ ತುಂಬಿಹೋಗಿದೆ. ಅಷ್ಟೆಲ್ಲವನ್ನೂ ನೀವು ಈ ಯೋಜನೆಗಳಲ್ಲಿ ಅಳವಡಿ ಸಿದ್ದಾಗ್ಗೂ ಆ ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಿಜವಾಗಿಯೂ ಹೇಳಬೇಕೆಂದರೆ ಅವರು ವಿಲೇಜ್ ಲೆವಲ್ ವರ್ಕರ್ಸ್ ಅಲ್ಲ–ಟೌನ್ ಲೆವಲ್ ವರ್ಕರ್ಸ್. ಇನ್ಸ್‌ಪೀಟ್ ಆಟವಾಯಿತು, ಅವರಾಯಿತು. ದೇಶಾಭಿವೃದ್ಧಿಯ ಬಗ್ಗೆ ಅವರೇನೂ ಕೆಲಸ ಮಾಡು

ತ್ತಿಲ್ಲ. ನಾನು ತಿಳಿಸಬೇಕಾಗಿದ್ದಂಥಾ ವಿಷಯ ಗಳೆನ್ನೂ ಬಹಳವಾಗಿದ್ದವು. ಆದರೆ ಕಾರಾವಕಾಶ ವಿಲ್ಲವೆಂದು ಅಧ್ಯಕ್ಷರು ಒತ್ತಾಯ ಮಾಡುತ್ತಿರುವುದ ರಿಂದ ಅನಿವಾರ್ಯವಾಗಿ ನನ್ನ ಮಾತುಗಳನ್ನು ಮುಗಿ ಸುವ ಮುನ್ನ ನನಗೆ ಈ ಎರಡು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷಣಿಯರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ, ನಾಮುದಾಯಿಕ ಅಭಿವೃದ್ಧಿ ಯೋಜನೆ, ಸಮಾಜ ವಿಕಾಸ ಯೋಜನೆ ಹಾಗೂ ರಾಷ್ಟ್ರಾಭಿವೃದ್ಧಿ ಕಾರ್ಯಗಳ ವಿನ್ಯರ್ಣಾ ಯೋಜನೆಗಳ ನಲುವಾಗಿ ಸಭೆಯ ಮುಂದೆ ತಂದಿರತಕ್ಕ ಬೇಡಿಕೆ ಹಣಕ್ಕೆ ನನ್ನ ಒಪ್ಪಿಗೆಯನ್ನು ಕೊಡುತ್ತ ಈ ಬಗ್ಗೆ ಕೆಲವು ಸೂಚನೆ ಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಿಂತಿ ದ್ದೇನೆ. ಇಲ್ಲಿಗೆ ನಾಲ್ಕು ವರ್ಷಗಳ ಹಿಂದೆಯೇ ನನ್ನ ಮತದಾರ ಕ್ಷೇತ್ರದಲ್ಲಿ ಒಂದು ರಾಷ್ಟ್ರೀಯ ವಿನ್ಯರ್ಣಾ ಯೋಜನೆಯೂ ಮತ್ತು ಕಳೆದ ವರ್ಷ ಸಮಾಜ ವಿಕಾಸ ಯೋಜನೆಯೂ ಪ್ರಾರಂಭವಾಗಿದೆ. ನಮ್ಮ ಪ್ರದೇಶ ಮೊದಲು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ್ದಾಗ ರಾಷ್ಟ್ರೀಯ ವಿನ್ಯರ್ಣಾ ಯೋಜನೆ ಬಂತು. ಇತ್ತೀಚೆಗೆ ಅಲ್ಲಿ ಸಮಾಜವಿಕಾಸ ಯೋಜನೆಯೂ ಬಂದಿದೆ. ಆದರೆ ಇಲ್ಲಿಯವರೆಗೂ ಈ ಯೋಜನೆಗಳ ವಿಚಾರವಾಗಿ ಅನೇಕ ಸದಸ್ಯರುಗಳು ಮಾತನಾಡಿದ್ದನ್ನು ನೋಡಿದರೆ ನನಗೇಕೋ ವಿಷಾದವೂ ಆಗುತ್ತಿದೆ ಮತ್ತು ಆಶ್ಚರ್ಯವೂ ಆಗುತ್ತಿದೆ. ಆದರೆ ಹಾಗೆ ಏಕಕಾಲದಲ್ಲೇ ವಿಷಾದ ಮತ್ತು ಆಶ್ಚರ್ಯಗಳುಂಟಾಗುವಂತೆ ಮಾಡಲು ಕಾರಣರು ಯಾರೆಂಬುದನ್ನು ಹೇಳುವುದು ಬಹಳ ಕಷ್ಟ. ಈ ವಿಚಾರದಲ್ಲಿ ಸರ್ಕಾರದವರು ಇನ್ನೊಮ್ಮೆ ಲಕ್ಷ್ಯ ಕೊಟ್ಟು ಪರಿಶೀಲನೆ ನಡೆಸುವುದು ಉತ್ತಮ. ಆದರೆ ಈಗ ಸಲಹಾಸಮಿತಿಗಳ ಬಗ್ಗೆ ಅನೇಕ ಟೀಕೆಗಳು ಬಂದಿವೆ. ಈ ಸಲಹಾ ಸಮಿತಿಗಳನ್ನು ರಚನೆ ಮಾಡು ವಾಗ ಸರ್ಕಾರದವರು ಕೆಲವು ತತ್ವಗಳನ್ನಿಟ್ಟುಕೊಂಡು ರಚನೆ ಮಾಡಬೇಕು. ಆದರೆ ಈ ದಿವಸ ಸಲಹಾ ಸಮಿತಿಗಳಿಗೆ ಪ್ರಾಜೆಕ್ಟ್ ಆಫೀಸರುಗಳನ್ನಾಗಲಿ ಅಥವಾ ಬಿ.ಡಿ.ಓ. ಗಳನ್ನಾಗಲಿ ಛೇರ್ಮನ್ನರನ್ನಾಗಿ ಹಾಕಬಾರದು. ಈ ಯೋಜನೆಗಳು ಯಾವ ಯಾವ ಪ್ರದೇಶದಲ್ಲಿರುತ್ತವೋ ಆ ಪ್ರದೇಶದಲ್ಲಿ ಈ ಸಭೆಯ ಯಾವ ಮಾನ್ಯ ಸದಸ್ಯರಿರುತ್ತಾರೋ ಅಂಥ ವರನ್ನು ಅವರು ಯಾವ ಪಕ್ಷಕ್ಕೇ ಸೇರಿರಲಿ ಆ ಸಲಹಾ ಸಮಿತಿಗಳ ಛೇರ್ಮನ್ನರಾಗಿರುವಂತೆ ಮಾಡು ವುದು ಉತ್ತಮವಾದುದೆಂದು ನನಗೆ ಎನ್ನಿಸುತ್ತಿದೆ. ಈಗಿರತಕ್ಕ ಅಧಿಕಾರಿಗಳು ಛೇರ್ಮನ್ನರಾಗಿದ್ದರೆ ಅವ ರಿಂದ ಉತ್ತಮ ಕೆಲಸಗಳು ನಡೆಯಲಾರವು. ಆದುದ ರಿಂದ ಪ್ರಜಾಯುಗದಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿರ ತಕ್ಕವರು ತಮ್ಮ ಪ್ರದೇಶದ ಒಂದು ಅಭಿವೃದ್ಧಿಯನ್ನು ಆ ಪ್ರದೇಶದ ಜನಗಳ ಅಭಿಲಾಷೆಗನುಗುಣವಾಗಿ ರೂಪಿಸಿಕೊಳ್ಳಲು ಒಂದು ಅವಕಾಶ ಕಲ್ಪಿಸತಕ್ಕದ್ದು ಆವಶ್ಯಕ. ಆದುದರಿಂದ ಈಗಿನ ಬಿ.ಡಿ.ಓ. ಗಳು ಅಥವಾ ತಹಸೀಲ್‌ದಾರರುಗಳೇನಿದ್ದಾರೆ ಅವರಿಂದ ಈ ಕಾರ್ಯಗಳಿಗೆ ಅನುಕೂಲವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಇನ್ನು ಇದರ ಹೊರ ತಾಗಿ ಈ ಪ್ರೊಜೆಕ್ಟ್ ಆಫೀಸರುಗಳ ಮತ್ತು ಬಿ.ಡಿ.ಓ. ಗಳ ಪಾತ್ರ ಈ ಬಗ್ಗೆ ಏತಕ್ಕೆ ಉಪಯೋಗಿಸಲು ಸಾಧ್ಯ ವಿದೆ ಎಂದು ತಾವು ಕೇಳಬಹುದು. ಆ ಸಲಹಾ ಸಮಿತಿ ಗಳಿಗೆ ಅವರನ್ನು ಸೆಕ್ರೆಟರಿಗಳನ್ನಾಗಿ ನೇಮಿಸಬೇಕೆಂದು ಹೇಳುತ್ತೇನೆ. ಹೀಗೆ ಆಯಾಯ ಕ್ಷೇತ್ರದ ಎಂ.ಎಲ್.ಎ.ಗಳೇ ಆ ಸಲಹಾ ಸಮಿತಿಗಳ ಅಧ್ಯಕ್ಷ ರಾಗಿದ್ದು ಅವರ ಸಹಾಯದಿಂದಲೇ ಆ ಕೆಲಸಕಾರ್ಯ ಗಳು ನಡೆಯುವಂತೆ ಆಗಬೇಕು. ಹೀಗೆ ಮಾಡಿದರೆ ಈ ಬಗ್ಗೆ ಯಾರೊಬ್ಬರಿಗೂ ಟೀಕೆ ಮಾಡಲು ಅವಕಾಶ ವಿರಲಾರದೆಂದು ನನಗೆ ಎನ್ನಿಸುತ್ತಿದೆ. ಆದರೆ ಶ್ರೀ ಶಿವಪ್ಪನವರು ಕೆಲವು ವಿಚಾರದಲ್ಲಿ ಬಹಳವಾಗಿ ಕಟು ಟೀಕೆಗಳನ್ನು ಮಾಡಿದ್ದಾರೆ. ಆದರೆ ಅವರು ಯಾವ ದೃಷ್ಟಿ ಇಟ್ಟುಕೊಂಡು ಹಾಗೆ ಟೀಕೆ ಮಾಡಿ ದರೋ ನನಗೆ ಅದು - ಗೊತ್ತಾಗದು. ಜವಾ ಬ್ದಾರಿಯುತವಾದ ಸ್ಥಾನದಲ್ಲಿರತಕ್ಕವರು ಈ ರೀತಿ ಟೀಕೆ ಮಾಡಲು ಯಾರಿಗೂ ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡುವುದು ಅತ್ಯಗತ್ಯ. ಮುಖ್ಯವಾಗಿ ಈ ಕಾರ್ಯ ಗಳು ಆಗಬೇಕಾಗಿದ್ದರೆ ಸರ್ಕಾರದವರು ಈ ಬಗ್ಗೆ ಅತ್ಯಗತ್ಯವಾಗಿ ಬೇಕಾಗಿರುವಂಥ ಭೂಮಿಯನ್ನು ಸುಲಭವಾಗಿ ಒದಗಿಸತಕ್ಕ ಒಂದು ಏರ್ಪಾಡನ್ನು ಮಾಡ ಬೇಕಾಗಿದೆ. ಶಾಲೆಗಳಿಗೆ ಇತ್ಯಾದಿ ಬಾಬುಗಳಿಗೆ ಭೂಮಿಯ ಅಗತ್ಯ ಇದೆ. ಎಲ್ಲ ವಿಚಾರಗಳಲ್ಲೂ ಆ ಸಮಾಜ ವಿಕಾಸ ಮತ್ತು ರಾಷ್ಟ್ರೀಯ ವಿನ್ಯರ್ಣಾ ಯೋಜನೆಗಳ ಸಲಹಾ ಸಮಿತಿಗಳು ಒಂದು ಒಪ್ಪಿಗೆಗೆ ಬಂದ ನಂತರ ಈ ಭೂಮಿಯನ್ನು ಅವರು ಒಂದು ಎಮರ್ಜನ್ಸಿ ರೀತ್ಯಾ ತೆಗೆದುಕೊಳ್ಳಲು ಅವುಗಳಿಗೆ ಒಂದು ವಿಶೇಷ ಅವಕಾಶವಿರಬೇಕು. ಈಗಿರುವ ನಿಬಂಧನೆಗಳ ಪ್ರಕಾರ ಹೋದರೆ ಮೂರು-ನಾಲ್ಕು ವರ್ಷಗಳಾದರೂ ಭೂಮಿ ಸಿಕ್ಕುವುದಿಲ್ಲ. ಆದ್ದರಿಂದ ಈ ಒಂದು ಕಾರ್ಯವನ್ನು ಸರ್ಕಾರದವರು ಈಗ ಮಾಡ ಬೇಕಾಗಿದೆ. ಮತ್ತು ನಾವು ಎಲ್ಲ ವಿಚಾರಗಳಿಗೂ ಶಿಕ್ಷಣ ಬಹಳ ಮಹತ್ವದ್ದಿದೆ ಎಂದು ಹೇಳುತ್ತಿದ್ದೇವೆ. ಈ ಯೋಜನೆಯಲ್ಲೂ ಆ ಶಿಕ್ಷಣದ ಬಗ್ಗೆ ಕೆಲವು ಹಣ ಉಂಟು. ಈ ಹಣ ಮಾತ್ರವೇ ಅಲ್ಲದೆ ಇದಕ್ಕೆ ಸ್ಪೆಷಲ್ ಫಂಡುಗಳನ್ನು ದೊರಕಿಸಿಕೊಳ್ಳುವುದಕ್ಕೂ ಕೂಡ ಅವಕಾಶ ಉಂಟು. ರಾಜ್ಯ ಸರ್ಕಾರದವರ ಜವಾ ಬ್ದಾರಿಯೂ ಇದೆ. ಇಂಥ ನಾಲ್ಕು ಐದು ಡಿವಿಜ್ಞ ಗಳಲ್ಲಿ ಯಾವುದಾದರೊಂದು ಹೆಚ್ಚು ಜವಾಬ್ದಾರಿ ಯುತವಾಗಿ ಯೋಗ್ಯರೀತಿಯಲ್ಲಿ ಈ ಸಮಾಜ ವಿಕಾಸ ಕಾರ್ಯಗಳನ್ನು ನಡೆಸತಕ್ಕಂಥ ಕೇಂದ್ರದಲ್ಲಿ ಒಂದು ರೆಸಿಡೆಷಿಯಲ್ ಹೈಸ್ಕೂಲನ್ನು ಸ್ಥಾಪನೆ ಮಾಡ ಬೇಕು. ಈ ವಿಚಾರದಲ್ಲಿ ಯಾವ ಒಂದು ಕೇಂದ್ರ ಒಳ್ಳೇ ರೀತಿಯಲ್ಲಿ ಕೆಲಸಮಾಡಲು ಮುಂದೆ ಬರುತ್ತ ದೆಯೋ ಅಂಥ ಕೇಂದ್ರದಲ್ಲಿ ಈ ಹೈಸ್ಕೂಲನ್ನು ಪ್ರಾರಂಭಿಸಬೇಕು. ಆದರೆ ನಾಲ್ಕು ಐದು ಲಕ್ಷ ರೂಪಾಯಿಗಳು ಈ ಸ್ಕೂಲಿನ ನಲುವಾಗಿ ಬೇಕಾಗು ವುದು. ಇದಕ್ಕೆ ಕೇಂದ್ರ ಸರ್ಕಾರದಿಂದಲೂ ಹಣ ದೊರಕಿಸಿಕೊಳ್ಳಬೇಕು. ಸ್ಥಾನಿಕವಾಗಿಯೂ ಕೆಲವು ಹಣವನ್ನು ದೊರಕಿಸಿಕೊಳ್ಳಬೇಕು. ಹೀಗೆ ಮಾಡಿದರೆ ಇದರಿಂದ ಒಂದು ಹೆಲ್ತ್ ಪೈಲೋಟ ಬೆಳೆಯುವುದಕ್ಕೆ ಪ್ರಾರಂಭವಾಗುತ್ತದೆ. ಇಂಥಾ ಒಂದು ಯೋಜನೆ ಯಲ್ಲಿ ನಾವು ಇಂಥ ಒಂದು ಕೆಲಸ ಮಾಡಿದ್ದೇವೆಂದು ಹೇಳಲು ಒಂದು ಅವಕಾಶವಾಗುತ್ತದೆ. ಹೀಗೆ ಈ ಒಂದು ಏರ್ಪಾಡಿನಿಂದ ಎರಡು ಒಳ್ಳೆಯ ಉದ್ದೇಶ ಗಳನ್ನು ಸಾಧನೆ ಮಾಡಿದ ಹಾಗೆ ಆಗುತ್ತದೆ. ಹೀಗೆ ಈ ಐದು ಆರು ವರ್ಷಗಳಲ್ಲಿ ಐದು ಆರು ಹೈಸ್ಕೂಲು ಗಳನ್ನು ಒಂದೊಂದು ಪ್ರದೇಶದಲ್ಲಿ ಪ್ರಾರಂಭ ಮಾಡಿ ದರೆ ಇದರಿಂದ ದೇಶ ಮುಂದುವರಿದಂತಾಗುತ್ತದೆ.

ಇನ್ನು ಶ್ರೀ ಅಣ್ಣಾರಾಯರು ಒಂದೊಂದು ಹಳ್ಳಿ ಗಳು ಇದರಲ್ಲಿ ಕವರಾಗಿದೆ ಮತ್ತೆ ಕೆಲವು ಹಳ್ಳಿಗಳು ಕವರಾಗಿಯೇ ಇಲ್ಲ ಎಂದು ಹೇಳಿದರು. ಇದ್ದು ಕೆಲವಷ್ಟಿಗಾದರೂ ಸತ್ಯ. ಹೀಗೆಯೇ ಕೊಡಬೇಕು

(ಶ್ರೀ ಎ. ಜೆ. ದೊಡ್ಡಮೇಟಿ)

ಎನ್ನುವ ಒಂದು ನಿಯಮವನ್ನು ಹಾಕಿಬಿಡಬೇಕು. ಏನು ನಿಯಮ ಹಾಕಬೇಕು ಎಂದರೆ; ಈ ಯೋಜನೆಗೆ ಒಳಪಡುವಂತಹ ಹಳ್ಳಿಗಳಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಒಂದು ಕಾರ್ಯವನ್ನು ಕೈಗೆಕೊಳ್ಳಬೇಕು ಎಂದು ಆ ಸಲಹಾ ಸಮಿತಿ ಹಾಕಬೇಕು. ಕೆಲವೊಂದು ನಿಯಮವನ್ನು ತಂದರೆ ಈ ಸಲಹಾ ಸಮಿತಿ ತನ್ನ ಕಾರ್ಯವನ್ನು ಸರಿಯಾದ ರೀತಿಯಲ್ಲಿ ಮಾಡಬಹುದು. ಈ ಯೋಜನೆಗೆ ಸಂಬಂಧಪಟ್ಟ ಸೆಕ್ರೆಟರಿಗಳು ಈ ಸಲಹಾ ಸಮಿತಿಯಿಂದ ನೇಮಕವಾದರೆ ಒಳ್ಳೆಯದು. ಮಂತ್ರಿಗಳಿಗೆ ಇದರಿಂದ ಅನುಕೂಲವಾಗುತ್ತದೆ. ಅಲ್ಲದೆ ಈಚೆಗೆ ಈ ರೆಡ್‌ಟೇಪಿನಂ ಎನ್ನುವುದು ಸಹಜವಾಗಿ ಬೆಳೆಯುತ್ತಿದೆ. ಒಂದು ಇಂಜನ್ನು ಒಬ್ಬ ರೈತನಿಗೆ ದೊರಕಬೇಕು ಮತ್ತು ಎರಡು ಅಥವಾ ಎರಡೂವರೆ ಸಾವಿರ ರೂಪಾಯಿಗಳ ಸಹಾಯವನ್ನು ದೊರಕಿಸಬೇಕು ಎಂದರೆ, ಈ ರೈತನಾದವನು ಆ ತಹಸೀಲ್ದಾರನ ಮನೆಗೋ ಅಥವಾ ಬೇರೆ ಆಫೀಸರುಗಳ ಮನೆ ಬಾಗಿಲಿಗೆ ಆರು ತಿಂಗಳ ಕಾಲ ತಿರುಗಬೇಕಾದ ಸ್ಥಿತಿ ಬಂದಿದೆ. ಅಲ್ಲದೆ ಕೆಲವು ಕಡೆ ತಾಲ್ಲೂಕು ಹೆಡ್‌ಕ್ವಾರ್ಟರಿಗೂ ಹಳ್ಳಿಗೂ ಇಪ್ಪತ್ತು ಅಥವಾ ಮೂವತ್ತು ಮೈಲಿಗಳ ಮೇಲ್ಪಟ್ಟು ದೂರ ವಿರುತ್ತದೆ. ಇದಕ್ಕಾಗಿ ಈ ರೈತನಾದವನು ಬರಲಕ್ಕೆ ಪ್ರತಿ ಸಾರಿಯೂ ಬಸ್ಸಿಗೆ ಒಂದು ಐದು ರೂಪಾಯಿನ ರೊಕ್ಕ ಕಟ್ಟಿಕೊಂಡು ತಿರುಗಬೇಕಾಗುತ್ತದೆ. ಹೀಗೆ ಒಂದು ನೂರು ಅಥವಾ ನೂರೈವತ್ತು ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಬಂದರೂ ಸಾಕಷ್ಟು ಪ್ರಯೋಜನ ದೊರಕುವುದಿಲ್ಲ. ಅಲ್ಲದೆ ಇಲ್ಲಿ ಇನ್ನೂ ಅನೇಕ ಅಡಚಣೆಗಳಿವೆ, ಅದನ್ನು ಹೇಳಲಾರೆ, ಕೆಲವು ಮಟ್ಟಿಗೆ ಇವುಗಳ ವಿಷಯ ತಿಳಿದೇ ಇದೆ.

ಇನ್ನು ಈ ತಗಾಯಿ ಸಾಲಗಳನ್ನು ಎಲ್ಲ ಇರಾಖೆಗಳವರು ಕೊಡುತ್ತಿದ್ದಾರೆ. ಇದು ರೈತರ ಕೈಗೆ ಕೊಡಬೇಕಾಗಿದೆ. ನಾನು ನಮ್ಮ ಒಂದೇ ತಾಲ್ಲೂಕಿನ ಮಟ್ಟಿಗೆ ಹೇಳಬೇಕಾದರೆ, ಈ ತಗಾಯಿ ಸಾಲ ಹಾಗೇ ಉಳಿದಿದೆ. ರೋಣ ತಾಲ್ಲೂಕಿಗೆ ಎರಡು ಬ್ಲಾಕುಗಳುಂಟು. ಎರಡು ಬ್ಲಾಕುಗಳಿಂದಲೂ ಸುಮಾರು ಎಂಟು ಲಕ್ಷ ರೂಪಾಯಿಗಳಷ್ಟು ತಗಾಯಿ ಸಾಲಕೊಡಬೇಕಾಗಿದೆ. ಅಷ್ಟನ್ನೂ ಏಕೆ ಹಂಚಿಲ್ಲ? ಅಷ್ಟು ಕೇಳುವುದಕ್ಕೆ ರೂಲ್ಸುನಲ್ಲಿಯೂ ಅವಕಾಶವಿದೆ. ಕೆಲವು ರೂಲ್ಸುಗಳಂತೆ ಇದ್ದರೂ ನಿಕಾರೆ ಏಕೆ ಮಾಡಬಾರದು! ಮೂರು ತಿಂಗಳೊಳಗಾಗಿ ಈ ಕೆಲಸಗಳು ಪೂರೈಸಲಾಗದಿರುವುದಕ್ಕೆ ಕಾರಣವೇನು! ಅದನ್ನು ಕೇಳಿ. ಆ ರೀತಿ ಎಲ್ಲೆಲ್ಲಿ ಮೂರು ತಿಂಗಳೊಳಗಾಗಿ ಈ ರೀತಿ ಯಾದ ಅರ್ಜಿಗಳು ಬರುವುದಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀವೆ ಎಂದು ಸ್ಪಷ್ಟವಾಗಿ ಸೂಚನೆ ಕೊಡಿ. ಮೂರು ತಿಂಗಳೊಳಗೆ ತಗಾವಿ ಸಾಲದ ಅರ್ಜಿಗೆ ಯಾವ ವಿಧವಾದ ವಶೀಲಿ ಭಾಜಿಯೂ ಬರಲಾರದೆಂದು ಹೇಳಬಲ್ಲೆ. ಕೊನೆಯ ತೀರ್ಮಾನ ಮೂರು ತಿಂಗಳು ಎಂದು ಹಾಕಿಕೊಳ್ಳಬೇಕು. ಅಲ್ಲದೆ ನಮ್ಮ ಈ ಬ್ಲಾಕುಗಳಲ್ಲಿ ಖರ್ಚಾಗದೆ ಇರುವುದಕ್ಕೆ ಒಂದೇ ಕಾರಣವಲ್ಲ, ಇನ್ನೂ ಅನೇಕ ಕಾರಣಗಳಿರುತ್ತವೆ. ಅಲ್ಲದೆ, ಸ್ಥಾನಿಕ ಸರಕಾರಗಳು ಗಜೇಂದ್ರಗಡದ ಹಳ್ಳಿಗಳವರೆಗೆ ತಗಾಯಿ ಸಾಲವನ್ನು ಕೊಡುವುದಕ್ಕೆ ಶಕ್ಯವಿಲ್ಲ, ಸಾಧ್ಯವಾದಷ್ಟುಮಟ್ಟಿಗೆ ಈ ಸಾಲಗಳನ್ನು ರಾವಣಿ ರೂಲ್ಸಿನ ಪ್ರಕಾರ ಕೊಡುತ್ತಾರೆ. ಅದರಲ್ಲೂ ವಾರ್ಷಿಕ ಕುಳ ಯಾವುದು ಮತ್ತು ಪರ್‌ಮನೆಂಟಾಗಿರುವ ಕುಳ ಯಾವುದು ಎನ್ನುವುದನ್ನು ನೋಡಿ ಅದರಂತೆ ಸಾಲ ಸಿಕ್ಕಬಹುದು ಎಂದು ಹೇಳುತ್ತಾರೆ.

ಇನ್ನು ಹಳ್ಳಿಗಳಲ್ಲಿ ಸ್ಥಾನಿಕವಂತಿಕೆಗಳ ಏರ್ಪಾಡು ಇದೆ. ಈಗ ಹಳ್ಳಿಗಳಲ್ಲಿ ಅವರೇ ಕೊಡಬೇಕಾದ ಸ್ಥಾನಿಕವಂತಿಕೆಗಳು ಸುಮಾರು ನೂರಕ್ಕೆ ಐವತ್ತರಷ್ಟಿದೆ ಮತ್ತು ಹಾಗೆಯೇ ಕೊಟ್ಟಿದ್ದಾರೆ. ಇದನ್ನು ನೂರಕ್ಕೆ ಇಪ್ಪತ್ತೈದಕ್ಕಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಈಗ ನಾವೆಲ್ಲ ನೋಡಿದ್ದೇವೆ, ಹಳ್ಳಿಗಳಲ್ಲಿ ಅಥವಾ ಕೆಲವು ಊರುಗಳಲ್ಲಿ ಸಿಡಾಂಬರ ರಸ್ತೆ ಮಾಡಲಕ್ಕೆ ಅಥವಾ ಮನೆಗಳನ್ನು ಕಟ್ಟಿಸಲಕ್ಕೆ ಬೇಕಾದಷ್ಟು ಹಣವು ಖರ್ಚಾಗುತ್ತಿದೆ ಮತ್ತು ಹಳ್ಳಿಗಳಲ್ಲಿ ನೂರಕ್ಕೆ ಐವತ್ತರಷ್ಟು ಜನಗಳು ಕೊಡಬೇಕು ಎಂದಿದೆ. ಇದನ್ನು ನೂರಕ್ಕೆ ಇಪ್ಪತ್ತೈದಕ್ಕಿಂತ ಮೇಲ್ಪಟ್ಟು ಆಗದಂತೆ ನೋಡಿಕೊಳ್ಳಬೇಕು. ಇದು ಬಹಳ ಮುಖ್ಯವಾದುದು. ಅಲ್ಲದೆ ಈ ಸಲಹಾ ಸಮಿತಿಗೆ ಮುಖ್ಯಮಂತ್ರಿಗಳೇ ಚೇರ್ಮನ್ನರಾಗಿರಬೇಕು. ಆದರೆ ಈಗ ಡೆಪ್ಯುಟೀ ಮಿನಿಸ್ಟರವರು ಚೇರ್ಮನ್ನರಾಗಿರುವುದರಿಂದ ಅವರ ಗೌರವ ಕಡಮೆಯಾಗುತ್ತದೆ ಎನ್ನುವ ಪ್ರಶ್ನೆಯಲ್ಲ. ಈ ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಬಹಳ ಮಹತ್ವ ಬರಬೇಕಾದರೆ ಈ ಸಲಹಾ ಸಮಿತಿಗೆ ಮುಖ್ಯಮಂತ್ರಿಗಳೇ ಚೇರ್ಮನ್ನರಾಗಿರಬೇಕು. ಇದಕ್ಕಾಗಿ ಬೇಕಾದರೆ ನಮ್ಮ ಮುಖ್ಯಮಂತ್ರಿಗಳು ಬೇರೆ ಕೆಲಸಗಳನ್ನೆಲ್ಲ ಒತ್ತಟ್ಟಿಗಿಟ್ಟು ಈ ಯೋಜನೆ ಬಗ್ಗೆ ಹಳ್ಳಿಗಳನ್ನು ಮುಂದಕ್ಕೆ ತರಲು ಬೇಕಾಗುವ ಕೆಲಸ ಕಾರ್ಯಗಳನ್ನು ಅವರೇ ಮಾಡಬೇಕು. ಇದು ಅಷ್ಟು ಮುಖ್ಯವಾದ ಕೆಲಸ. ಹೀಗೆ ಮಾಡಿದರೆ ಈ ಸಮಾಜ ವಿಕಾಸ ಯೋಜನೆಗೆ ಒಂದು ಮಹತ್ವ ಬರುತ್ತದೆ ಮತ್ತು ಅಭಿವೃದ್ಧಿಯಾಗುತ್ತದೆ. ಅಲ್ಲದೆ ಎಷ್ಟೋ ಕಡೆ ಈ ಬ್ಲಾಕುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ನಮ್ಮ ತಾಲ್ಲೂಕಾದ ರೋಣದಲ್ಲಿ ಎರಡು ಬ್ಲಾಕುಗಳು ಉಂಟು. ಈ ರೋಣದಿಂದ ಒಂದು ತಾಲ್ಲೂಕು ಆಫೀಸಿಗೆ ಎಂಟು ಮೈಲಿಗಳ ದೂರ ವಿದೆ. ಈ ತಾಲ್ಲೂಕು ಕೇಂದ್ರವಾದ ಗಜೇಂದ್ರಗಡಕ್ಕೂ ನಮ್ಮ ರೋಣಕ್ಕೂ ಟೆಲಿಫೋನಿನ ಸೌಕರ್ಯವಿಲ್ಲ. ಅದರಿಂದ ಇಲ್ಲಿಗೆ ಟೆಲಿಫೋನಿನ ಸಂಪರ್ಕವನ್ನು ಕಲ್ಪಿಸಿಕೊಡಬೇಕಾದದು ಅಗತ್ಯವಾಗಿದೆ. ಇದರಿಂದ ದೇಶದಲ್ಲಿರುವ ಸಮಾಜ ವಿಕಾಸ ಯೋಜನೆಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಿವೆ ಎನ್ನುವುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈ ರೀತಿಯಾಗಿ ಒಂದು ಟೆಲಿಫೋನಿನ ಸೌಕರ್ಯಗಳನ್ನು ಕೊಡಬೇಕೆಂದು ಈ ಬ್ಲಾಕುಗಳ ಸಲಹಾ ಸಮಿತಿಯಲ್ಲಿಯೂ ಒಂದು ಠರಾವನ್ನು ಮಾಡಿ ಸರಕಾರಕ್ಕೆ ಕಳುಹಿಸಿತ್ತು. ಆ ನಿರ್ಣಯದ ಪ್ರಕಾರವಾದರೂ ಈ ಟೆಲಿಫೋನಿನ ವ್ಯವಸ್ಥೆ ಮಾಡಬೇಕು. ಇದರಿಂದ ರೋಣಕ್ಕೂ ತಾಲ್ಲೂಕು ಕೇಂದ್ರಕ್ಕೂ ಹೆಚ್ಚಿನ ಸಂಪರ್ಕ ಬೆಳೆಯಲು ಅನುಕೂಲವಾಗುತ್ತದೆ. ಅದರಿಂದ ಈ ಟೆಲಿಫೋನಿನ ಸೌಕರ್ಯವನ್ನು ಕೊಡಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ; ಮತ್ತು ಎಲ್ಲೆಲ್ಲಿ ಈ ಬ್ಲಾಕುಗಳ ಏರ್ಪಾಡು ನಡೆಯುತ್ತಿದೆಯೋ ಅಲ್ಲಗೆಲ್ಲ ಈ ರೀತಿಯಾದ ಟೆಲಿಫೋನಿನ ಮತ್ತು ತಂತಿ ಸೌಕರ್ಯಗಳನ್ನು ವ್ಯವಸ್ಥೆ ಮಾಡಬೇಕು ಎಂದು ಹೇಳಿ ಈ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

[SRI J. H. SHAMSUDDIN in the Chair]

*ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).— ಮಾನ್ಯ ಅಧ್ಯಕ್ಷರೇ, ಈಗಾಗಲೇ ನನ್ನ ಮಿತ್ರರನೇಕರು ಈ ವಿಚಾರದಲ್ಲಿ ಬಹಳ ಗಹನವಾಗಿ ಮಾತನಾಡಿದ್ದಾರೆ. ನಾನೇನೂ ಹೊಸದಾಗಿ ಈ ಕೆಲಸ ಕಾರ್ಯಗಳ

ವಿಚಾರದಲ್ಲಿ ಹೇಳಲು ಬಯಸುವುದಿಲ್ಲ. ಒಂದೆರಡು ವಿಚಾರಗಳನ್ನು ಸರಕಾರದ ಅವಗಾಹನೆಗೆ ತರಲು ನಾನು ಬಯಸುತ್ತೇನೆ. ಎನ್.ಇ.ಎಸ್, ಬ್ಲಾಕು ಗಳನ್ನು ಆಯಾ ತಾಲ್ಲೂಕಿನ ಮಟ್ಟದಲ್ಲಿ ಕೊಡಲಾಗು ತ್ತಿದೆ ಮತ್ತು ಅಲ್ಲಿ ಕೆಲಸ ಮಾಡತಕ್ಕ ನೌಕರರು ಪಾನ ಮಾಡಲಿಕ್ಕೆ, ಅಲ್ಲರತಕ್ಕ ಇಂಜಿನೀಯರುಗಳು ಮತ್ತು ಬ್ಲಾಕು ಡೆವಲಪ್‌ಮೆಂಟ್ ಆಫೀಸರುಗಳಿಗೆ ಮನೆಗಳ ಸೌಕರ್ಯಗಳನ್ನು ಎಲೆಕ್ಟ್ರಿಕ್ ಇಲಾಖೆಯಲ್ಲಿ ಯಾವ ರೀತಿ ಒದಗಿಸಿಕೊಟ್ಟಿದ್ದಾರೋ ಅದೇ ರೀತಿ ಒದಗಿಸಿಕೊಡುವ ಒಂದು ಪದ್ಧತಿಯನ್ನೂ ಅವಲಂಬಿಸುತ್ತಿದ್ದಾರೆ. ಬಹಳ ಸಂತೋಷ.

ಈ ಕಟ್ಟಡಗಳನ್ನು ಕಟ್ಟತಕ್ಕ ನಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅನ್ವಯಿಸುತ್ತಿದ್ದಾರೆಯೋ ಅದು ಬಹಳ ಶೋಚನೀಯವಾದ ವಿಚಾರ. ಸಾಧಾರಣವಾಗಿ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಎನ್.ಇ.ಎಸ್. ಬ್ಲಾಕು ಆಫೀಸು ಇರತಕ್ಕದ್ದು ಬಹಳ ಮುಖ್ಯ. ತಾಲ್ಲೂಕು ಆಫೀಸು ತಾಲ್ಲೂಕಿಗೆಲ್ಲ ಬಹಳ ಪ್ರಾಮುಖ್ಯವಾದುದು. ಈ ಆಫೀಸನ್ನು ಅಲ್ಲಗೆ ತರ ಬೇಕಾದುದು ಮುಖ್ಯ. ನಮ್ಮ ತಾಲ್ಲೂಕಿಗೆ ಒಂದು ಬ್ಲಾಕನ್ನು ಕೊಟ್ಟಿದ್ದಾರೆ. ಅದು ಯಾವ ರೀತಿ ನಡೆಯುತ್ತಿದೆ, ಇಲ್ಲ ಎನ್ನುವುದು ನಮ್ಮ ಮಾನ್ಯ ಉಪನಚಿವರ ಗಮನಕ್ಕೆ ತರಬೇಕಾಗಿದೆ. ಇದ ಕ್ಕಾಗಿ ಕಟ್ಟುವ ಡೆವಲಪ್‌ಮೆಂಟ್ ಆಫೀಸಿನ ಕಟ್ಟಡ ವನ್ನು ಹೇಗೆ ಕಟ್ಟಿಸಿದ್ದಾರೆ ಎನ್ನುವುದನ್ನು ಸ್ವಲ್ಪ ನೂಕ್ಷ್ಮವಾಗಿ ವಿಚಾರ ಮಾಡಬೇಕಾಗಿದೆ. ತಾಲ್ಲೂಕು ಆಫೀಸಿನ ಸುತ್ತಮುತ್ತ ಬ್ಲಾಕು ಡೆವಲಪ್‌ಮೆಂಟು ಆಫೀಸಿನ ಗುಮಾಸ್ತರುಗಳ ಮತ್ತು ಇಂಜಿನೀಯರು ಗಳ ಆಫೀಸನ್ನು ಕಟ್ಟಿಸಿ ತಾಲ್ಲೂಕು ಆಫೀಸಿನ ಅಂದ ವನ್ನೇ ಹಾಳುಮಾಡರಾಗಿದೆ. ಇದನ್ನು ಸಂಬಂಧ ಪಟ್ಟ ಅಧಿಕಾರಿಗಳು ಹೋಗಿ ನೋಡಿದರೆ ಅವರಿಗೇ ಗೊತ್ತಾಗುತ್ತದೆ.

ಶ್ರೀಮಾನ್ ವೀರಪ್ಪನವರು ಅರಕಲಗೂಡು ಬ್ಲಾಕು ಡೆವಲೆಪ್‌ಮೆಂಟ್ ಆಫೀಸು ಕಟ್ಟಡವನ್ನು ಎಲ್ಲಿ ಕಟ್ಟ ಬೇಕು, staff quarters ಎಲ್ಲಿ ಕಟ್ಟಬೇಕು ಎನ್ನುವ ವಿಚಾರದಲ್ಲಿ ಜಿಜ್ಞಾಸೆ ಬಂತು ಎಂದು ಹೇಳಿದರು. ಸ್ಮಶಾನದಲ್ಲಿ ಕಟ್ಟಬೇಕೆಂದು ಇದ್ದಾರೆನ್ನುವ ವಿಷಯ ನನಗೂ ಗೊತ್ತು. ಶಾಶ್ವತವಾಗಿರತಕ್ಕ ಕಟ್ಟಡವನ್ನು ಕಟ್ಟುವಾಗ ಆಫೀಸುಗಳು ಇರುವಕಡೆ ಕಟ್ಟದೆ, ಸ್ಮಶಾ ನದಲ್ಲಿ ಕಟ್ಟಬೇಕು ಎಂದು ಯಾರ ಪ್ರಭಾವಕ್ಕೆ ಒಳಗಾಗಿ ತೀರ್ಮಾನಿಸಿದ್ದಾರೆಂದು ಗೊತ್ತಾಗುವುದಿಲ್ಲ. ಮುಂದೆ ಊರು ಬಡಾವಣೆಯಾಗುತ್ತದೆಂಬ ಕಾರಣದ ಮೇಲೆ ಹಾಗೆ ಮಾಡಿದ್ದೇವೆ ಎಂದು ಹೇಳಬಹುದು. ಏನೇ ಆದರೂ ಸ್ಮಶಾನದಲ್ಲಿ ಕಟ್ಟತಕ್ಕದ್ದು ಯಾವ ನೀತಿ ಎನ್ನು ವುದು ಗೊತ್ತಾಗುವುದಿಲ್ಲ.

ಯಾವ ಕೆಲಸಕಾರ್ಯಗಳನ್ನು ಮಾಡಬೇಕಾದರೂ ವಿವೇಚನೆ ಇರಬೇಕು. ಅಧಿಕಾರಿಗಳಿಗೆ ಜೀಪುಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಹೋಗಲು, ಬರಲು, ಆದರೆ ಯಾರನ್ನು ಜೊತೆಯಲ್ಲಿ ಕರೆದುಕೊಂಡು ಹೋಗ ಬಹುದು, ಯಾರನ್ನು ಬಿಟ್ಟು ಹೋಗಬಹುದು ಎನ್ನುವ ಯೋಚನೆಯೇ ಇಲ್ಲ. ಇದನ್ನು ನಾನು ಬಹಳ ವಿಷಾದ ದಿಂದ ಹೇಳಬೇಕಾಗಿದೆ. ಸೋಷಿಯಲ್ ವರ್ಕರ್ಸ್ ಇದ್ದಾರೆ. ಅವರೆಲ್ಲರೂ ಚಿಕ್ಕ ವಯಸ್ಸಿನ ವರು. ಅನೇಕರಿಗೆ ಮದುವೆಯೇಇಲ್ಲ. ಕೆಲವರಿಗೆ ಮದುವೆಯಾಗಿರಬಹುದು. ಶೇಕಡ 20-25 ಜನ ಮದುವೆಯಾಗಿರುವವರು ಇದ್ದರೆ ಇರಬಹುದು ಎಂದು ತೋರುತ್ತದೆ. ಮದುವೆಯಾಗಿರುವವರು ಇದ್ದಾರೆಯೇ ಎನ್ನುವ ಸಂಶಯ ಬರುತ್ತದೆ. ನಾನು ನೋಡಿರುವ ಕಡೆಗಳಲ್ಲೆಲ್ಲ ಮದುವೆಯಾಗಿಲ್ಲದೆ ಇರುವೆ ಸೋಷಿ ಯಲ್ ವರ್ಕರ್ಸ್ ಇದ್ದಾರೆ. ಅವರು ಹಳ್ಳಿಗಳಿಗೆ ಹೋಗಿ ಜನಗಳಿಗೆ ಒಳ್ಳೆಯ ಹಾಲನ್ನು ಕೊಡತಕ್ಕದ್ದು, ಮಕ್ಕಳನ್ನು ಸಾಕುವ ವಿಷಯದಲ್ಲಿ ತರಬೇತನ್ನು ಕೊಡ ತಕ್ಕದ್ದು, ಮುಂತಾದ ಕೆಲಸಗಳಿಗಾಗಿ ನೇಮಕವಾಗಿ ದ್ದಾರೆ. ಅದರೆ ಇವರು 24 ಗಂಟೆಗಳ ಕಾಲವೂ B.D.O. ಜೊತೆಯಲ್ಲಿ ಜೀಪಿನಲ್ಲಿ ತಿರುಗುತ್ತಿರುತ್ತಾರೆ. ಹಳ್ಳಿಗಳಿಗೆ ಒಬ್ಬಂಟಿಗರಾಗಿ ಹೋದುದನ್ನು ಎಲ್ಲಿಯೂ ನೋಡಿಲ್ಲ. ಇದು ನಮ್ಮ ದುರದೃಷ್ಟವೆಂದು ಕಾಣು ತ್ತದೆ. ಯಾವ ಒಂದು ಒಳ್ಳೆಯ ಉದ್ದೇಶದಿಂದ ಇವರನ್ನು ನೇಮಕ ಮಾಡಿದರೋ, ಅದು ನೆರವೇರು ತ್ತಿಲ್ಲ. ಅಲ್ಲರತಕ್ಕ ಜನಗಳು ಈ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ಹೇಳದೆ ಗತ್ಯಂತರವಿಲ್ಲ.

ಪ್ರತಿಯೊಂದು ಬ್ಲಾಕಿನಲ್ಲಿಯೂ B.D.O. ಗಳು ನರಿಯಾಗಿ ಕೆಲಸಮಾಡುತ್ತಾರೆಯೇ, ಎಷ್ಟು ದುಡ್ಡನ್ನು ಯಾವ ಯಾವ ಕೆಲಸಗಳಿಗೆ ಖರ್ಚುಮಾಡು ತ್ತಾರೆ, ದುಡ್ಡನ್ನು ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡುತ್ತಾರೆಯೇ ಇಲ್ಲವೇ ಎಂಬುದನ್ನೆಲ್ಲ ತನಿಖೆ ಮಾಡುವುದಕ್ಕೆ ಆಫೀಸಿನಿಂದ ಯಾರೂ ಹೋಗುವುದಿಲ್ಲ. ಡೆವಲಪ್‌ಮೆಂಟ್ ಕಮಿಷನರ್ ಹೋಗುವುದಿಲ್ಲ, ಅವರ ಕೈ ಕೆಳಗೆ ಇರತಕ್ಕ ಅಸಿಸ್ಟೆಂಟ್ ಕಮಿಷನರ್ ಹೋಗು ವುದಿಲ್ಲ. ಡಿಸ್ಟ್ರಿಕ್ಟಿನಲ್ಲಿ ಡಪ್ಯುಟಿ ಕಮಿಷನರೂ, ಅವರ ಕೈ ಕೆಳಗೆ ಸಬ್ ಡಿವಿಜನ್ ಆಫೀಸರುಗಳೂ ಇದ್ದಾರೆ, ಇವರು ಯಾರಾದರೂ ಯಾವ ಯಾವುದಕ್ಕೆ ಹಣ ಖರ್ಚಾಗುತ್ತಿದೆಂದು ಯೋಚನೆ ಮಾಡಿದ್ದಾರೆಯೇ ? ಸಲಹಾಸಮಿತಿಗಳನ್ನು ಕೇಳದೆ ಹಣವನ್ನು ಖರ್ಚು ಮಾಡಿರುವುದು ಏಕೆ ಎಂದು ಯಾರನ್ನಾದರೂ ಕೇಳಿ ದ್ದಾರೆಯೇ ? ಒಂದು ಊರಿನಲ್ಲಿ ಪೋರಿಯನ್ನು ಕಟ್ಟು ವುದಕ್ಕೆ ಸಹಾಯಮಾಡಿ ಎಂದರೆ ಅಲ್ಲಿಗೆ ಸಹಾಯ ಮಾಡುವುದಿಲ್ಲ. ಇನ್ನೊಂದು ಕಡೆಗೆ ಸಹಾಯ ಮಾಡುತ್ತಾರೆ. ಕೆಲವು ಕಡೆ ಊರಿನವರು ದುಡ್ಡು ಕೊಡದೆ ಇದ್ದರೂ ಸಹ ಸಹಾಯಮಾಡಿ ಕೆಲಸ ಮಾಡಿ ಸುತ್ತಾರೆ. ಸಾಧಾರಣವಾಗಿ ಎರಡು ಸಾವಿರ ರೂಪಾಯಿ ಖರ್ಚಿನಲ್ಲಿ ಒಂದು ಪೋರಿ ಆಗುವಹಾಗಿ ದ್ದರೆ, ಅದನ್ನು ಕಟ್ಟುವುದಕ್ಕೆ ಮೂರೂವರೆ ಸಾವಿರ ರೂಪಾಯಿಗಳ ಅಂದಾಜನ್ನು ತಯಾರುಮಾಡಿ, ಊರಿ ನವರಿಂದ ಒಂದುಕಾಸನ್ನೂ ತೆಗೆದುಕೊಳ್ಳದೆ, ಒಂದೂ ವರೆ ಸಾವಿರ ರೂಪಾಯಿಗಳನ್ನು ಊರಿನವರು ಕೊಟ್ಟಿ ದ್ದಾರೆಂದು ನುಳ್ಳು ದಾಖಲೆಯನ್ನು ತೆಗೆದುಕೊಂಡು ಕೆಲಸಗಳನ್ನು ಮಾಡಿರತಕ್ಕವು ಎಷ್ಟಿವೆ ಎಂದು ಕೇಳ ಬೇಕಾಗಿದೆ. ಹೀಗೆ ಅನ್ಯಾಯವಾಗಿ ಖರ್ಚು ಮಾಡತಕ್ಕ ದ್ದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಹೀಗಿದ್ದರೂ ಈ ವಿಚಾರದಲ್ಲಿ ಎಷ್ಟು ಹಣ ಯಾವ ಯಾವರೀತಿಯಲ್ಲ ಖರ್ಚಾಗಿದೆ, ಹಣವೇನಾದರೂ ಪೋಲಾಗಿದೆಯೇ ಎಂದು ಯೋಚನೆ ಮಾಡದೆ ಖರ್ಚುಮಾಡುವುದು ನ್ಯಾಯವಾದುದಲ್ಲ. ಸಂಬಂಧಪಟ್ಟ ಅಧಿಕಾರಿಗಳು ಅಥವ ಸಂಬಂಧಪಟ್ಟ ಮಂತ್ರಿಗಳು ಹೋದ ತಕ್ಷಣ ಎಲ್ಲೆಲ್ಲಿ ಏನೇನು ಆಗಿದೆ ಎಂದು ತೋರಿಸಲು ಭೂಪಟ ವನ್ನು ತಯಾರುಮಾಡಿದ್ದು, ಅದನ್ನು ತೋರಿಸುತ್ತಾರೆ. ಯಾರಾದರೂ ಮಂತ್ರಿಗಳು ಹೋಗಲಿ, ಬೇರೆಯಾರಾ ದರೂ ಹೋಗಲಿ ಅವರುಗಳು ನೋಡಿಕೊಂಡು ಹೋಗಲಿ ಎಂದು ಬೋರ್ಡುಗಳನ್ನೂ ಭೂಪಟಗಳನ್ನೂ ತೂಗು ಹಾಕುತ್ತಾರೆ. 23-24 ಆದಿಕರ್ಣಾಟಕ ಕಾಲೋ ನಿಗಳ ಸಂಬಂಧದಲ್ಲಿ ನಾನೇ ಶಿಫಾರ್ಸು ಮಾಡಿ ಅದನ್ನು ಅತ್ಯವಶ್ಯವಾಗಿ ಮಾಡಬೇಕು ಎಂದು ಹೇಳಿದ್ದೆ. ಒಂದಕ್ಕಾದರೂ ದುಡ್ಡು ಕೊಟ್ಟಿಲ್ಲ. ಕೆಲಸಕಾರ್ಯ

(ಶ್ರೀ ಬಿ. ಎನ್. ಬೋರಣ್ಣಗೌಡ)

ಗಳು ಆಗಿಲ್ಲ. ಆಗಾಗ್ಗೆ ನಾವು ಸಲಹೆಗಳನ್ನು ಕೊಡುತ್ತಿದ್ದರೂ ಅವುಗಳನ್ನು ಯಾರೂ ಕೇಳುತ್ತಿಲ್ಲ. ಇದು ನಮ್ಮ ದುರದೃಷ್ಟವೆಂದು ಕಾಣುತ್ತದೆ. ನಮ್ಮ ಕಷ್ಟವನ್ನು ಎಲ್ಲ ಹೇಳಬೇಕು? ಇವರ ಹತ್ತಿರ ಹೇಳಿದರೆ ಏನೂ ನಡೆಯುವುದಿಲ್ಲ. ನಮ್ಮ ಮಾತನ್ನು ಕೇಳಬಾರದೆಂದು ಮಾಡಿದ್ದಾರೆಂದು ತೋರುತ್ತದೆ.

B.D.O. ಗಳು ಜೀಪ್‌ಗಳಿಗೆ ಪೆಟ್ರೋಲ್ ಹಾಕಿಕೊಂಡು ಮನೆಯವರನ್ನೂ, ಸ್ನೇಹಿತರನ್ನೂ ಕರೆದುಕೊಂಡು ಚಿಕ್ಕಮಗಳೂರಿಗೆ ಹೋಗಿ ನಾಟಕವನ್ನು ನೋಡಿಕೊಂಡು ಬರುತ್ತಾರೆ. ನರಸೀಪುರದ ಸಬ್ ಡಿವಿಜನ್ ಆಫೀಸರನ್ನು ಕರೆದುಕೊಂಡು ಹೋಗಿದ್ದಾರೆ. ಹೀಗೆಲ್ಲ ಮನಸ್ಸು ಬಂದಹಾಗೆ ಖರ್ಚುಮಾಡುತ್ತಾರೆಂದು ಹೇಳಿದರೆ enquiry ಮಾಡುವುದಕ್ಕೆ ಲಂಚ ನಿರೋಧ ಶಾಖೆಯವರು ಹೋದರು. ಅವರಿಗೂ ಸುಣ್ಣ ಬಳಿದರೋ ಏನೋ ಗೊತ್ತಿಲ್ಲ. ಇದ್ದವಿಚಾರವನ್ನು ನಾನು ಹೇಳುತ್ತಿದ್ದೇನೆ.

ಇಷ್ಟು ಅವಕಾಶ ಕೊಟ್ಟಿದ್ದಕಾಗಿ ನಾನು ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ವೈ. ಮಂಜಯ್ಯ ಶೆಟ್ಟಿ (ಬೈಂದೂರು).–ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ಈ ಬೇಡಿಕೆಯನ್ನು ಸಮರ್ಥಿಸುವ ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ತಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. ಅಭಿವೃದ್ಧಿ ಯೋಜನೆ ಮೂಲಕವೇ ಹಳ್ಳಿ ಜನರ ಅಭಿವೃದ್ಧಿಯನ್ನು ಸಾಧಿಸುವ ಮಹತ್ತಾದ ಉದ್ದೇಶವನ್ನಿಟ್ಟುಕೊಂಡು ನಮ್ಮ ಸರ್ಕಾರದವರು ರಾಷ್ಟ್ರೀಯ ವಿಸ್ತರಣೆ ಯೋಜನೆ ಮತ್ತು ಸಾಮಾಜಿಕ ಅಭಿವೃದ್ಧಿ ಯೋಜನೆ ಮತ್ತು ಸ್ಥಳೀಯ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಸಾವಿರಾರು ವರ್ಷಗಳಿಂದಲೂ ಹಳ್ಳಿಗಳಲ್ಲಿ ಆಗದೆ ಇದ್ದ ಕಾರ್ಯಕಲಾಪಗಳು ಈ ಯೋಜನೆಗಳ ಮೂಲಕ ಆಗಿವೆ, ಸಾಧಿಸಲ್ಪಟ್ಟಿವೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅನೇಕ ಮಹನೀಯರು ಅನೇಕರೀತಿಯಿಂದ ಈ ಯೋಜನೆಗಳನ್ನು ಟೀಕಿಸಿದ್ದಾರೆ. ಟೀಕೆ ನಿರೋಧ ಸಮಾಧಾನಕರವೋ, ತೃಪ್ತಿಕರವೋ ಎಂದು ನನ್ನಲ್ಲಿಯೇ ಒಂದು ರೀತಿಯ ಅಸಮಾಧಾನ ಹುಟ್ಟಿದೆ. ಹಾಗಿದ್ದಾಗ್ಯೂ ಭಾಷಣ ಮಾಡುವಾಗ ಕೆಲವರು ಟೀಕಿಸುವಂಥಾದ್ದು ಒಂದು ರೀತಿಯಕ್ರಮವೆಂದು ಅವರ ಗ್ರಹಿಕೆಯಲ್ಲಿರಬಹುದು. ಆದರೆ ನನ್ನಮಟ್ಟಿಗೆ ಈ ಯೋಜನೆಗಳ ವಿಷಯವಾಗಿ ವಿಶೇಷ ಮಹತ್ತಾದ, ಯೋಗ್ಯವಾದ ಒಂದು ಅಭಿಪ್ರಾಯವಿದೆ ಎಂದು ಹೇಳಿದರೆ ಅದನ್ನು ತಪ್ಪುಗ್ರಹಿಸಲಾರರೆಂದು ನನ್ನ ಭರವಸೆ. ನಾನು ಬಂದಿರುವ ಕ್ಷೇತ್ರವಾದ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಸಮಾಜ ಅಭಿವೃದ್ಧಿ ಯೋಜನೆಯ ಕ್ಷೇತ್ರವಾಗಿದೆ. ನಮ್ಮ ಈ ಕ್ಷೇತ್ರಕ್ಕೆ, ದಕ್ಷಿಣ ಕನ್ನಡ ಜಿಲ್ಲೆ ಮದರಾಸು ಪ್ರಾಂತದಲ್ಲಿರುವಾಗಲೇ ಸುಮಾರು ನಾಲ್ಕುವರ್ಷಗಳ ಹಿಂದೆ ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ಮದರಾಸು ಸರ್ಕಾರದವರು ಮಂಜೂರು ಮಾಡಿದರು. ಆ ಯೋಜನೆಯ ಫಲವಾಗಿ ಬಹಳ ಹಿಂದುಳಿದ ಆ ಕ್ಷೇತ್ರವು ಅನೇಕ ವಿಧದಿಂದ ಮುಂದೆ ಸಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಆ ಕ್ಷೇತ್ರದಲ್ಲಿ ಶಾಲಾಕಟ್ಟಡಗಳು, ಹಾಗೂ ಆಸ್ಪತ್ರೆ, ಕಟ್ಟಡ, ಹಿರಿಗೆಮನೆ ಎಂದು ಸುಮಾರು 22 ಕಟ್ಟಡಗಳು ಈ ನಾಲ್ಕು ವರ್ಷಗಳಿಂದ ಆಗಿದೆ. ಸುಮಾರು 75 ಮೈಲಿ ಉದ್ದದ ರಸ್ತೆಗಳು ಸಹ ಆಗಿವೆ. ಹೆಚ್ಚಿಗೆ ರಸ್ತೆಗಳು ನಿರ್ಮಾಣವಾದುದರಿಂದ ಯಾವ ಯಾವ ಗ್ರಾಮಗಳಿಗೆ ವಾಹನಗಳಮೂಲಕ ಹೋಗಿ ಬರಲು ಸಾಧ್ಯವಿರಲಿಲ್ಲವೋ ಅಂಥ ಗ್ರಾಮಗಳಿಗೆಲ್ಲ ವಾಹನಗಳಮೂಲಕ ಹೋಗಿಬರುವಂಥ ಸಂದರ್ಭವನ್ನು ಈ ರಸ್ತೆಗಳು ನಮಗೆ ಒದಗಿಸಿಕೊಟ್ಟಿವೆ. ಹಾಗೆಯೇ ಅನೇಕ ರೀತಿಯಲ್ಲಿ ಅಭಿವೃದ್ಧಿಯನ್ನೂ ಸಾಧಿಸಿದ್ದೇವೆ. ಅಲ್ಲಲ್ಲಿ ಅಲ್ಪಸ್ವಲ್ಪ ತಪ್ಪುಗಳು ಇರಬಹುದು. ಆದರೆ ಇಂಥ ಯೋಜನೆ ಯಶಸ್ವಿಯಾಗಬೇಕಾದರೆ ಮೂರು ಕಾರ್ಯಗಳು ಅತ್ಯಾವಶ್ಯಕವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರಥಮತಃ ಆ ಕಾರ್ಯದಲ್ಲಿ ನಿರತರಾದ ಅಧಿಕಾರಿಗಳಲ್ಲಿ ತಮ್ಮ ಕಾರ್ಯದಲ್ಲಿ ಹೆಚ್ಚಿನ ಅನಕ್ತಿ ಇಡತಕ್ಕದ್ದು ಅತ್ಯಾವಶ್ಯಕ. ಎರಡನೆಯದಾಗಿ ಆ ಪ್ರದೇಶದ ಜನರಲ್ಲಿ ಉತ್ಸಾಹ ಮತ್ತು ಆ ಕಾರ್ಯಗಳಲ್ಲಿ ಆಗತ್ಯವುಳ್ಳ ಸಹಾನುಭೂತಿ ತೋರಿಸುವ ಮನಸ್ಸು ಮತ್ತು ಇಚ್ಛೆ ಇರಬೇಕಾದುದು ಆವಶ್ಯಕ. ಮೂರನೆಯದಾಗಿ ಇಲ್ಲಿ ಒಂದು ಟೀಕೆ ಮಾಡುವ ಬದಲಾಗಿ, ಆ ಯೋಜನೆಯ ಕ್ಷೇತ್ರದಿಂದ ಬಂದಿರುವ ನಾವು, ಲಕ್ಷಗಟ್ಟಲೆ ಜನರ ಪ್ರತಿನಿಧಿಯಾಗಿರುವ ನಾವು ನಮ್ಮ ಕರ್ತವ್ಯವನ್ನು, ನ್ಯಾಯವಾದರೀತಿ ನೆರವೇರಿಸಿ ಈ ಯೋಜನೆಯಲ್ಲಿ ಸಹಕರಿಸಿದರೆ ಖಂಡಿತವಾಗಿ ಅಂತಹ ಈ ಯೋಜನೆಯು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲವೆಂದು ನಾನು ನನ್ನ ಅನುಭವದಮೇಲೆ ಹೇಳಲು ಇಚ್ಛಿಸುತ್ತೇನೆ.

ಹೀಗೆ ಸರ್ಕಾರದ ಅಧಿಕಾರಿಗಳು ಕಾರ್ಯ ತತ್ಪರತೆ, ಜನರ ಸಹಾಯ, ಸಹಾನುಭೂತಿ ಹಾಗೂ ಜನತೆ ನಮ್ಮಲ್ಲಿ ವಿಶ್ವಾಸವಿಟ್ಟು ಪ್ರತಿನಿಧಿಯಾಗಿ ಕಳುಹಿಸಿರುವ ನಮ್ಮ ಸಹಾಯ ಸಹಾನುಭೂತಿಯನ್ನೂ ಕ್ರೋಢೀಕರಿಸಿ ಕೆಲಸಮಾಡಿದರೆ ಈ ಯೋಜನೆ ಯಶಸ್ವಿಯಾಗಿ ಜರಗುವುದರಿಂದ ಸಾವಿರಾರುವರ್ಷಗಳಿಂದ ನರಳುತ್ತಿರುವ ನಮ್ಮ ಬಡ ರೈತರು, ಹಳ್ಳಿಗರು ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ. ದೇಶದಲ್ಲಿ ಆಹಾರದ ಕೊರತೆ ಹೆಚ್ಚಿದೆಯೆಂದು ತಿಳಿದಿದ್ದೇವೆ. ಈ ದೃಷ್ಟಿಯಿಂದ ಹೆಚ್ಚಿಗೆ ಆಹಾರ ಒದಗಿಸಬೇಕೆಂದು ನಮ್ಮ ಮುಖಂಡರು ಆಗಾಗ್ಗೆ ತಿಳಿಸುತ್ತಿದ್ದಾರೆ. ಆದರೆ ಎಷ್ಟರಮಟ್ಟಿಗೆ ನಾವು ಅವರು ಹೇಳಿದ ಮಾತನ್ನು ಪಾಲಿಸುತ್ತಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಆಹಾರದ ಅಭಿವೃದ್ಧಿಯಾಗಬೇಕಾದರೆ ಅನೇಕ ಸವಲತ್ತುಗಳು ಅವಶ್ಯಕವೆಂಬುದನ್ನು ಹೇಳಬೇಕಾಗಿಲ್ಲ. ಬೀಜದ ಸವಲತ್ತು, ಗೊಬ್ಬರದ ಸವಲತ್ತು ಮುಂತಾದುವುಗಳನ್ನು ತಕ್ಕ ಕಾಲದಲ್ಲಿ ಸರ್ಕಾರದ ವತಿಯಿಂದ ಒದಗಿಸಬೇಕಾದ್ದು ಅವಶ್ಯಕವೆಂದು ನಾನು ಒತ್ತಿ ಹೇಳಲಿಚ್ಛಿಸುತ್ತೇನೆ. ಅನೇಕವೇಳೆ ಸಮಯ ಕಳೆದನಂತರ ಈ ಸವಲತ್ತುಗಳು ತಲಪುತ್ತವೆ. ಇದರಿಂದ ರೈತರಿಗೆ ವಿಶೇಷ ತೊಂದರೆಯಾಗುತ್ತವೆಂದು ಹೇಳುವ ಅವಶ್ಯಕತೆಯಿಲ್ಲ. ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವರೆ ನಿರಾವರಿ ಯೋಜನೆಗಳು ಪ್ರಾಮುಖ್ಯವಾದುವು ಎಂಬುದನ್ನು ನಾನು ಬೇರೆಯಾಗಿ ಹೇಳುವ ಅವಶ್ಯಕತೆಯಿಲ್ಲ. ಪ್ರತಿಯೊಂದು C.D. ಬ್ಲಾಕಿಗೂ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಸಣ್ಣಪುಟ್ಟ ನಿರಾವರಿ ಯೋಜನೆಯ ಬಗ್ಗೆ ಒದಗಿಸುತ್ತಾರೆ. ಆದರೆ ಈ ವಿಷಯದಲ್ಲಿ ಕೆಲಸ ತೃಪ್ತಿಕರವಾಗಿ ನಡೆದಿಲ್ಲವೆಂದು ಹೇಳಿದರೆ ತಪ್ಪಾಗಬಾರದು. ನನ್ನ ಕ್ಷೇತ್ರದಲ್ಲೆ ಒಂದು Community Block ಇದ್ದು ಈ ವಿಷಯದಲ್ಲಿ ನರಿಯಾಗಿ ಕೆಲಸ ನಡೆದಿಲ್ಲವೆಂದು ಹೇಳುತ್ತೇನೆ. ಆದರೆ ಇದು ಸರ್ಕಾರದ ತಪ್ಪಲ್ಲ. ಆ ಬ್ಲಾಕಿನ ಸೂಪರ್‌ವೈಸಿಂಗ್ ಎಂಜಿನಿಯರಿಗೆ ಕುಂದಾಪುರ ಬ್ಲಾಕಿನ ಕೆಲಸವನ್ನೂ ಕೊಟ್ಟಿರುವುದರಿಂದ, ಈ ನಿರಾವರಿಯ ಅನೇಕ ಕೆಲಸಗಳ ಬಗ್ಗೆ, ಎಸ್ಟಿಮೇಟುಗಳನ್ನೂ ಮಾಡುವುದಕ್ಕಾಗದೆ

ಇದ್ದುದರಿಂದ ಆ ಮಟ್ಟಿನ ಕೆಲಸ ಆಗಲಿಲ್ಲ ಎಂದು ತಿಳಿಸಲು ಬೇಸರಪಡುತ್ತೇನೆ. ದಯವಿಟ್ಟು ಈ ಕಷ್ಟವನ್ನು ಪರಿಗಣಿಸಿ ಸರ್ಕಾರದವರು ಬೈಂದೂರು ಬ್ಲಾಕಿನ ಎಂಜಿನಿಯರಿಗೆ ಈ ಬ್ಲಾಕಿನ ಕೆಲಸವನ್ನು ಮಾತ್ರ ಕೊಟ್ಟು, ಅಲ್ಲಿನ ನಿರಾವರಿ ಯೋಜನೆಗಳನ್ನು ಅತಿ ಶೀಘ್ರವಾಗಿ ಕೈಗೆಕೊಳ್ಳುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ವರ್ಷದಿಂದ ಅಲ್ಲಿದ್ದಾರೆ, ಅವರು?

ಶ್ರೀ ವೈ. ಮಂಜಯ್ಯಶೆಟ್ಟಿ.—ಬ್ಲಾಕು ಷುರುವಾದಾಗಿನಿಂದಲೂ ಇದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎರಡಕ್ಕೂ?

ಶ್ರೀ ವೈ. ಮಂಜಯ್ಯಶೆಟ್ಟಿ.—ಹೌದು. ಗ್ರಾಮಸೇವಕರ ವಿಷಯದಲ್ಲಿ ಬಹಳಮಟ್ಟಿಗೆ ನಮ್ಮ ಮಿತ್ರರು ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆ ಎಷ್ಟರಮಟ್ಟಿಗೆ ನಮಂಜಸವೋ ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗಿದ್ದಾಗ್ಯೂ ಗ್ರಾಮಸೇವಕರನ್ನು ಇಷ್ಟು ಕನಿಷ್ಠಸ್ಥಿತಿಯಲ್ಲಿಡುವುದು ಸರಿಯಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಗ್ರಾಮ ಸೇವಕರನ್ನು ಸರಿಯಾಗಿ ಗ್ರಾಮಸ್ಥರು ಉಪಯೋಗಿಸಿಕೊಂಡರೆ ಮತ್ತು ಅವರು ಮಾಡತಕ್ಕ ಕಾರ್ಯಕ್ಕೆ ಸಹಾಯ ಸಹಾನುಭೂತಿ ತೋರಿಸಿದರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಇದಲ್ಲದೆ, ಗ್ರಾಮಸೇವಕರಿಗೂ ಸಹ ಹೆಚ್ಚಿನ ಸವಲತ್ತುಗಳನ್ನು ಕೊಡುವುದರ ಅವಶ್ಯಕತೆಯಿದೆ. ಅವರನ್ನು ಬರೀ ಗ್ರಾಮದ ಸೇವಕರಾಗಿ ಇಡದೆ ಅವರಿಗೆ ಮೇಲು ತರಗತಿಯ ಹುದ್ದೆಯನ್ನೂ ಬಡ್ತಿಯನ್ನೂ ಕೊಟ್ಟು ಅವರಿಗೆ ತಮ್ಮ ಕೆಲಸದಲ್ಲಿ ಉತ್ಸಾಹ ಬರುವಂತೆ ಮಾಡುವುದು ಅತ್ಯಗತ್ಯವೆಂದು ನಾನು ಹೇಳಬಯಸುತ್ತೇನೆ.

ಇನ್ನು ರಾಷ್ಟ್ರೀಯ ವಿಸ್ತರಣಾಯೋಜನೆ, ಸಾಮೂಹಿಕ ಅಭಿವೃದ್ಧಿಯ ಯೋಜನೆಯ ಕ್ಷೇತ್ರಗಳಲ್ಲಿ ಕೈಗಾರಿಕಾ ಅಭಿವೃದ್ಧಿಯ ಯೋಜನೆಯ ಬಗ್ಗೆ ಸರ್ಕಾರದವರು ಮಾಡಿರತಕ್ಕ ಕಾರ್ಯ ಸಾಲದೆಂದು ನಾನು ಹೇಳಬಯಸುತ್ತೇನೆ. ಈ ಬಗ್ಗೆ ಹೆಚ್ಚು ಮನಸ್ಸು ಕೊಟ್ಟು ಹೆಚ್ಚಿನ ಸಹಾಯವನ್ನು ನೀಡಿ ಹಳ್ಳಿಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯ ನೀಡಬೇಕೆಂದು ನಾನು ಹೇಳಬಯಸುತ್ತೇನೆ.

ಈಗ ಬೈಂದೂರು C.D. ಬ್ಲಾಕಿನಲ್ಲಿ Women Welfare Extension ಯೋಜನೆಯನ್ನು ತಂದೊಡ್ಡಿದ್ದಾರೆ. ಆದರೆ ಅಲ್ಲಿ ಆ ಬಾಬನ ಕೆಲಸಕಾರ್ಯ ಏನೂ ಆಗಿಲ್ಲ. ಅದಕ್ಕೆ ಬೇಕಾದ ಹಣವನ್ನು ಸರ್ಕಾರದ welfare ಬೋರ್ಡಿನವರು ಕೊಟ್ಟು ಈ ಕಾರ್ಯ ಸರಿಯಾಗಿ ಆಗುವಂತೆ ಮಾಡಬೇಕೆಂದು ಹೇಳುತ್ತಾ, ಅಧ್ಯಕ್ಷರನ್ನೂ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಖೋತ್ (ನಡಲ್ಗ).—ಮಾನ್ಯ ಅಧ್ಯಕ್ಷರೇ, ಈವತ್ತಿನ ದಿವಸ ರಾಷ್ಟ್ರೀಯ ವಿಕಾಸ ಯೋಜನೆ, ಸಮಾಜ ವಿಕಾಸಯೋಜನೆ, ಲೋಕವಿಕಾಸ ಯೋಜನೆ ಎಂದು ಈ ಮೂರು ವಿಕಾಸ ಯೋಜನೆಗಳ ದೆಶೆಯಿಂದ ಎರಡುಕೋಟಿ ರೂಪಾಯಿಗಳನ್ನು ಮಂಜೂರುಮಾಡುವ ಕುರಿತು ಡಿಮ್ಯಾಂಡ್ ನಮ್ಮ ಮುಂದಿದೆ. ಈ ಡಿಮ್ಯಾಂಡಿನ particulars ಬಗ್ಗೆ ಅದರ ವಿಷಯವಾಗಿ ನಮ್ಮ ಎಷ್ಟೋ ಮಾನ್ಯ ಸ್ನೇಹಿತರು ಎಷ್ಟು ಹೇಳಬೇಕೋ ಅಷ್ಟು ಹೇಳಿದ್ದಾರೆ. ನಾನು ಇನ್ನು ಅದೇ ವಿಷಯದಲ್ಲಿ ಹೆಚ್ಚಿಗೆ ಹೇಳಬೇಕಾಗಿಲ್ಲ ಅದ್ದರಿಂದ ನಾನೇನಿದ್ದರೂ ಈ ಯೋಜನೆಯ ಹಿಂದಿರುವ ನೀತಿಯ ವಿಷಯದಲ್ಲಿ, policy ವಿಷಯದಲ್ಲಿ ಎರಡುಮಾತ ಹೇಳಬೇಕೆಂದಿದ್ದೇನೆ.

ನಾವು ವಿಕಾಸ ಮಾಡಬೇಕೆಂದು ತಿಳಿದ ಕೋಟ್ಯಾಂತರ ರೂಪಾಯಿಗಳನ್ನು ಏಕೆ ಖರ್ಚುಮಾಡುತ್ತಿದ್ದೇವೆ ಎಂಬುದು ಒಂದು ವಿಚಾರ. ನಮಗೆ ಸುಖ ಸಿಕ್ಕಬೇಕು, ನಮ್ಮ ಅಭಿವೃದ್ಧಿಯಾಗಬೇಕು, ಅದರಿಂದ ಹಿತ ಪಡೆಯಬೇಕು ಎಂದು ಹೇಳಿ ಈ ವಿಕಾಸಯೋಜನೆ ಮಾಡಿದ್ದಾರೆ. ಆದರೆ, ಈ ಅಭಿವೃದ್ಧಿ ಅಥವಾ ವಿಕಾಸ ಯಾವರೀತಿಯಿಂದ ಆಗಬೇಕು, ಯಾವ ರೀತಿಯಿಂದ ಮಾಡಿದರೆ ಸುಖ ಸಿಕ್ಕುತ್ತದೆಂಬುದನ್ನು ನೋಡಬೇಕು. ವಿಕಾಸ ಎಂದರೆ ಕೇವಲ ಕಲ್ಲು ಮಣ್ಣಿನ ವಿಕಾಸವೋ ಅಥವಾ ಕೇವಲ ಹೋಬಳಿ ಹಳ್ಳಿಗಳ ವಿಕಾಸವೋ? ಅಥವಾ ಬಿಲ್ಡಿಂಗ್ ಮುಂತಾದ್ದುವುಗಳನ್ನು ಕಟ್ಟಿಸಿದರೆ ಅಂದರೆ ಅಂತಸ್ಥಿನ ಮೇಲೆ ಅಂತಸ್ಥನ್ನು ಆಕಾಶದಲ್ಲ ಏರಿಸಿದರೆ ಅದು ವಿಕಾಸವೋ? ಇವೆಲ್ಲಾ ನಾವು ವಿಕಾಸವಾಯಿತೆನ್ನುತ್ತೇವೆ. ಆದರೆ ನಾವು ವಿಕಾಸಿತ ವಾಗಬೇಕೆಂದರೆ ಯಾವುದರ ವಿಕಾಸವೆಂಬುದನ್ನು ಯೋಚನೆಮಾಡಬೇಕು; ಮತ್ತು ಯಾವುದರ ವಿಕಾಸ ಮಾಡುವುದು ಈಗ, ಅತ್ಯಂತ ಅವಶ್ಯಕವೆಂಬುದನ್ನು ನೋಡಬೇಕು. What is development? what do you mean by development? ಎಂಬುದನ್ನು ಮೊದಲು ಅರಿತುಕೊಳ್ಳುವುದು ಮುಖ್ಯ.

5-30 P.M.

ಈಗ ರಾಷ್ಟ್ರೀಯ ವಿಸ್ತರಣಾ ಯೋಜನೆ ಇತ್ಯಾದಿಗಳಲ್ಲಿ ವಿಕಾಸವೆಂದರೆ ವ್ಯಕ್ತಿಯಿಂದೊಡಗೂಡಿದ ಸಮಾಜ ವಿಕಾಸವಾಗಬೇಕು, ಸ್ಥಾನಿಕ ವಿಕಾಸವಾಗಬೇಕು, ಅಂದರೆ ಊರಿನಲ್ಲರುವ ಎಲ್ಲ ಜನರ ವಿಕಾಸವಾಗಬೇಕು ಎಂಬುದು. ರಾಷ್ಟ್ರೀಯ ವಿಕಾಸ ಅಥವಾ ಸ್ಥಾನಿಕ ವಿಕಾಸವೆಂದರೆ, ಒಂದು ರಾಷ್ಟ್ರದ ಅಥವಾ ಊರಿನ ಸೀಮೆ (ಹದ್ದು) ಏರಿಯ ವಿನಿದೆ, ಅದನ್ನು ಜಗ್ಗಿ ಹೆಚ್ಚಾಗಿ ಉದ್ದ ಅಗಲ ಮಾಡುವುದೋ ಹೇಗೆ? ಇದು ವಿಕಾಸವಾಗುತ್ತದೆಯೇ? ವಿಧಾನ ಸೌಧದ ಎತ್ತರವನ್ನು ಹೆಚ್ಚಿಸಿ ಟವರ್ಸ್ ಕಟ್ಟಿ ಆಕಾಶಮುಟ್ಟುವಂತೆ ಮಾಡುವದೋ ಹೇಗೆ? ಹೀಗಾದರೆ ಅದು ವಿಕಾಸವಾಗುತ್ತದೆಯೇ? ಈ ಪ್ರಕಾರವಾಗಿ ಮಾಡಿದರೆ ಸಮಾಧಾನವಾಗಲಾರದು. ಈ ವಿಷಯವನ್ನು ನಾವು ಎಷ್ಟು ವಿಚಾರ ಮಾಡಿದರೂ ಸಹ ಇದರಿಂದ ಶಾಂತಿ, ಸುಖ, ಸಮೃದ್ಧಿ ಉನ್ನತಿ ಹೊಂದಲು ಶಕ್ಯವಿಲ್ಲ.

ಅಂದಮೇಲೆ, ವಿಕಾಸವೆಂದರೆ ಎಂತಹ ವಿಕಾಸ ಮಾಡಬೇಕು? ವಿಕಾಸವೆಂದರೆ ನಮ್ಮ ಆತ್ಮಕ್ಕೆ ಸಂಬಂಧವಿದ್ದಂಥ ಆಧ್ಯಾತ್ಮಿಕ ವಿಕಾಸಮಾಡುವದೇ ಅದು ವಿಕಾಸ. ಹೊಳೆ ಹಳ್ಳ, ಕಲ್ಲು ಮಣ್ಣು ಇವುಗಳ ವಿಕಾಸ ಮಾಡುವುದು ಇದು ಜಡ—ಅಂದರೆ ಅಜೀವವಸ್ತುಗಳ ವಿಕಾಸ. ಇದನ್ನು ಮಾಡಿದರೆ ದೈನಂದಿನ ಇಂದ್ರಿಯ ಭೋಗೋಪಭೋಗ ಕಾರ್ಯಗಳಲ್ಲಿ ತಾತ್ಕಾಲಿಕ ಸುಖ ಸಿಕ್ಕುವುದಾದರೂ ಅವು ಯಾರಿಗೂ, ಯಾವ ರಾಷ್ಟ್ರಕ್ಕೂ ಸ್ಥಿರವಾದ ಶಾಂತಿ ಸುಖ ಸಮೃದ್ಧಿ ಕೊಡುವಂಥ ವಿಕಾಸವಲ್ಲ. ಎಷ್ಟರತನಕ ನಮ್ಮ ಆತ್ಮೀಯ-ಆಧ್ಯಾತ್ಮಿಕ ಶುದ್ಧಿ ಇಲ್ಲವೋ, ಅಭ್ಯುದಯವಿಲ್ಲವೋ, ಉನ್ನತಿ ಇಲ್ಲವೋ ನೀತಿ ನಡಾವಳಿ ಅಂದರೆ ಸದಾಚಾರವಿಲ್ಲವೋ, ತ್ಯಾಗವಿಲ್ಲವೋ ಅಷ್ಟರ ತನಕ ಎಷ್ಟು ಟಾರ್‌ರೋಡ್ ಮಾಡಿದರೂ, ಹೊಳೆ,ಹಳ್ಳ ಕಟ್ಟಿದರೂ, ಕಲ್ಲು, ಸಿಮೆಂಟ್ ಜಡಿದು ತಿಕ್ಕಿದರೂ, ಆಕಾಶಕ್ಕೆ ಟವರ್ ಹಾಕಿ ಸ್ಪರ್ಶ ಮಾಡಿದರೂ, ಏನೂ ಉಪಯೋಗವಿಲ್ಲ. ಎಲ್ಲವೂ ವ್ಯರ್ಥ. ಇವೆಲ್ಲಾ ಜೀವಾತ್ಮನ ಸಲುವಾಗಿಯೇ, ಇವೆಲ್ಲಾ ಅವನ ಅಧೀನವೇ, ಅವನ ಉಪಭೋಗಕ್ಕಾಗಿಯೇ ಇವೆಲ್ಲಾ, ಅವನಿಂದಲೇ ಇವುಗಳಿಗೆ ಸುಂದರತೆ—ಅಂದಮೇಲೆ ಅವನ ವಿಕಾಸವೇ

(ಶ್ರೀ ಬಿ. ಜಿ. ಖೋತ್)

ಅವನ ಸದ್ಗುಣ ವೃದ್ಧಿಯೇ, ಅವನ ಸಾಂಸ್ಕೃತಿಕ ವಿಕಾಸವೇ ವಿಕಾಸ! ಈ ತರದ ವಿಕಾಸ ಬೇಕು.

ಶ್ರೀ ಎಫ್. ಹೆಚ್. ಮೋಹಸಿನ್.—ಆತ್ಮ ವಿಕಾಸಕ್ಕೆ ಯೋಗಾಶ್ರಮ ತೆಗೆಯಬೇಕೆಂದು ಕಾಣಿಸುತ್ತದೆ.

ಶ್ರೀ ಬಿ. ಜಿ. ಖೋತ್.—Wait and hear me. ಇದೇ ವಿಕಾಸದಲ್ಲಿ ಶಾಶ್ವತ ಸುಖ ಮತ್ತು ಉನ್ನತಿ ಇದೆ. ವ್ಯಕ್ತಿ ವಿಕಾಸದೊಳಗೆ ರಾಷ್ಟ್ರದ ವಿಕಾಸವಿದೆ. ರಾಷ್ಟ್ರೀಯ ವಿಕಾಸ ಇದು. ಮಾರ್ಕೆಟ್ ಒಳಗೆ ಹೋಗಿ ನಾಲ್ಕುರೂಪಾಯಿಗೆ ತರುವಂಥ ವಸ್ತುವಲ್ಲ. 40ಕೋಟಿ ಜನಸಂಖ್ಯೆ ಏನಿದೆಯೋ, ಆ ಜನಸಂಖ್ಯೆಯೇ ರಾಷ್ಟ್ರವಾಗುತ್ತದೆ. ಇದು ಒಂದು ಶಾಶ್ವತವಾದ ವಸ್ತು. 40ಕೋಟಿ ಜನರ (ಆಧ್ಯಾತ್ಮಿಕ) ಅಭ್ಯುದಯವೇ ನಮ್ಮ ಉನ್ನತಿ. ನಮ್ಮ ವಿಕಾಸದ ಕಾರ್ಯಗಳಿಂದ ಪ್ರತಿಯೊಬ್ಬರ ಆತ್ಮೀಯ ವಿಕಾಸ ಅಧ್ಯಾತ್ಮಿಕ ವಿಕಾಸ, ಮಾನಸಿಕ ಮತ್ತು ಬೌದ್ಧಿಕ ವಿಕಾಸ, ಸಾಂಸ್ಕೃತಿಕ ವಿಕಾಸ, ಸಾಮಾಜಿಕ ವಿಕಾಸ, ರಾಜಕೀಯ ವಿಕಾಸ, ಔದ್ಯೋಗಿಕ ವಿಕಾಸ, ಆರ್ಥಿಕ ವಿಕಾಸ—ವಗೈರೆ ಈ ಎಲ್ಲ ತರಹದ ವಿಕಾಸಗಳಾಗಬೇಕು. ಇವೇ ಅನೇಕ ವಿಕಾಸಗಳು. ಈ ವಿಕಾಸ ಚಿರಕಾಲ ಫಲದಾಯಕವಾಗಿರುವುದು. ಇಂಥ ವಿಕಾಸ ಮಾಡುವುದು ನಮ್ಮ ಕರ್ತವ್ಯ. ಇದೇ ಅವಶ್ಯಕ. ಈ ವಿಕಾಸ ನಮ್ಮಿಂದ, ನಮ್ಮ ಸ್ಟೇಟಿಂದ ಹೊರಡಬೇಕು. ಇಂಥ ವಿಕಾಸ ನಾವು ಮುಂಚೆ ಮಾಡಬೇಕು. ಆದರೆ, ದುರ್ದೈವದಿಂದ ಇಂಥ ವಿಕಾಸಕ್ಕೆ ನಮ್ಮ ಬಜೆಟೊಳಗೆ ಯಾವ ಅವಕಾಶವನ್ನೂ ಕೊಟ್ಟಿಲ್ಲ.

Mr. CHAIRMAN (SRI J. H. SHAMSUDDIN).—The Hon'ble Member has only one minute.

ಶ್ರೀ ಬಿ. ಜಿ. ಖೋತ್.—ಈ ರೀತಿ ವಿಕಾಸಮಾಡುವುದಿದೆ. ಈ ರೀತಿ ಮಾಡದೆ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ, ಯಾವ ಪರಿಣಾಮವೂ ಆಗುವುದಿಲ್ಲ. Planning Commission ನವರು, outlook and views of youths ಪರಿವರ್ತನೆಮಾಡಿ ಶಕ್ತಿ ಸಂಪಾದಿಸಬೇಕೆಂದು ಏನು ಹೇಳಿದ್ದಾರೋ, ಆ ಶಕ್ತಿ ನಿರ್ಮಾಣ ಮಾಡಿರಿ. ರಾಷ್ಟ್ರದ ಘಟನಾತ್ಮಕ ಮತ್ತು ಜೀವಾತ್ಮಕ ಪರಿವರ್ತನೆ ಪ್ಲಾನಿಂಗ್ ಕಮಿಷನ್‌ನವರ ವಿಚಾರ ಇದೆ. ಈ ಪ್ರಕಾರ ಪರಿವರ್ತನೆ ಮಾಡಿಸಬೇಕು. "Ways and means of living" ಯಾವರೀತಿ live ಮಾಡುತ್ತೇವೆ, ಯಾವರೀತಿ think ಮಾಡುತ್ತೇವೆ ಎನ್ನುವುದನ್ನು ನೋಡಬೇಕು. Living ಮತ್ತು thinking, ಇವೆರಡಕ್ಕೂ ಸಂಪರ್ಕವಿರಬೇಕು. ಒಬ್ಬ ರೋಗಿಗೆ ಔಷಧಿ ಕೊಟ್ಟು ಹೇಗೆ ಅವನನ್ನು ನೆಟ್ಟಗೆ ಮಾಡುತ್ತೇವೆಯೋ, ಹಾಗೆಯೇ ಮನುಷ್ಯನನ್ನು ಯಾವ ರೀತಿಯಲ್ಲಿ ತಿದ್ದುಪಾಟು ಮಾಡಬಹುದೆಂದು ವಿಚಾರಮಾಡಿ, ಇಂಥ ವಿಕಾಸವನ್ನು ಅಡಕ ಮಾಡಿ, ಕಾರ್ಯಾರಂಭ ಮಾಡಿದರೆ, ಅದರಲ್ಲಿ ಸುಖ ವಿದೆ; ನಮ್ಮ ಹಿತವಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೇನೇ ಅದರಿಂದ . . . . .

Mr. CHAIRMAN.—No more time. Sri T.D. Maranna next.

ಶ್ರೀ ಕೆ. ಪುಟ್ಟಸ್ವಾಮಿ.—ಇಷ್ಟು ಕಠಿಣವಾಗಿ ಬಿಟ್ಟರೆ ಬಹಳ ಕಷ್ಟವಾಗುತ್ತದೆ.

Mr. CHAIRMAN.—I am sorry.

Sri B. G. KHOT.—In this connection I wish to state that one must be permitted to finish one's idea at least so that the other members may be able to readily follow him. ಅಲ್ಲಿಯತನಕ ಮಾತಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಕಾಲ ಮಿತಿಮಾಡಿ. ಆದರೆ ಯಾರಾದರೂ ಒಬ್ಬ ಸದಸ್ಯರು ತಮ್ಮ ಭಾಷಣವನ್ನು concludeಗೆ ಮಾಡದೆ ಇರುವಾಗ, ಪರಿಸಮಾಪ್ತಿ ಮಾಡುವುದಕ್ಕೆ ಅವಕಾಶ ಕೊಡದೆ "Hon'ble Member will conclude his speech" ಅನ್ನುತ್ತಾ ತಾವು ನಿಂತ ಕೊಂಡು ಬಿಟ್ಟರೆ, ಸದಸ್ಯರು ತಾವು ನಿಂತುಕೊಂಡಾಗ ಕುಳಿತುಕೊಳ್ಳಲೇ ಬೇಕಾಗುತ್ತದೆ. ಅದು ಬಹಳ ಕಠಿಣ ಪ್ರಸಂಗವಾಗುತ್ತದೆ. ಆ ಸಮಯದಲ್ಲಿ ತಾವು ಸ್ವಲ್ಪ generous ಆಗಿದ್ದರೆ ಅನುಕೂಲ.

Mr. CHAIRMAN.—I am sorry. I cannot afford to be generous because generosity in the case of one will lead to complications and laxity. So, I am sorry I will have to stick to the time limit.

Sri V. P. DEENADAYALU NAIDU.—A Member's speech should be more intelligible. After all, the Member was summarising his speech in a humorous way and unless he concludes it in a fitting way, the whole thing will result in anything but waste of time.

Mr. CHAIRMAN.—The Hon'ble Member must have seen that I give a warning of one minute. Therefore the Member will have time to conclude his point. If the Hon'ble Member is allowed to go to the next point, I do not know when he will end it.

Sri K. PUTTASWAMY.—I very respectfully object to the use of the word 'warning'. We should not be warned about the time. We will stick to the time. Just a gentle hint will be enough. We will certainly observe discipline.

Mr. CHAIRMAN.—I did not say that I warned the Members, but that I was giving a warning bell. There is difference between "a warning" and "warning bell"

Sri M. MALLIKARJUNASWAMY.—In view of the fact that this is an important Demand, will the Hon'ble Speaker be considerate in giving more time ?

Mr. CHAIRMAN.—If the list is to be exhausted, we will have to sit till 9 o'clock.

Sri M. MALLIKARJUNASWAMY.—We will sit.

Mr. CHAIRMAN.—It is for the House to decide and not for me.

Sri V. P. DEENADAYALU NAIDU.—I have very carefully gone through some of the rules. The discretion rests with the Chair to relax the time where the members feel so. The Hon'ble Chair need not be so meticulous like a school master. I think the Hon'ble Members here require a little more indulgence particularly on a subject matter like this we would like to have a little more indulgence from you.

Mr. CHAIRMAN.—If I am indulgent in respect of one Member, I shall have to be indulgent in respect of all. There are still twenty members to speak; there is no limit to indulgence. So, the rule of prudence dictates me to be strict.

Sri V. P. DEENADAYALU NAIDU.—Ultimately I state this. Having heard Sri Khot for ten minutes, I feel that unless he concludes, it will be not merely a waste of time of Mr. Khot, but it will be a waste time of the House. Unless his speech is made understandable and intelligible he may as well not speak at all.

Mr. CHAIRMAN.—That is his choice. Let us end the discussion at this point. Sri T. D. Maranna.

Sri T. D. MARANNA (Magadi).—Sir, I rise to support the demand in respect of N.E.S. Scheme. Our universally respected Prime Minister, Sri Jawaharlal Nehru, is striving very hard for the country's all-round progress and development. Our Planning Commission has prepared plans for the country's reconstruction and progress. We are now in the middle of our Second Five Year Plan period. As far as Mysore State is concerned, we will have to measure the extent of progress that we have achieved so far. If we make an analysis of the progress that we have achieved so far, I feel it is very, very little, compared to the enormous money that we have spent on this Scheme. Just like the people who are working in P.W.D. the people who are working in the N.E.S. Scheme seem to be under the impression that this Scheme is a lovely meadow where people can graze at their sweet will. This is not the attitude they should adopt. The staff of the N.E.S. Scheme must have service of the people as their motto. Unless they have this as their motto, this scheme will become a miserable failure and our opponents will shout that our scheme is a mere paper scheme. So I request the Government not to allow things to go as far as that. The people who are working in N.E.S. Scheme must not consider that they are superior to the people with whom they are expected to move and with whose co-operation they are expected to work every day. They must not think that they are superior to the people of the rural parts. They must not behave like people who have just now arrived from England or America. They must mingle with the villagers, the illiterate millions. Then only the scheme will become a success. The N.E.S. works do not envisage merely the construction of certain irregular mud roads here and there. Of course, under the N.E.S. Scheme we have constructed some mud roads here and there, but these mud roads will be completely washed away when once the rain starts. By merely constructing mud roads we cannot say that we have done all the items of work that are envisaged in the Scheme. The Planning Commission expects the N.E.S. Scheme to take up food production as a major item of its programme, but today we see that very little has been done in this direction. Practically, nothing has been done in this direction. In the minor irrigation scheme, unfortunately, the progress is very unsatisfactory. Regarding school buildings, some school buildings were built here and there, but the progress is not up to the mark. Then, grant of loans to individuals is a story by itself. The individual people who have applied for loans have undergone a great ordeal to secure the loans due to red-tapism in the various quarters.

Then, I come to selection of candidates to the various officers under the scheme. We have got B.D.O.s, Village Level Workers, Lady Organisers, etc. The B.D.O.s are appointed for a term of three years or so. We

(SRI T. D. MARANNA)

are allotting a huge sum, about Rs. 7 to 8 lakhs per Block. The B.D.O. will have to supervise the expenditure of this huge amount. Almost all our B.D.O.s are either Arts or Science Graduates. This scheme which envisages food production, minor irrigation, construction of buildings, etc. needs technically qualified men to supervise the work. A technically qualified man will do better supervision than an Arts or Science Graduate. Another thing that I have noticed is that many of the Revenue Inspectors have been elevated to the position of B.D.O.s. Most of us know what a Revenue Inspector is. Beyond that I do not want to comment.

Then, for Village Level Workers we have some S. S. L. C. candidates, Intermediate candidates and also graduate candidates. Due to unemployment, graduates come in for this work in large numbers, but they always look forward to other attractive jobs. When once they get some other job they immediately quit this job and go there. So when they work here they will have absolutely no interest in the work. Moreover the superiority or inferiority complex will come in, because they begin to think that they are placed on a par with S.S.L.C. candidates. The people who are selected for this work must have an aptitude to work in villages.

As regards lady organisers, the selection here is most wonderful. Some girl graduates who are just out of college are recruited to work as lady organisers in village. They have absolutely no idea about village conditions and the village atmosphere will never suit them. What can we expect from such lady organisers, who never step inside a village family house and talk to the women-folk? They refuse to mingle and move with village women. Our village women need not take lessons from these lady organisers as to how they should wear their saries or how they should put on their cholis. They certainly need lessons in cottage industries and home science which increase their *per capita* income. It is with this idea in view that lady organisers are being appointed and not to solve the unemployment problem. They must be given proper and perfect training and then only they must be sent to the village side.

MR. CHAIRMAN.—The Hon'ble Member has only one minute more.

SRI T. D. MARANNA.—As far as my constituency is concerned, the N.E.S Scheme is in existence there for three years I for myself do not know what kind of N. E. S. activities are going on there. Our Deputy Commissioner has given us a very beautiful Block Advisory Committee this time which consists of mostly undesirable and anti-social elements.

I am still thinking as to how I could sit in the committee meetings. Hitherto I have not attended any of the meetings. Under these circumstances, God alone will have to save the N.E.S. work in our taluk. N.E.S. staff are submitting reports every month. But their reports are something like the Shanbhogues pahani accounts. The Shanbhogue is expected to write village accounts after inspecting the several survey numbers, the crops grown thereon, etc. But he will never inspect the fields. He will sit under a banyan tree and write accounts. The reports written by the N. E. S. officers are something like that. All these difficulties will have to be rectified. Otherwise, all our scheme will be a failure and they will be paper schemes as the Opposition is crying out. So saying I conclude my speech.

*SRI M. MALLIKARJUNASWAMY (Malavalli).—Sir, I rise to support this Demand with great pleasure. At the outset I should like to give an account of myself. I am a student of Economics (Honours) and my beloved *alma mater* is the Maharaja's College. Even as a student, before my marriage, I fell in love with two apsarasa twin sisters from Delhi (*laughter*). My people began to appreciate them. But as days passed on, they began to deprecate them. These twin sisters are the N.E.S. and C. D. Block Development schemes. As I said the other day, planning is much more necessary, but much more

difficult in a backward country like ours than in advanced countries. I therefore say that to a certain extent—why to a greater extent—the schemes are a failure. People are not prepared to appreciate the N. E. S. and C. D. Block schemes. Of course, these schemes are lofty in their ideals as envisaged by our Planning Commission. Today as we see in this backward country of ours, people are not in a position to appreciate the loftier ideals of this scheme. There is no popular enthusiasm. The dynamic force is not there. In my opinion, the dynamic force in the masses is not alive and if that is stepped up properly, we can be successful in our Plans. In my opinion, dynamic popular enthusiasm is the lubricating oil for economic Development.

A meeting of the Development Commissioners was held at Mussoorie in April this year. After this meeting, a marked distinction is seen. As I said the other day, the First Five Year Plan consisted purely of agricultural fundamentalism. But today we are experiencing food scarcity. Everywhere there is the cry about scarcity of foodgrains. The Second Five Year Plan envisages an increase of 25 percent in agricultural production. Therefore, they have taken minor irrigation works also. As we know today, it is not being properly organised and the scheme so to say has not at all been helpful to the tenants and small ryots. But it is helping only the rich people and thereby it is adding to their riches and the rich are becoming richer and the poor are becoming poorer. That is my opinion. Today, as we know, these poor agricultural classes of people in our country have got to depend upon the village money-lender, who is nothing more than a Shylock. The Government is not at all giving timely aid by way of agricultural loans. Even manures and fertilisers supplied by the Department of Agriculture are not being supplied properly and the result is, in spite of this supply, food production has not been stepped up. This is my honest opinion and I am sure that the Members of this Hon'ble House will share it with me.

I wish to point out that one of the objectives of the community development schemes is that they have to help private people in their irrigation systems to step up food production, *i.e.*, help the private persons to sink wells and for that purpose, Government should give sufficient aid to them.

Coming to Information and Public Relations, the information that is being given at present is not to the extent that it should have been given.

Coming to the Public Health and Sanitation Departments, even the Development Commissioners' Conference has laid emphasis on the preventive aspect. They have laid stress on the increasing importance of preventive aspect. I therefore say that the preventive aspect of health services should be stepped up.

Coming to Women's programme, several Hon'ble Members spoke about these Gramasevikas and other things. Today we are treating our womenfolk in our country something like chattels. Even Harijans are being treated better than our women. We men are domineering and do not realise the importance that women play in our country. What the Chancellor of Exchequer is to a nation, so is a women to the family. We must give proper and due importance to women's education and also to other advancements of the womenfolk.

Sri Y. VEERAPPA.—If the Hon'ble Member yields, does he mean that we are ill-treating our womenfolk?

Sri M. MALLIKARJUNASWAMY.—Yes. That is what I say. In this connection, I have to say that we are becoming money worshippers. Money-making has become the be-all and end-all and this should not be so. Then I agree with Sri Maranna in the picture that he gave about the people connected with the schemes. They have no missionary spirit; but they have only the mercenary spirit. This is not good for our national outlook.

Sri F. X. DENIS PINTO (Kaup).—The Hon'ble Lady Members of this House will not agree to this statement.

Smt. VIJAYA RAGHVENDER RAO.—We know that we have been given better protection.

Sri M. MALLIKARJUNASWAMY.—Once the Athenian orator Demosthenes was addressing a gathering of women. He was telling them why men wanted to marry women—men wanted to marry women because they wanted to have legitimate wives and legitimate children and that women should only be baby manufacturing machines. That is the attitude of most of our people in our country. It is the women who are producing the man power which is essential for the economic development of our country. Therefore due importance should be given to women's education and their advancement.

Sri F. X. DENIS PINTO.—Is the Hon'ble Member against Family Planning ?

Sri M. MALLIKARJUNASWAMY.—Ours is an agricultural population. Today we notice that the population of our country is growing at an alarming rate. Every year there are five million more. If you allow our people to grow at this alarming rate, it will be seven hundred billions by the end of this century, *i.e.*, within the next 42 years. How to feed those mouths ? I therefore honestly believe in this Family Planning. But I do not advocate the use of contraceptives. We must exercise self-control and continence. That is what Gandhiji hes told us. We must give due importanca to animal husbandry (*Laughter*).

6 P.M.

I would suggest that the Chief Secretary, who is also the Development Commissioner now, should be relieved of his duties in respect of the administration departments and should be designated Chief Development Commissioner of the State. An Additional Chief Secretary should be appointed to look after general administration work.

[MR. DEPUTY SPEAKER in the Chair]

The sequence of allotment of NES blocks should be announced beforehand so that the people may know about it and prepare themselves. About the appointment of social workers, I must express my disappointment at the fact that despite the existence of many educated Harijan girls, sufficient inducement is not given for their enrolment as social workers. I must express my strong feeling that the NES and CD blocks have not touched the Harijans to any great extent. I had the privilege of visiting a Harijan locality in Gulbarga and I was appalled by the pitiable condition of their habitat. They are living in a wretched condition. The women looked miserable and I was reminded of a famous verse written by Bana. Whenever drainage and other works are taken up in villages, the officers must consider it their sacred duty to extend such facilities to the Harijan localities also.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಧ್ಯಕ್ಷರೇ, ಕಳೆದ ನಾಲ್ಕೈದು ಘಂಟೆಗಳ ಹೊತ್ತಿನಲ್ಲಿ ರಾಷ್ಟ್ರೀಯ ವಿಸ್ತರಣೆ, ಸಾಮುದಾಯಿಕಾಭಿವೃದ್ಧಿ ಯೋಜನೆ ಮತ್ತು ಸ್ಥಾನಿಕ ಕಾಮಗಾರೀ ಯೋಜನೆ ವಿಷಯವಾಗಿ ಮಾನ್ಯ ಸದಸ್ಯರು ಮಾತನಾಡಿದಂತಹ ವಿಷಯಗಳ ಸಾರವನ್ನು ತೆಗೆದು ನೋಡುವುದಾದರೆ, ಸಾಮಾನ್ಯವಾಗಿ ಹೆಚ್ಚು ಮಾತುಗಳು ಎದ್ದು ಕಾಣುತ್ತವೆ. ಮೊದಲನೆಯದು ಬ್ಲಾಕ್ ಸಲಹಾ ಸಮಿತಿಯ ರಚನೆ ಸರಿಯಾಗಿಲ್ಲ. ಎರಡನೆಯದಾಗಿ ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ ಅಪಾರವಾಗಿ ಹಣ ಖರ್ಚಾಗುತ್ತದೆ. ಮೂರನೆಯದಾಗಿ ಇತರ ಡಿಪಾರ್ಟ್‌ಮೆಂಟ್‌ಗಳ ಸಹಕಾರವನ್ನು ಸ್ವಾಗತಿಸಿಲ್ಲ. ನಾಲ್ಕನೆಯದಾಗಿ ಗ್ರಾಮಸೇವಕಿಯರಾಗಿ ಸೋಷಿಯಲಿಸ್ಟ್ ಲೇಡಿ ಸೇರಿರುತ್ತಾರೆ. ಐದನೆಯದಾಗಿ ಜೀಪ್ಸ್ ದುರುಪಯೋಗವಾಗುತ್ತಿದೆ, ಆರನೆಯದಾಗಿ ಜನತೆಗೆ ಇದರ ಉಪಯೋಗ ಗೊತ್ತಿಲ್ಲ. ಅದರಿಂದ ಜನರಲ್ಲಿ ಉತ್ಸಾಹ ತುಂಬಿಲ್ಲ. ಏಳನೆಯದಾಗಿ ವ್ಯವಸಾಯಾಭಿವೃದ್ಧಿಗೆ ಯೋಗ್ಯವಾದ ಮಹತ್ವವನ್ನು ಕೊಡುತ್ತಿಲ್ಲ. ಎಂಟನೆಯದಾಗಿ ಅಧಿಕಾರಿಗಳಿಗೆ ಸಾಕಷ್ಟು ಟ್ರೈನಿಂಗ್ ಇಲ್ಲ. ಒಂಭತ್ತನೆಯದಾಗಿ ಕಾಂಗ್ರೆಸ್ಸಿನಲ್ಲಿ ಕಾಂಗ್ರೆಸ್ ವಿರೋಧಿಗಳಿಗೆ ಸ್ಥಾನ ಕೊಡಲಾಗುತ್ತಿದೆ—ಹೀಗೆ ಒಂಭತ್ತು ಹತ್ತು ಮಾತುಗಳನ್ನು ಆಡಿದ್ದಾರೆ. ನಾವು ಆ ಭಾಷಣಗಳನ್ನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿದರೆ ಅದು ಸಹಜವಾಗಿಯೇ ಇದೆ. ಇನ್ನು ಕೆಲವು ಮಾನ್ಯ ಸದಸ್ಯರು ಕೆಲವೊಂದು ವಿಷಯಗಳ ಮೇಲೆ ಟೀಕೆಗಳನ್ನು ಮಾಡಿದ್ದಾರೆ. ಕೆಲವು ಸ್ಥಾನಿಕ ಸಮಸ್ಯೆಗಳನ್ನು ಸ್ಥಾನಿಕ ಕುಂದುಕೊರತೆಗಳನ್ನು ಅಥವಾ ಕೆಲವೊಂದು ಅಧಿಕಾರಿಗಳ ವೈಯಕ್ತಿಕವಾದ ಅವರ ನೀತಿಗಳನ್ನು ಚರ್ಚೆಮಾಡಿದ್ದಾರೆ, ಅದರ ಬಗ್ಗೆ ನಾನು ವಿಶೇಷವಾಗಿ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಅದರ ನಿವಾರಣೆ ನಾವು ಮುಂದೆ ಚರ್ಚೆಮಾಡಿಕೊಳ್ಳಬಹುದು. ಅದರ ಬಗ್ಗೆ ವಿಶೇಷವಾಗಿ ಮಾತನಾಡಲು ಇವತ್ತಿನ ದಿನದಲ್ಲಿ ಅವಕಾಶವಿಲ್ಲವೆಂದು ನನಗೆ ಕಾಣಿಸುತ್ತದೆ. ಅದರ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಮೊಟ್ಟಮೊದಲನೆಯದಾಗಿ ನಾನು ಕ್ಲಾರಿಫಿಕೇಷನ್ ಕೊಡಲಕ್ಕೆ ಬಯಸುತ್ತೇನೆ. ಅರ್ಥಿತಿ ಒಂದು ವಿವರಣೆ ಕೊಡಬೇಕು,

ದ್ದರೆ ಜನ ಸಾಮಾನ್ಯರಲ್ಲಿ ಕೆಲವು ಸದಸ್ಯರಲ್ಲಿ ತಪ್ಪು ಭಾವನೆ ಬರುವ ಸಂಭವವೂ ಇದೆ. ಮೊದಲನೆಯ ದಾಗಿ ಮಾನ್ಯ ಶ್ರೀ ಶಿವಪ್ಪನವರು ಒಂದು ಮಾತನ್ನು ಹೇಳಿದರು. ಅವರು ಈಗ ಸಭೆಯಲ್ಲಿಲ್ಲ. ಅವರು ಬಿ.ಡಿ.ಓ. ಗಳನ್ನು ನೇಮಕಮಾಡಬೇಕೆಂದರೆ ಯಾವ ರೀತಿಯಲ್ಲಿಯೇ ವಶೀಲಿ ಬಾಜಿಗೆ ಕಟ್ಟುಬಿದ್ದು ಮೊದಲು ನಿರ್ಧಾರಮಾಡಿದ ಕ್ವಾಲಿಫಿಕೇಷನ್ನನ್ನು ಆಮೇಲೆ ರಿಲ್ಯಾಕ್ಸ್ ಮಾಡಿದರು ಎಂದು ಹೇಳಿದರು. ಇದು ಶುದ್ಧಸುಳ್ಳು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ನೇಮಕ ಮಾಡುವ ವಿಷಯದಲ್ಲಿ ಹಿಂದೆ ಒಂದು ಪದ್ಧತಿ ಇತ್ತು. ಆ ಪದ್ಧತಿ ಅಷ್ಟೊಂದು ಸರಿಯಾಗಿಲ್ಲವೆಂದು ಈ ಸರ್ಕಾರ ತಿಳಿದು ಅದನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ವಹಿಸಬೇಕು, ಅವರ ನಿಯಮದಂತೆ ಆಗಬೇಕು ಎಂದು, ಈ ಸರ್ಕಾರ ನಿರ್ಧಾರಕ್ಕೆ ಬಂದು ಅಕ್ಟೋಬರ್ ತಿಂಗಳಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಓರಲ್ಲಾಗಿ ಬಿ.ಡಿ.ಓ. ಗಳನ್ನು ಆರಿಸಬೇಕು ಎಂದು ತಿಳಿಸಿದ್ದರು. ಮೊದಲೇ ನಿರ್ಧರಿಸಿದ್ದ ಕ್ವಾಲಿಫಿಕೇಷ್ಟ ಆಗಲಿ, ಅವರ ನಿಯಮವಾಗಲಿ ಯಾವುದೊಂದೂ ಬದಲಾವಣೆ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ಶ್ರೀ ಶ್ರೀನಿವಾಸಶೆಟ್ಟರು ತಮ್ಮ ಕ್ಷೇತ್ರ ಬಹಳ ವಿಸ್ತಾರವಾಗಿದ್ದರೂ, ಅಲ್ಲಿಗೆ ಒಬ್ಬರೇ ಒಬ್ಬರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಇದ್ದಾರೆ, ಅವರಿಂದ ಕೆಲಸ ಸರಿಯಾಗಿ ಆಗುವುದಿಲ್ಲ. ಸರಿಯಾದ ಹೊತ್ತಿಗೆ ಅಧಿಕಾರಿಗಳು ನೇಮಕವಾಗುತ್ತಿಲ್ಲವೆಂದು ಒಂದು ಆರೋಪಣೆಯನ್ನು ಮಾಡಿದರು. ಮತ್ತೆ ಅಲ್ಲಿ ಅನೇಕ ವರ್ಷಗಳಿಂದ ಇಂಜನಿಯರನ್ನು ನೇಮಕ ಮಾಡಲಿಲ್ಲವೆಂದು ಹೇಳಿದರು. ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ. ಪ್ರತಿಯೊಂದು ಬ್ಲಾಕಿಗೆ ಒಬ್ಬೊಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ನೇಮಕಮಾಡುವುದು ಸರ್ಕಾರದವರ ನೀತಿಯಾಗಿದೆ. ಅದರೆ ಅವರು ಹೇಳಿದ ಹಾಗೆ ಅದರ ಕಷ್ಟವನ್ನು ತಿಳಿದುಕೊಂಡಿದ್ದೇನೆ. ಕೆಲವು ಅರ್ಜೆಂಟ್‌ಸೀ ಕಾರಣಗಳಿಂದ ನಮಗೆ ಸಾಕಷ್ಟು ಸಂಖ್ಯೆಯಲ್ಲಿ ಹೊಸ ಬಿ.ಡಿ.ಓ. ಗಳು ಸಿಕ್ಕುತ್ತಿಲ್ಲ. ಅಕ್ಟೋಬರ್ ತಿಂಗಳಲ್ಲಿ ಸುಮಾರು 50 ಬಿ.ಡಿ.ಓ. ಗಳನ್ನು ನೇಮಕ ಮಾಡಬೇಕೆಂದು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಸರ್ಕಾರದವರು ಭಿನ್ನವಿಸಿಕೊಂಡಿದ್ದಾರೆ. ಅದು ಇನ್ನು ಸ್ವಲ್ಪ ದಿವಸಗಳಲ್ಲಿ ಆಗಬಹುದು ಎಂದು ನಿರೀಕ್ಷಣೆ ಮಾಡುತ್ತೇನೆ.

ಕೆಲವು ಸದಸ್ಯರು ಮಾಡಿದ ಟೀಕೆಗಳನ್ನು ನೋಡಿದರೆ ನನ್ನ ಅಭಿಪ್ರಾಯದಲ್ಲಿ ಅವರು ಅಂತಹ ಮಾತನ್ನು ಹೇಳಬಾರದಾಗಿತ್ತು. ಇಂತಹ ಘನವಾದ ಸಭೆಯಲ್ಲಿ ಅಂತಹ ಕಟುವಾದ ಟೀಕೆಗಳನ್ನು ಹೇಳಿದ್ದಿದ್ದರೆ ಬಹಳ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಅಂತಹ ಮಾತನ್ನು ಹೇಳಿದರು. ನಾಷನಲ್ ಎಕ್ಸ್‌ಟೆರ್ಷನ್ ಸ್ಕೀಮನ್ನು ನ್ಯಾಷನಲ್ ಎನಿಮಿ ನಂಬರ್ ಒಂದು, ಇದು ರಾಷ್ಟ್ರದ್ರೋಹ, ದೇಶದಲ್ಲಿ ಸರ್ಕಾರಕ್ಕೆ ಗೌರವತರದೇ ಇರುವ ಯೋಜನೆ ಎಂಬುದಾಗಿ ಇಷ್ಟೊಂದು ತೀಕ್ಷ್ಣವಾದ ಶಬ್ದಗಳನ್ನು ಏಕೆ ಈ ಸಭೆಯಲ್ಲಿ ಉಪಯೋಗಿಸಿದರು ಎಂಬುದು ನನಗೆ ಗೊತ್ತಾಗುವುದಿಲ್ಲ. ಇದರಲ್ಲಿ ಒಂದು ಅತಿ ಆಶ್ಚರ್ಯಕರವಾದ ಸಂಗತಿ ಏನೆಂದರೆ ಕೆಲವು ಮಾನ್ಯ ಸದಸ್ಯರು ಈ ಸಭೆಯ ಹೊರಗಡೆ ನನ್ನ ಹತ್ತಿರ ಮಾತನಾಡುತ್ತಾ ತಂತಮ್ಮ ಕ್ಷೇತ್ರದಲ್ಲಿ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಅದೇ ಸದಸ್ಯರು ಇವತ್ತು ಈ ಸಭೆಯಲ್ಲಿ ಬಹಳ ಕಟುವಾಗಿ ನಿಂದೆ ಮಾತನ್ನು ಆಡಿದ್ದನ್ನು ನೋಡಿದರೆ, ನನಗೆ ಬಹಳ ಆಶ್ಚರ್ಯವಾಯಿತು, ಮನಸ್ಸಿಗೆ ವೇದನೆಯಾಯಿತು. ರಾಷ್ಟ್ರೀಯ ವಿಸ್ತರಣೆ ಯೋಜನೆ ಎಂಬುದು ತಮಗೆಲ್ಲರಿಗೂ ಗೊತ್ತಿರುವಂತೆ ಒಂದು ಹೊಸ ಯೋಜನೆ. ಕೇವಲ ಐದು ವರ್ಷಗಳ ಹಿಂದೆ ಇದನ್ನು ಸ್ಥಾಪನೆಮಾಡಿ ಜಾರಿಗೆ ತಂದರು. ಈ ಐದು ವರ್ಷಗಳೊಳಗೆ ಮತ್ತು ಈ ಐದುವರ್ಷಗಳನಂತರ ಅವೆಲ್ಲವೂ ನಮ್ಮ ಅನುಭವಕ್ಕೆ ಈಗಾಗಲೇ ಬಂದು ಅದರಿಂದಾಗುತ್ತಿದ್ದ ಕೆಲವು ತೊಂದರೆಗಳು ಸರ್ಕಾರದ ಗಮನದಲ್ಲಿದ್ದು ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಆಗುತ್ತಿವೆ. ರಾಷ್ಟ್ರೀಯ ವಿಸ್ತರಣ ಯೋಜನೆಯು ಜಾರಿಗೆ ಬಂದ ಕೂಡಲೆ ಹಳ್ಳಿಗರಿಗೆ ಯಾವ ತರದ ಸೌಕರ್ಯ ಯಾವತರದ ಅನುಕೂಲ ಬೇಕಾಗಿ ವೆಯೋ ಅವುಗಳೆಲ್ಲವನ್ನೂ ರಾತ್ರಿಯಾಗಿದು ಬೆಳಗಾಗುವದರೊಳಗೆ ಒದಗಿಸಲು ಸಾಧ್ಯವಿಲ್ಲ. ಹಾಗೆ ತಿಳಿದುಕೊಂಡಿದ್ದರೆ ಅದು ತಪ್ಪು. ಹಾಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಲಾಗುವುದು ಎಂಬ ಭರವಸೆಯನ್ನು ಯಾರೂ ನೀಡಿರಲಿಲ್ಲ. ಮೊಟ್ಟಮೊದಲನೆಯದಾಗಿ ಯಾವದೇ ಕೆಲಸವನ್ನು ಮಾಡಬೇಕಾದರೆ ಸಾಮಾನ್ಯವಾಗಿ ಅನೇಕ ಆತಂಕಗಳು ಇರುತ್ತವೆ. ಅವುಗಳನ್ನು ಹೇಳಲು ನಾನು ಬಯಸುತ್ತೇನೆ. ಈ ಆತಂಕಗಳು ಇರುವುದನ್ನು ಗಮನಕ್ಕೆ ತೆಗೆದು ಕೊಂಡು ಅರ್ಥಮಾಡಿಕೊಂಡಿದ್ದರೆ ಇಷ್ಟು ಕಟುವಾಗಿ ಟೀಕೆ ಮಾಡಲು ಕಾರಣವಿರುತ್ತಿರಲಿಲ್ಲವೆಂದು ನನ್ನ ಭಾವನೆ.

ಈ ರಾಷ್ಟ್ರೀಯ ವಿಸ್ತರಣ ಯೋಜನೆಯನ್ನು ಒಂದು ಹೊಸ ವಿಭಾಗ ಅಥವಾ ಡಿಪಾರ್ಟ್‌ಮೆಂಟು ಎಂದು ತೆರೆಯಲಿಲ್ಲ. ಇದೊಂದು ಕೇವಲ co-ordinating agency ಎಂದು ಸ್ಪಷ್ಟವಾಗಿ ತಿಳಿಸಿ ಬೇರೆ ರೀತಿಯಲ್ಲಿ indirectly ಕೆಲಸ ಮಾಡಲ್ಪಡಬೇಕೆಂದು ಹೇಳಲಾಗಿದೆ. ಇದನ್ನು ಒಂದು ಹೊಸ ವಿಭಾಗವನ್ನಾಗಿ ಮಾಡಿದ್ದರೆ ಕೆಲಸ ಸರಿಯಾಗಿ ಆಗುತ್ತಿರಲಿಲ್ಲ ಹಾಗು ತೊಂದರೆಯಾಗುತ್ತಿತ್ತು. ಇದೊಂದು steering wheel ಇದ್ದಹಾಗೆ ಎಲ್ಲ ವಿಭಾಗಗಳ ಸಂಯೋಜನೆಯಿಂದ ಸಹಕಾರದಿಂದ ಈ ರಾಷ್ಟ್ರೀಯ ವಿಸ್ತರಣ ಯೋಜನೆಯ ಮೂಲಕ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವುದೇ ಇದರ ಗುರಿಯಾಗಿದೆ. ಗ್ರಾಮಾಂತರಗಳಲ್ಲಿಯ ಜನಜೀವನವನ್ನು ಪ್ರತ್ಯಕ್ಷ ಸ್ಪರ್ಶವಾಗಿ ಅವರ ಸುಖದುಃಖಗಳನ್ನು ಕಂಡು, ನೋಡಿ ಅರಿತುಕೊಂಡು ಅವುಗಳನ್ನು ನಿವಾರಣೆ ಮಾಡಬೇಕೆಂಬುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಗ್ರಾಮ ಜೀವನದ ಸುಧಾರಣೆಗಾಗಿ ಇಂಥ ಪ್ರಯತ್ನ ಇದಕ್ಕೂ ಮೊದಲು ಎಂದೂ ನಡೆದಿರಲಿಲ್ಲ. ಇದರ ಅವಶ್ಯಕತೆ ಎಷ್ಟಿದೆ ಎಂಬುದನ್ನು ಮನಗಾಣಬೇಕು. ಈ ಯೋಜನೆಯನ್ನು ಪ್ರಾರಂಭಿಸುವಾಗ ಈ ನಮ್ಮ ಹೊಸ ಕರ್ನಾಟಕ ರಾಜ್ಯ ರಚಿತವಾದಮೇಲೆ ಯಾವ ಯಾವ ತೊಂದರೆಗಳು ಇದ್ದುವು ಎಂಬುದನ್ನು ಹೇಳಲು ನಾನು ಬಯಸುತ್ತೇನೆ. ಐದು ಪ್ರದೇಶಗಳು ಒಂದು ಆಡಳಿತದಲ್ಲಿ ಬಂದ ಕೂಡಲೇ ಮೊಟ್ಟಮೊದಲನೆಯದಾಗಿ ಸರಕಾರ ಬಿಡಿಸಬೇಕಾದ ಬಿಕ್ಕಟ್ಟಿನ ಪ್ರಶ್ನೆಯು ಯಾವುದೆಂದರೆ ಐದು ವಿಭಾಗಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾದ ಕಾರ್ಯ ಪದ್ಧತಿ, ಪ್ರತ್ಯೇಕ ಪ್ರತ್ಯೇಕವಾದ ಆಡಳಿತ ಪದ್ಧತಿ, ಹಾಗೂ ನೌಕರರ ಬದಲಾವಣೆ ಇವುಗಳನ್ನು ಯಾವರೀತಿ ಒಂದುಗೂಡಿಸಬೇಕು, ಸಂಯೋಜನೆ ಮಾಡಬೇಕು ಎಂಬುದೇ ಮುಖ್ಯ ಪ್ರಶ್ನೆಯಾಗಿತ್ತು. ಸದಸ್ಯರಿಗೆ ಗೊತ್ತಿರುವ ಹಾಗೆ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಒಂದು ಬೇರೆ ತರಹ ಇತ್ತು

(ಶ್ರೀ ರಾಮಕೃಷ್ಣ ಹೆಗ್ಗಡೆ)

Extension officer ಮತ್ತು Agricultural co-operation ಇರಲಿಲ್ಲ, ಕೊಡಗಿನಲ್ಲಿ B.D.O. ಇರಲಿಲ್ಲ, ಅಲ್ಲದ್ದ Special Commissioner ಕೆಲಸ ಮಾಡುತ್ತಿದ್ದರು. ಗುಲಬರ್ಗಾದಲ್ಲಿ B.D.O. ಮಂಜೂರು ಆಗಿದ್ದರೂ ಸಹ ಮೂರು ವರ್ಷಗಳವರೆಗೆ ನೇಮಕ ಮಾಡಿರಲಿಲ್ಲ. ಮೈಸೂರಿನಲ್ಲಿ ಒಂದು ತರಹ ಏದ್ದರೆ ಮಂಗಳೂರಿನಲ್ಲಿ ಬೇರೆ ತರಹದ್ದಾಗಿತ್ತು. ಇದೊಂದು ಇಷ್ಟು ಗಡುಸಾದ ಪ್ರಶ್ನೆಯಾಗಿತ್ತು. ಕೇಂದ್ರ ಸರಕಾರದ ಸೂಚನೆಯ ಪ್ರಕಾರ ಕೆಲಸ ಪ್ರಾರಂಭಿಸಬೇಕಾಯಿತು. ಎಲ್ಲವನ್ನು ಒಟ್ಟುಗೂಡಿಸಿ ಒಂದು ಸಮನ್ವಯಕಾರ್ಯ ಪದ್ಧತಿಯನ್ನು ಅನುಸರಿಸಿ ಈ ಯೋಜನೆಯನ್ನು ಜಾರಿಗೆ ತಂದುದು ನಮ್ಮೆಲ್ಲರಿಗೆ ಒಂದು ರೀತಿಯ ಅಭಿಮಾನ, ಸಂತೋಷದ ಸಂಗತಿಯಾಗಿಹೆ. ಬಹುಮಟ್ಟಿಗೆ ಎಲ್ಲವನ್ನು ಸಂಯೋಜನೆ ಮಾಡಿ ಒಂದು ಏಕರೂಪತೆಯ ಕಾರ್ಯಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

ಈ ಯೋಜನೆಯಲ್ಲಿ ನಾವು ಮಾಡತಕ್ಕಂಥ ಕೆಲಸ, ಈ ಮೊದಲೇ ನಾನು ಹೇಳಿದಹಾಗೆ, ಹಳ್ಳಿಗಳಲ್ಲಿ ಮಾಡಬೇಕಾಗಿದೆ, ಪಟ್ಟಣಗಳಲ್ಲಿ ಮಾಡಬೇಕೆಂದು ಅಲ್ಲ, ಹಳ್ಳಿಗಳ ಸಮಸ್ಯೆಗಳು ಏನು ಇವೆ ಎಂಬುದನ್ನು ವಿವರವಾಗಿ ನಾನು ಹೇಳಬೇಕಾಗಿಲ್ಲ. ತಮೆಲ್ಲರಿಗೂ ಅವು ಗೊತ್ತೇ ಇವೆ. ಮುಖ್ಯವಾಗಿ ಆ ಶಿಕ್ಷಣ, ಅಜ್ಞಾನ, ವೈಮನಸ್ಯ ಜಾತೀಯತೆ, ಬಡತನ-ಹೀಗೆ ನೂರಾರು ಪ್ರಶ್ನೆಗಳನ್ನು ಪರಿಹರಿಸುವ ಬೇಡಿಕೆಗಳು ಇರುವುದನ್ನು ಗಮನದಲ್ಲಟ್ಟುಕೊಳ್ಳಬೇಕಾಗಿದೆ. ಒಂದು ಯೋಜನೆಯ ಸ್ಥಳಕ್ಕೆ ಒಟ್ಟಿಗೆ ಒಬ್ಬ ತಾಲ್ಲೂಕ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ಗ್ರಾಮಸೇವಕರು ಇರುತ್ತಾರೆ. ಎಲ್ಲ ಸಮಸ್ಯೆಗಳನ್ನೂ ಒಮ್ಮೆಲೇ ಪರಿಹಾರ ಮಾಡಬೇಕು ಎನ್ನುವುದು ಸಮಂಜಸವಲ್ಲ. ಸಾವಿರಾರು ವರ್ಷಗಳಾಗದಿದ್ದರೂ ಐದಾರು ನೂರು ವರ್ಷಗಳಿಂದ ನಮ್ಮ ಹಳ್ಳಿಗಳಲ್ಲಿ ಈ ಅಂಧಕಾರ ಬೆಳೆದುಕೊಂಡು ಬಂದಿದೆ. ಒಟ್ಟಿಗೆ ಒಂದೇಸಲ ಈ ಅಂಧಕಾರ ಹೋಗಬೇಕಾದರೆ ಅದು ಸೂರ್ಯಪ್ರಕಾಶದಿಂದ ಮಾತ್ರ ಸಾಧ್ಯ. ಮೇಣದಬತ್ತಿಗೆ ಅಥವಾ ಸಣ್ಣಪುಟ್ಟ ದೀಪಕ್ಕೆ ಅದು ಸಾಧ್ಯವಿಲ್ಲ. ಈ ಯೋಜನೆಯ ಕಾರ್ಯ ಎಷ್ಟು ಗುರುತರವಾಗಿದೆಯೋ ಅಷ್ಟೇ complicated ಆಂದರೆ ಕ್ಲಿಷ್ಟ ಸಮಸ್ಯೆಯೂ ಸಹ ಆಗಿದೆ. ದೈನಂದಿನ ವ್ಯವಹಾರದ ಕೆಲಸದಲ್ಲಿ ಇಂಥ ಸಮಸ್ಯೆಯನ್ನು ನಾವು ಎದುರಿಸಬೇಕಾಗಿದೆ ಎಂಬುದನ್ನು ಸದಸ್ಯರು ಗಮನದಲ್ಲಟ್ಟುಕೊಂಡು ಮಾತನಾಡಿದ್ದರೆ ಈ ರೀತಿ ಟೀಕೆ ಮಾಡಲು ಅವಕಾಶ ಸಿಕ್ಕುತ್ತಿರಲಿಲ್ಲ.

ಈಗಾಗಲೇ ನಾನು ಹೇಳಿದ ಹಾಗೆ ಹತ್ತು ಅಂಶಗಳಿಗೆ ಸಂಕ್ಷೇಪವಾಗಿ ಉತ್ತರ ಕೊಡಲು ಪ್ರಯತ್ನಿಸುತ್ತೇನೆ. ಮೊದಲನೆಯದಾಗಿ ಈ ಸಲಹಾ ಸಮಿತಿ ರಚನೆಯಲ್ಲಿ ಅಧಿಕಾರೇತರರು ಅಧ್ಯಕ್ಷರಾಗಿರಕೂಡದು ಎಂಬುದನ್ನು ಸದಸ್ಯರು ಸೂಚನೆ ಮಾಡಿದ್ದಾರೆ. ಈ ಸಲಹಾ ಸಮಿತಿಯ ರಚನೆಯನ್ನು ಮೊದಲು ಸಂಬಂಧಪಟ್ಟ ಮಂತ್ರಿಗಳು ಮಾಡುತ್ತಿದ್ದರು. ಈ ಬಗ್ಗೆ ಸ್ಪಷ್ಟವಾಗಿ ಹೇಳುವುದಾದರೆ ಅದು ಸ್ವಲ್ಪ ಕಟುವಾಗಿ ಆಗಬಹುದು. ನನ್ನ ಸ್ವಂತ ಅನುಭವವನ್ನು ಹೇಳುತ್ತೇನೆ. ಈ ಕಮಿಟಿಯ ರಚನೆಯ ಸಂದರ್ಭದಲ್ಲಿ 200 ಮೈಲಿಗಳ ಅಂತರದ ಮೇಲಿಂದ ಜನರು ಬಂದು ಹೇಳುತ್ತಾರೆ. ನಾನು ಇಂಥ ಸೋಷಿಯಲ್ ವರ್ಕರ್ ಆಗಿದ್ದೇನೆ. ನನಗೆ ಅವಕಾಶ ಕೊಡಬೇಕು. ಅಂದರೆ, ನ್ನಾನು ಕೆಲಸ ಮಾಡುತ್ತೇನೆ ಎಂದು ಹೇಳುತ್ತಾರೆ. ಅಂಥವರ ವ್ಯಕ್ತಿ ಪರಿಚಯ ನಮಗೆ ಗೊತ್ತಿರುವದಿಲ್ಲ. ಸಂಬಂಧಪಟ್ಟ ಕ್ಷೇತ್ರದಲ್ಲಿ ಸಂಬಧಪಟ್ಟವರು ಬೇರೆ ಬೇರೆಯಾಗಿ ಹೇಳುತ್ತಾರೆ, ಉದಾಹರಣೆಗಾಗಿ ಒಂದು ಕ್ಷೇತ್ರದಲ್ಲಿ ಇಬ್ಬರು ಮಾನ್ಯ ಸದಸ್ಯರು ಇದ್ದರು. ಈ ಇಬ್ಬರು ಮಾನ್ಯ ಸದಸ್ಯರೂ ತಮಗೆ ಇಷ್ಟಬಂದ ರೀತಿಯಲ್ಲಿ ಈ ಅಭಿವೃದ್ಧಿ ಕಮಿಟಿಗೆ ಬೇರೆ ಬೇರೆ ಹೆಸರುಗಳನ್ನು ಸೂಚಿಸಿದ್ದರು. ಆಮೇಲೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟ ರಾಜಕೀಯಪಕ್ಷವು ಕೆಲವು ಹೆಸರುಗಳ ಬಗ್ಗೆ ಸೂಚನೆ ಕಳಿಸಿತು. ಈ ರಾಜಕೀಯ ಪಕ್ಷದ ಅಧ್ಯಕ್ಷರು ಕಳಿಸಿದ ಪಟ್ಟಿ ಬೇರೆ, ಉಪಾಧ್ಯಕ್ಷರು ಕಳಿಸಿದ ಪಟ್ಟಿ ಬೇರೆ, ಸೆಕ್ರೆಟರಿ ಕಳಿಸಿದ ಪಟ್ಟಿ ಬೇರೆ—ಹೀಗೆ ಮೂರು ಪಟ್ಟಿಗಳು ಬಂದಿದ್ದವು. ಇಬ್ಬರು ಮಾನ್ಯ ಸದಸ್ಯರು ಕಳಿಸಿದ ಎರಡು ಪಟ್ಟಿ, ರಾಜಕೀಯ ಪಕ್ಷ ಕಳಿಸಿದ ಮೂರು ಪಟ್ಟಿ—ಅಂದರೆ ಈ ಐದು ಪಟ್ಟಿಗಳನ್ನು ಸರಿಯಾಗಿ ತೂಕಮಾಡಿ ಏಮಶಿನ್‌ನಲ್ಲಿ ನೋಡಲು ಅವುಗಳಲ್ಲಿ ಒಂದು ಹೆಸರು ಮಾತ್ರ ಎರಡು—ಮೂರು ಪಟ್ಟಿಗಳಲ್ಲಿ ಇದ್ದುದು ಕಂಡುಬಂದಿತು. ಈ ತರದ ಅನೇಕ ತೊಂದರೆಗಳು ಇರುವದರಿಂದ ಸ್ವಲ್ಪ ಕಾಲವಿಳಂಬ ಆಗಿದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹೆಸರುಗಳನ್ನು ಸೂಚಿಸಲು ತಿಳಿಸಲಾಯಿತು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ, ಡೆಪ್ಯುಟಿಕಮಿಷನರ ಮೂಲಕ ಹೆಸರುಗಳ ಪಟ್ಟಿಬರಬೇಕಾಗಿರುವದರಿಂದ ಇದಕ್ಕೆ ಮೂರುನಾಲ್ಕು ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಅವರನ್ನು ಕೇಳು, ಇವರನ್ನು ಕೇಳು ಎಂದರೆ ಜೇಜಾರು ಬರುತ್ತದೆ. ಈ ಕಷ್ಟನಿವಾರಣೆ ಮಾಡಬೇಕು ಮತ್ತು ತೀವ್ರಗತಿಯಲ್ಲಿ ಕೆಲಸವಾಗಬೇಕು ಎಂಬ ಉದ್ದೇಶದಿಂದ ಈ ಕಮಿಟಿಯ ರಚನೆಯ ಕೆಲಸವನ್ನು ಆಯಾಯ ಜಿಲ್ಲಾಧಿಕಾರಿಗಳಿಗೇ ಸರಕಾರ ವಹಿಸಿಕೊಟ್ಟಿದೆ. ಯಾವ್ದೆತಳಹದಿಯ ಮೇಲೆ ಈ ಕಮಿಟಿಯ ರಚನೆಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ನಿರ್ದೇಶನ ಮಾಡಿದ್ದೇವೆ.

ಮತ್ತೊಂದು ಮಾತು ಹೇಳುತ್ತೇನೆ. ಮೊದಲು ಬ್ಲಾಕ್ ಅಡ್ವೈಸರಿ ಕಮಿಟಿಗೆ ಸದಸ್ಯರ ಸಂಖ್ಯೆ ಒಂಬತ್ತು ಇತ್ತು. ಅಧಿಕಾರಿಗಳು ಒಬ್ಬರು ಇದ್ದರು. ಅವರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಸಿಕ್ಕಬೇಕು. ಅವರ ಅಭಿಪ್ರಾಯಕ್ಕೆ ಹೆಚ್ಚು ತೂಕ ಬರಬೇಕು. ಮತ್ತು ಸಾಧ್ಯವಾದಮಟ್ಟಿಗೂ ಪ್ರತಿಯೊಂದು ಕ್ಷೇತ್ರಕ್ಕೂ ಪ್ರಾತಿನಿಧ್ಯ ದೊರಕಬೇಕೆಂಬ ದೃಷ್ಟಿಯಿಂದ ಈ ಸಂಖ್ಯೆಯನ್ನು ಒಂಬತ್ತರಿಂದ 20ರ ವರೆಗೂ ಪ್ರಸಂಗವಶಾತ್ 22ರ ವರೆಗೂ ಏರಿಸಲಾಯಿತು.

Taluk multi-purpose co-operative societies representatives, representatives of several C.D. Blocks functioning in that taluk—or any other social service organisation in the block.

ಈ ರೀತಿ ಇದಕ್ಕೆ ಸಹಕಾರ ಕೊಡುವಂಥ ಸಂಘ ಸಂಸ್ಥೆಗಳಿಗೆ ಪ್ರಾತಿನಿಧ್ಯ ಸಿಕ್ಕಬೇಕೆಂಬ ಉದ್ದೇಶದಿಂದ ಸರ್ಕಾರದವರು ನಿರ್ದಿಷ್ಟವಾದ ನಿಬಂಧನೆಗಳನ್ನು ಮಾಡಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಹೇಳಲಕ್ಕೆ ಬಯಸುತ್ತೇನೆ. ಕೆಲವೊಂದುಕಡೆ ಸರ್ಕಾರದವರು ಕೊಟ್ಟಂಥ ನಿರ್ದೇಶಕ್ಕನುಸಾರವಾಗಿ ಕೆಲಸ ನಡೆದಿಲ್ಲ. ಕೆಲವು ಕ್ಷೇತ್ರಗಳಲ್ಲಿ ಅರ್ಬನ್‌ನಿಂದ ಏರಿಯಾದಿಂದ ಒಬ್ಬರಿಗಿಂತ ಹೆಚ್ಚು ಜನರನ್ನು ತೆಗೆದುಕೊಂಡಿದ್ದೇವೆ. ಆ ಸಂದರ್ಭದಲ್ಲಿ ಕೆಲವರಿಗೆ ಸಿಕ್ಕಲಿಲ್ಲ ಎಂಬ ದೂರು ಬಂತು. ಅದನ್ನು ಪರಿಶೀಲನೆ ಮಾಡಿದ್ದೇವೆ. ಬರ್ಜಿ-

ಅವರು ಒಂದು ವಿಷಯ ಹೇಳಿದರು. ಖಾನಾಪುರ ಬ್ಲಾಕ್‌ನಲ್ಲಿ 14 ಜನರನ್ನು ಕಾಂಗ್ರೆಸ್‌ನವರನ್ನೇ ಹಾಕಿದ್ದಾರೆ ಎಂದು ಹೇಳಿದರು. ಪರಿಶೀಲನೆ ಮಾಡಿದ್ದರಲ್ಲಿ ಅದು ಅಸಂಭವ, ಮತ್ತು ಅನತ್ಯ ಎಂಬುದು ಎಲ್ಲರಿಗೂ ಮನವರಿಕೆಯಾಗುತ್ತದೆ. ಒಂದು ಮಾತನ್ನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ನಾವು ಬ್ಲಾಕ್ ಅಡ್ವೈಸರಿ ಸಮಿತಿಗೆ ನೇಮಕಮಾಡುವಾಗ ಯಾರು ಯಾವ ರಾಜಕೀಯ ಪಕ್ಷಕ್ಕೆ ಸೇರಿದವರು; ಅವರ ಜಾತಿ ಏನು, ಅವರ ಮತ ಏನು; ಅವರು ಯಾರ ಸಂಬಂಧೀಕರು; ಯಾರ ಮಿತ್ರರು ಎಂಬ ದೃಷ್ಟಿಯಿಂದ ನೋಡುವುದಿಲ್ಲ. ಏಕೆಂದರೆ ಆರೀತಿ ಆರೋಪಣೆ ಬರುತ್ತದೆ ಎಂದು ನಮಗೆ ಗೊತ್ತು. ಆದರೂ ಕೂಡ ಯಾವರೀತಿ ಮಾಡಿದರೂ ಆರೋಪಣೆ ಬರದೇ ಹೋಗುವುದಿಲ್ಲ. ಎಲ್ಲ ಜನರಿಗೂ ಸಮಾಧಾನ ಮಾಡುವುದು ಅಸಾಧ್ಯವಾದಮಾತು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ಈ ಬ್ಲಾಕ್ ಅಡ್ವೈಸರಿ ಕಮಿಟಿ ರಚನೆಯ ವಿಷಯವಾಗಿ ಇಷ್ಟೊಂದು ವಿಶೇಷ ವಾದಂಥ ಆಸಕ್ತಿ ಮತ್ತು ತೀವ್ರವಾದಂಥ ಟೀಕೆಗಳು ಇಲ್ಲಿ ಬಂದದ್ದು ನನಗೆ ಸರಿ ಎನಿಸಲಿಲ್ಲ. ಈ ರೀತಿ ಕೆಲವು ಜನ ಮೇಲೆ ನಿಂತುಕೊಂಡು ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆ. ಹಾಗಾಗುತ್ತದೆ, ಹೀಗಾಗುತ್ತದೆ ಎಂದು ಹೇಳುವುದು ಆಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ನಿಜವಾಗಿಯೂ ತಪ್ಪಿದ್ದರೆ ಒಪ್ಪಿಕೊಳ್ಳೋಣ. ಒಂದೆರಡು ಕಡೆ ಸರ್ಕಾರಿ ನೌಕರರು ಬ್ಲಾಕ್ ಅಡ್ವೈಸರಿ ಕಮಿಟಿ ಮೆಂಬರಾಗಿದ್ದುದನ್ನು ನನ್ನ ಗಮನಕ್ಕೆ ಸಂಬಂಧಪಟ್ಟ ಸದಸ್ಯರು ತಂದರು. ನಾನೇ ಅವರಿಗೆ ತಿಳಿಸಿದಮೇಲೆ ರಾಜೀನಾಮೆ ಕೊಟ್ಟಿದ್ದಾರೆ. ಆದ್ದರಿಂದ ಇದೆಲ್ಲಾ ಸಣ್ಣ ವಿಷಯ. ಇಂಥ ಸಣ್ಣ ವಿಷಯವನ್ನು ಇಷ್ಟು ದೊಡ್ಡ ಸಭೆಯಮುಂದೆ ಇಷ್ಟೊಂದು ತೀವ್ರವಾಗಿ, ದೀರ್ಘವಾಗಿ ಚರ್ಚೆಮಾಡುವುದು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ವಿವರವನ್ನು ಕೊಡಲಕ್ಕೆ ಬಯಸು ತ್ತೇನೆ. ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ಬಹಳ ಅಪಾರವಾದ ಹಣ ದುಂದಾಗುತ್ತಿದೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ನಾನು ಪುನಃ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಉದ್ದೇಶವೇನು ಮತ್ತು ಕಾರ್ಯ ವ್ಯಾಪ್ತಿ ಏನೆಂಬುದನ್ನು ಸ್ವಲ್ಪದರಲ್ಲಿ ಮಾನ್ಯ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲ ಆಗುವಂಥ ಪ್ರತಿಯೊಂದು ಕೆಲಸವನ್ನೂ ಕೂಡ, ಯಾವುದೇ ಒಂದು ಡಿಗ್ರಿ ಅಥವಾ ಮಾಪಕದಿಂದ ಅಳತೆ ಮಾಡಲಕ್ಕೆ ಬರುವುದಿಲ್ಲ. ಇಲ್ಲಿಯ ವರೆಗೂ ಅಂಧಕಾರದಲ್ಲಿ ಇದ್ದಂಥ, ಸುಪ್ತವಾಗಿದ್ದಂಥ ಅಥವಾ ನಿದ್ದೆಮಾಡುತ್ತಾ ಇದ್ದಂಥ ಒಂದು ದೊಡ್ಡ ಮಾನವ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವುದಕ್ಕೆ, ಉತ್ಸಾಹವನ್ನುಂಟುಮಾಡುವುದಕ್ಕೆ, ಅವರಲ್ಲಿ ಆತ್ಮಗೌರವವನ್ನುಂಟುಮಾಡುವುದಕ್ಕೆ, ಮತ್ತು ಆತ್ಮಶಕ್ತಿ, ವಿಶ್ವಾಸವನ್ನು ಹೆಚ್ಚಿಸುವಂತೆ ಮಾಡಲು ಆ ಯೋಜನೆ ಇರುವಾಗ ಇದನ್ನು ಯಾವರೀತಿ ಅಳತೆಮಾಡುತ್ತೀರೋ ಗೊತ್ತಾಗುವುದಿಲ್ಲ. ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ ಎಂದರೆ ಕೇವಲ ಕೆಲವು ರಸ್ತೆಗಳ ವ್ಯವಸ್ಥೆ, ಸ್ಕೂಲುಗಳು, ಸಣ್ಣಪುಟ್ಟ ನೀರಾವರಿ ಯೋಜನೆಯ ವ್ಯವಸ್ಥೆ ಇದರ ಮೂಲಕ ಖರ್ಚುಮಾಡುವಂಥ ಹಣದ ಮಾಪಕವನ್ನು ಅಥವಾ ಅಳತೆಯನ್ನು ಇಟ್ಟುಕೊಂಡಂತೆ ಕಾಣುತ್ತದೆ. ಇದು ಸರಿಯಲ್ಲ ಎಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕ್‌ಗಳಲ್ಲಿ ಆಗುವಂಥ ಕೆಲಸ ಇಂಥಿಂಥಾದ್ದೇ ಆಗಬೇಕು, ಇಂಥಿಂಥಾದ್ದೇ ಆಗಬಾರದು ಎಂದು ಹೇಳುವಂಥ ಪರಿಮಿತಿ ಇಲ್ಲ. ಹೀಗಿರುವಾಗ ಎಸ್ಟಾಬ್ಲಿಷ್‌ಮೆಂಟಿಗೆ ಅಪಾರ ಹಣ ಖರ್ಚಾಗುತ್ತದೆ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

6-30 P.M.

ಹಿಂದೆ ಒಂದಾವರ್ತಿ ಮೆಡಿಕಲ್ ಖಾತೆಯವರಲ್ಲಿದ್ದ ಒಂದು ಮೈಕ್ರಾಸ್ಕೋಪ್ ಒಂದೇ ಕಡೆ ಕೆಲಸ ದಲ್ಲಿದ್ದಂಥಾ ಒಂದು ವೆಟರಿನರಿ ಇಲಾಖೆಯವರಿಗೆ ಯಾವುದೋ ಕೆಲಸದಬಗ್ಗೆ ಅಗತ್ಯವಾಗಿ ಬೇಕಾಗಿದ್ದಂಥಾ ಕಾಲದಲ್ಲಿ ಅದನ್ನ ವೆಟರಿನರಿ ಇಲಾಖೆಯವರು ಕೇಳಿದ್ದಕ್ಕೆ ಮೆಡಿಕಲ್ ಇಲಾಖೆಯವರು ನಾವು ಅದನ್ನು ಕೊಡಲಕ್ಕೆ ತಯಾರಾಗಿಲ್ಲ, ಆಬಗ್ಗೆ ಮೇಲಿನಿಂದ ನೀವು ಆರ್ಡರ್ ತನ್ನಿ ಆಮೇಲೆ ನೋಡೋಣ ಎಂದು ಹೇಳಿದ್ದರೆಂಬ ಒಂದು ಸಂಗತಿಯನ್ನು ನಾನೂ ಸಹ ಕೇಳಿದ್ದೆನು. ಆದರೆ ಈ ದಿವಸ ನಾನು ತಮಗೆಲ್ಲರಿಗೂ ಈ ಬಗ್ಗೆ ಒಂದು ವಿಚಾರವನ್ನು ಸ್ಪಷ್ಟವಾಗಿ ತಿಳಿಸ ಬಯಸುತ್ತೇನೆ. ಈ ದಿವಸ ಅಂಥ ಒಂದು ಅಸಂಬದ್ಧ ರೀತಿಯ ಅಸಹಕಾರ ಟೀಕೆಗಳಾಗಲಿ ಅಥವಾ ಈ ಸಂಬಂಧವಾದ ಇತರ ಯಾವ ಒಂದು ದೂರುಗಳಾಗಲಿ ನಮಗೆ ಕೇಳಿಬರುತ್ತಿಲ್ಲ. ಹಾಗೂ ಒಂದು ವೇಳೆ ಎಲ್ಲಯಾದರೂ ಅಂಥ ಸಣ್ಣಪುಟ್ಟ ಒಂದೆರಡು ವಿಷಯಗಳಲ್ಲಿ ಏನಾದರೂ ನಡೆದಿದ್ದರೂ ನಡೆದಿರ ಬಹುದು. ಅಂಥಾದ್ದೇನಾದರೂ ನಡೆದಿದ್ದರೆ ಮಾನ್ಯ ಸದಸ್ಯರು ಆ ವಿಚಾರವನ್ನು ನನ್ನ ಗಮನಕ್ಕೆ ತರಲಿ. ನಾನು ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಅಂಥ ತೊಂದರೆಯನ್ನು ಕೂಡಲೇ ನಿವಾರಣೆ ಮಾಡುತ್ತೇನೆಂದು ಸೂಚಿಸಬಯಸುತ್ತೇನೆ. ಈ N.E.S. ಬ್ಲಾಕುಗಳು ತಾಲ್ಲೂಕ್ ಮಟ್ಟದಲ್ಲಿ ನಾಲ್ಕುಚಕ್ರಗಳ ಗಾಡಿಯೋಪಾದಿಯಲ್ಲಿ ಜನರಿಗೆ ಒಂದು ಸಹಾಯನೀಡಲು ಅದನ್ನೊಂದು ಮಾರ್ಗದರ್ಶಕ ರೀತಿಯಲ್ಲಿ ಮಾಡಲಾಗಿದೆ. ಆ ಯೋಜನೆಯ ಮೂಲಕ ಜನರನ್ನು ಹಾಗೂ ಸರ್ಕಾರದವರನ್ನೂ ಒಂದು ಹೊಂದಾಣಿಕೆಯಲ್ಲಿ ಜೋಡಿಸಿ ಜನರ ತೊಂದರೆಗಳೇನೆಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಈ ಒಂದು ಮಾರ್ಗವನ್ನು ಮಾಡಿದ್ದೇವೆ. ಈ ಉದ್ದೇಶ ಸಫಲವಾಗಬೇಕಾದರೆ ಸಾರ್ವಜನಿಕರ ಸಹಕಾರ ನಮಗೆ ಅತ್ಯಗತ್ಯ. ಆದರೆ ಇಲ್ಲಿಯವರೆಗೆ ಈಬಗ್ಗೆ ಒದಗಿನ ಲಾಗಿದ್ದ ಹಣವನ್ನು ಸದ್ವಿನಿಯೋಗ ಮಾಡಿ ಬಹಳ ಮಟ್ಟಿಗೆ ಈ ಕಾರ್ಯದಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇನ್ನು ಈ ರೆವಿನ್ಯೂ ಇಲಾಖೆಯವರೂ, ಇಂಜಿನಿಯರಿಂಗ್ ಇಲಾಖೆಯವರೂ, ಬಿ.ಡಿ.ಓ.ಗಳೂ ಒಂದು ಹೊಂದಾವಣಿಕೆಯಾಗಿ ಕೆಲಸ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಈಗ ಅಂಥ ವಿಚಾರವಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಈಗಾಗಲೇ ಸಾಕಷ್ಟು ಹೇಳಿದ್ದೇನೆ. ಆದರೆ ಶ್ರೀ ಟಿ. ಡಿ. ಮಾರಣ್ಣನವರು ಈ ಬಾಬಿಗೆ ಚೆಕ್ಕಿಕರ್ ನಾರೆಡ್ಡ್ ಇರತಕ್ಕಂಥ ಜನರನ್ನು ಡಿ.ಇ.ಓ. ಆಗಿ ತೆಗೆದುಕೊಳ್ಳಬೇಕೆಂದು ಹೇಳಿದರು. ಆದರೆ ಆ ಸ್ಥಾನದಲ್ಲಿರತಕ್ಕ ವರಿಗೇನೂ ಅಂಥ ಒಂದು ಚೆಕ್ಕಿಕರ್ ನಾರೆಡ್ಡ್ ಇರಲೇ ಬೇಕೆಂಬ ಅಗತ್ಯ ಅಷ್ಟಾಗಿರುವುದಿಲ್ಲ. ನಮ್ಮಲ್ಲಿ ಈ ಯೋಜನೆಗೆ ಸಂಬಂಧಪಟ್ಟಹಾಗೆ ಎಕ್ಸ್‌ಟೆನ್ಷನ್ ಆಫೀಸರ್ ಎಂದು ಇದ್ದಾರೆ. ಅವರಿಗೆ ಈ ಅನುಭವ ಎಲ್ಲ ಇರುತ್ತದೆ. ಇವರೆಲ್ಲರೂ ಒಂದು ಕುಟುಂಬದವರೋಪಾದಿಯಲ್ಲಿ ಕೆಲಸಮಾಡುತ್ತಿರುತ್ತಾರೆ. ಅವರು ಈ ಬಿ.ಡಿ.ಓ. ಗಳಿಗೆ ಬೇಕಾಗಿದ್ದರೆ ಆ ಚೆಕ್ಕಿ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಕರ್ ತಿಳಿಸಿಕೆಯನ್ನು ಹೇಳಿಕೊಡುತ್ತಾರೆ. ಆದರೆ ಕೆಲವು ಮಾನ್ಯ ಸದಸ್ಯರು ರೆವಿನ್ಯೂ ಇಲಾಖೆಯವರನ್ನು ಈ ಬಾಬಿಗೆ ತೆಗೆದುಕೊಳ್ಳಬಾರದೆಂದು ಹೇಳಿದರು. ಆದರೆ ಆ ರೀತಿಯ ಒಂದು ದ್ವೇಷ ಭಾವನೆಯಿಂದ ಯಾರೊಬ್ಬರ ವಿಚಾರದಲ್ಲೂ ಹೇಳಬಾರದು. ಯಾವ ಇಲಾಖೆಯವರಲ್ಲೂ ಅಂಥ ಪಕ್ಷಪಾತ ಭಾವನೆಗಳಿಲ್ಲ. ಎಲ್ಲರೂ ಬಹಳ ಕಳಕಳಿಯಿಂದಲೇ ಕೆಲಸ ಮಾಡುತ್ತಿದ್ದಾರೆ. ಯಾರಾರಲ್ಲಿ ಅಂಥ ಒಂದು ಒಳ್ಳೆಯ ಗುಣ, ದಕ್ಷತೆ ಇದೆಯೆಂದು ಕಂಡು ಬರುತ್ತದೋ ಅಂಥಾವರನ್ನೇ ಆರಿಸಿ ಈ ಬಾಬಿಗೆ ನೇಮಕ ಮಾಡಿಕೊಳ್ಳಲಾಗಿದೆ. ಈ ದಿವಸ ಬಿ.ಡಿ.ಓ. ಗಳಾಗಿ ಕೆಲಸಮಾಡುತ್ತಿರುವವರೆಲ್ಲರಲ್ಲಾ ಅಂಥ ಒಳ್ಳೆಯ ಗುಣಗಳಿವೆಯೆಂತಲೇ ನಾವು ಅವರನ್ನು ಈ ಕೆಲಸಕ್ಕೆ ನೇಮಕಮಾಡಿದ್ದೇವೆ. ಇನ್ನು ಗ್ರಾಮ ಸೇವಕರ ವಿಚಾರಕ್ಕೆ ಬಂದರೆ ಈ ಹಿಂದೆ ಈ ಯೋಜನೆಯನ್ನು ಪ್ರಾರಂಭಿಸತಕ್ಕ ಅವನರ ಮತ್ತು ಗಡಿಬಿಡಿಯಲ್ಲಿ ಬೇಸಿಕ್ ಟ್ರೈನಿಂಗ್ ಆಗದ ಕೆಲವರನ್ನು ಕೆಲಸಕ್ಕೆ ನೇಮಿಸಿಕೊಂಡಾಗಿದೆ. ಆದರೆ ಈ ದಿವಸ ಅವರನ್ನು ಮನೆಗೆ ಕಳುಹಿಸಲು ಸಾಧ್ಯವಿಲ್ಲ. ಆದುದರಿಂದ ಅಂಥವರಿಗೆಲ್ಲ ಈಗ ಟ್ರೈನಿಂಗ್ ಕೊಡಲು ತಕ್ಕ ವ್ಯವಸ್ಥೆ ಮಾಡಲಾಗಿದೆ. ಬಹಳ ಜನ ಗ್ರಾಮ ಸುಧಾರಕರಿಗೆ ವ್ಯವಸಾಯದ ಅನುಭವ ಗೊತ್ತಿರಲಿಲ್ಲ. ಅಂಥವರಿಗೆ ಹಳ್ಳಿಗಳಲ್ಲಿ ಕೆಲಸಮಾಡಲು ಬಹಳ ಕಷ್ಟವಾಗಿತ್ತು. ಈಗ ಟ್ರೈನಿಂಗಿನಲ್ಲಿ 300 ಜನಗಳಿಗೆ ಅವಕಾಶ ಕಲ್ಪಿಸಿದೆ. ಎರಡು ಬ್ಯಾಚುಗಳಾಗಲೇ ಟ್ರೈನಿಂಗ್ ಮುಗಿಸಿಕೊಂಡು ಬಂದಿವೆ. ಈ ಟ್ರೈನಿಂಗ್ ಆಗಿ ಬಂದಿರತಕ್ಕ ಜನರ ಪ್ರಾತಿನಿಧ್ಯಮಟ್ಟ ಏರಿರುತ್ತದೆ. ಇನ್ನೂ ಈ ಯೋಜನೆ ಒಂದು ಸ್ಥಿಮಿತಕ್ಕೆ ಬರಬೇಕಾಗಿದೆ. ಹಾಗೆ ಇದು ಸ್ಥಿಮಿತಕ್ಕೆ ಬಂದನಂತರ ಈ ಬಾಬಿಗೆ ಬರತಕ್ಕ ಜನರಲ್ಲಿ ಯಾವ ದೋಷಾರೋಪಣೆಗಳಿಗೂ ಅವಕಾಶವಿರುವುದಿಲ್ಲ. ಹಾಗೂ ಒಂದು ವೇಳೆ ಅವರಲ್ಲಿ ಏನಾದರೂ ಅಂಥ ದೋಷಾರೋಪಣೆಗಳು ಕಂಡುಬಂದಲ್ಲಿ ಆಬಗ್ಗೆ ನೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಕೊನೆಗೆ ಐದನೆಯದು. ಜೀಪುಗಳು ದುರುಪಯೋಗವಾಗುತ್ತವೆ ಎಂದು ಬಹುತೇಕ ದೇಶದ ತುಂಬ ರಾಷ್ಟ್ರೀಯ ವಿಸ್ತರಣಾ ಯೋಜನೆಯಮೇಲೆ ಬಂದಂಥ ಸಾಮಾನ್ಯವಾದ ಟೀಕೆ. ಯಾವ ಕಾರಣದಿಂದ ಈ ಟೀಕೆ ಉದ್ಭವವಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಕೆಲವು ಮಟ್ಟಿಗೆ ಇದರಲ್ಲಿ ಸತ್ಯವೂ ಇದೆ. ಉದಾಹರಣೆಗೆ ಶ್ರೀ ಬೋರಣ್ಣಗೌಡರು ಕಂಪ್ಲೇಂಟ್ ಕೊಟ್ಟರು. ಕಂಪ್ಲೇಂಟ್ ಕೊಟ್ಟ ಕೂಡಲೇ ತನಿಖೆ ಮಾಡಿದೆ. ಎಲ್ಲೆಲ್ಲಿ ಜೀಪುಗಳು ದುರುಪಯೋಗವಾಗುತ್ತದೆ ಎಂದು ಕಂಪ್ಲೇಂಟ್ ಬರುತ್ತದೋ ಅಲ್ಲೆಲ್ಲಾ ಸರ್ಕಾರದವರು ದಾಕ್ಷಿಣ್ಯಕ್ಕೆ ಒಳಗಾಗದೆ ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಜೀಪುಗಳನ್ನು ಬಳಸುವುದರಲ್ಲಿ ಯಾವುದು ಉಪಯೋಗ ಯಾವುದು ದುರುಪಯೋಗ ಎಂದು ಹೇಳುವುದು ಒಬ್ಬರ ದೃಷ್ಟಿಯ ಮೇಲೆ ಹೋಗುತ್ತದೆ. ಯಾವುದೋ ಕೆಲಸಕ್ಕೆ ಹೋದಾಗ ಬೇರೆ ದೃಷ್ಟಿಯಿಂದ ಅದು ದುರುಪಯೋಗವಾಗಿ ಕಾಣಬಹುದು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಅದು ಒಳ್ಳೆಯ ಕೆಲಸಕ್ಕೆ ಉಪಯೋಗವಾಗಿದೆ ಎಂದು ಹೇಳಬಹುದು. ಶ್ರೀ ಬಲವಂತರಾವ್ ಮೆಹತಾ ಕಮಿಟಿಯೊಳಗೆ ಒಂದು ಸೂಚನೆ ಇತ್ತು. ಜೀಪುಗಳ ವಿರುದ್ಧ ಸಾರ್ವಜನಿಕ ಕಂಪ್ಲೇಂಟ್ ಇದೆ. ಆಗ ಜೀಪುಗಳನ್ನೆಲ್ಲಾ ಎತ್ತಾಡ್ರಾ ಮಾಡಬೇಕು ಎಂದು ಸರ್ಕಾರಕ್ಕೂ ಕೂಡ ಅನ್ನಿಸಿತು. ಕೂಡಲೇ ಎತ್ತಾಡ್ರಾ ಮಾಡಬಹುದು. ಆದರೆ ಇದು ಪರಿಹಾರವಲ್ಲ. ಜೀಪುಗಳು ದುರುಪಯೋಗವಾಗುತ್ತಿವೆ ಎಂದು ಅವನ್ನೇ ಎತ್ತಾಡ್ರಾ ಮಾಡಿದರೆ ಕೆಲಸ ಹಾಳಾಗುತ್ತದೆ, ಕುಂಠಿತವಾಗುತ್ತದೆ. ಅದಕ್ಕೊಸ್ಕರ ಪುನಃ ಪುನಃ ಆದೇಶ ಕಳುಹಿಸುತ್ತೇವೆ. ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡಿದ್ದೇವೆ. ಬಹಳ ನಿಷ್ಪುರವಾದ ಕಾರ್ಯಕ್ರಮವನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ತೆಗೆದುಕೊಳ್ಳುತ್ತಾರೆ.

An HON'BLE MEMBER.—Is there any log book maintained for its use?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು ಬಡಜನರಿಗೆ, ಉಪಯೋಗವಾಗುತ್ತಿಲ್ಲ, ಜನರಿಗೆ ಉತ್ಸಾಹವಿಲ್ಲ ಎಂದು ಹೇಳಿದರು. ಜನಗಳಲ್ಲಿ ಉತ್ಸಾಹ ಹೇಗೆ ಉಂಟು ಮಾಡಬೇಕು ಎಂಬುದು ಒಂದು ದೊಡ್ಡ ಪ್ರಶ್ನೆಯಾಗಿದೆ. ಇದು ಅಧಿಕಾರಿಗಳಿಗೆ ಸಂಬಂಧಪಟ್ಟದ್ದು ಮಾತ್ರ ಅಲ್ಲ. ಇಲ್ಲಿರತಕ್ಕ ಸದಸ್ಯರೆಲ್ಲರೂ ಸಮಾಜ ಕಾರ್ಯ ಕರ್ತರುಗಳು. ರಾಜಕೀಯ ಮುಂದಾಳುಗಳು, ಜನರಿಂದ ದೇಣಿಗೆ, ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೆ, ಇಂಥಿಂಥಾ ಕೆಲಸಕ್ಕೆ ಇಷ್ಟಿಷ್ಟು ತೆಗೆದುಕೊಳ್ಳಬೇಕು. ಎಂದು ಮಾಡಿದ್ದೇವೆ. ಎಲ್ಲರಿಗೂ ಗೊತ್ತಿರುವ ನಂಗತಿ 100ಕ್ಕೆ 75ರಷ್ಟು ದೇಣಿಗೆ ತೆಗೆದುಕೊಳ್ಳುತ್ತಾರೆ. ಆಯಾಯ ಕೆಲಸ, ನೇಚರ್ ನೋಡಿ ಶೇಕಡ 25 ರಿಂದ 50ರ ವರೆಗೆ ಜನರಿಂದ ಕಾಂಟ್ರಿಬ್ಯೂಷನ್ ತೆಗೆದುಕೊಳ್ಳುತ್ತಾರೆ. ಒಂದು ವಿಚಾರವನ್ನು ಗಮನದಲ್ಲಿ ಇಡಬೇಕು—ಮುಖ್ಯವಾಗಿ ಜನರಲ್ಲಿ ಉತ್ಸಾಹ ಅಥವಾ ಜಾಗೃತಿಯನ್ನು ಹೆಚ್ಚಿಸಬೇಕು ಎನ್ನುವ ವಿಷಯ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲದೆ. ಈಗ ಸರ್ಕಾರಕ್ಕೆ ಎರಡಾ ಜನರಿಗೂ ಎರಡಾ ಸಹಾಯವನ್ನೂ ಕೊಡಲು ಶಕ್ತಿ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ನಾವು ಕೆಲವು ಕ್ಷೇತ್ರಗಳನ್ನು ಆರಿಸಬೇಕಾದರೆ ಯಾವ ಭಾಗದಲ್ಲಿ ಜನತೆಯಲ್ಲಿ ಹೆಚ್ಚು ಉತ್ಸಾಹ ಕಂಡು ಬರುತ್ತದೋ, ಜನರು ಎಲ್ಲಿ ತಾವಾಗಿಯೇ ಕೆಲಸ ಮಾಡುವುದಕ್ಕೆ ತಯಾರು ಇದ್ದಾರೆ ಎಂದು ಹೇಳುತ್ತಾರೋ ಅಂಥ ಕ್ಷೇತ್ರಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಅದನ್ನು ನೋಡಿಕೊಂಡು ಮಾಡಿದರೆ ಆ ಭಾಗದ ಜನರೂ ಕೂಡ ಮುಂದೆ ಬರುತ್ತಾರೆ. ಅದು ಅನುಭವದ ಮಾತು. ಜನತೆಯ ಕಾಂಟ್ರಿಬ್ಯೂಷನ್ ಬಹಳ ಇಲ್ಲ. ಅವರ ಶಕ್ತಿಯನ್ನು ನೋಡಿ ಅವರ ಅನುಭವದ ಮೇಲೆ ನಿಗದಿಮಾಡುತ್ತಾರೆ ಎಂದು ಹೇಳಬಯಸುತ್ತೇನೆ. ಇನ್ನು ಇಂಥ ಬ್ಲಾಕುಗಳಲ್ಲಿ ಕೆಲವೊಂದು ಭಾಗದಲ್ಲಿ ಕೆಲಸ ಆಗುತ್ತಿದೆ, ಕೆಲವೊಂದು ಭಾಗದಲ್ಲಿ ಕೆಲಸ ಆಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಈ ಒಂದು ವಿಷಯವನ್ನು ಇಲ್ಲಿ ಎತ್ತುವುದಕ್ಕೆ ಬದಲಾಗಿ ಆಯಾ ಸಂಬಂಧಪಟ್ಟ ಬ್ಲಾಕ್ ಅಡ್ವೈಜರಿ ಕಮಿಟಿಯೊಳಗೆ ಎತ್ತಿದರೆ ಇದು ಇತ್ಯರ್ಥವಾಗುತ್ತದೆ. ಬ್ಲಾಕ್ ಅಡ್ವೈಜರಿ ಕಮಿಟಿಯೊಳಗೆ ಎಲ್ಲೆಲ್ಲಿ ಯಾವ ಕೆಲಸ ಆಗಬೇಕು ಹೇಗೆ ಆಗಬೇಕು ಎಂಬುದನ್ನು ಚರ್ಚೆ ಮಾಡುತ್ತಾರೆ. ಆದ್ದರಿಂದ ಆಯಾಯ ಬ್ಲಾಕಿನಲ್ಲಿ ಸಂಬಂಧಪಟ್ಟ ಸದಸ್ಯರು ಕುಳಿತುಕೊಂಡು ಯಾವ ಯಾವ ಬ್ಲಾಕಿನಲ್ಲಿ ಕೆಲಸ ಆಗಿಲ್ಲ, ಯಾವ ಯಾವ ಕೆಲಸ ಆಗಬೇಕು ಎಂಬುದನ್ನು ವಿಚಾರಮಾಡಬೇಕು.

ಇನ್ನು ಏಳನೆಯದಾಗಿ ವ್ಯವಸಾಯದ ಬಗ್ಗೆ ಯೋಗ್ಯವಾದ ಕೆಲಸವನ್ನು ಮಾಡಿಲ್ಲ ಎಂದು ಹೇಳಿದರು. ಇದರಲ್ಲಿ ಕೂಡ ಸ್ವಲ್ಪ ಮಟ್ಟಿಗೆ ಸತ್ಯಾಂಶವಿದೆ. ಇಷ್ಟು ದಿವಸಗಳವರೆಗೆ ಐದು ಭಾಗಗಳಿಂದ ಬಂದಂತಹ ಒಂದು

ರೀತಿಯಾದ ವಿಭಿನ್ನ ಪದ್ಧತಿಗಳಿದ್ದವು. ಇವುಗಳನ್ನೆಲ್ಲ ಏಕರೂಪತೆಗೆ ತರಲು ಯತ್ನಿಸಬೇಕಾಗಿದೆ. ಒಂದು ಅಂಶ ಏನೆಂದರೆ, ಎಲ್ಲ ಕಡೆಗೆ minor programmes (spectacular side) ಇವಕ್ಕೆ ಅಪಮ್ಟು ಹೆಚ್ಚಿನ ಮಹತ್ವ ಕೊಡುವುದು ಕಂಡುಬಂದಿದೆ. ಎಲ್ಲರಿಗೂ ತಿಳಿದಿರುವಂತೆ ಎಷ್ಟೋ ಕಡೆಗಳಲ್ಲಿ ಸ್ಕೂಲು ಬೇಕು ಎಂದು ಕೇಳುತ್ತಾರೆ. ರಸ್ತೆ ಬೇಕು ಎಂದು ಕೇಳುತ್ತಾರೆ. ಆಸ್ಪತ್ರೆ ಕೊಡಬೇಕು ಎಂದು ಕೇಳುವುದು ಸ್ವಾಭಾವಿಕವಾಗಿದೆ. ಆದರೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಈ ಕೆಲಸಗಳಿಗೆಲ್ಲ ಗೌಣವಾಗಿ, ಮುಖ್ಯವಾಗಿಲ್ಲ ಎಂದು ತೋರಬಹುದು. ಜನಜೀವನದಲ್ಲಿ ಪ್ರಗತಿಯಾಗಬೇಕು; ಮತ್ತು ಎಲ್ಲ ರೀತಿಯಿಂದ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕು; ಮತ್ತು ಇದಕ್ಕಾಗಿ ಮಹತ್ವವನ್ನು ಕೊಡಬೇಕು, ಇದು ಆಗಲಿಲ್ಲ. ಈಗ ಸರಕಾರದ ಒಂದು ನಿರ್ಧಾರದ ಪ್ರಕಾರ ಅಧಿಕಾರಿಗಳಿಗೆ ಆದೇಶವನ್ನು ಕೊಡಲಾಗಿದೆ. ಈ ಅಧಿಕಾರಿಗಳು ವ್ಯವಸಾಯ, ಪಶುಸಂಗೋಪನ ಇವುಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಮಹತ್ವ ಕೊಡಬೇಕು ಎಂದು ಹೇಳಲಾಗಿದೆ. ಇದಕ್ಕಾಗಿ ಗ್ರಾಮ ಸೇವಕರು ಅಪಮ್ಟು ಕೆಲಸ ಮಾಡುತ್ತಿದ್ದಾರೆ ಇವರು ತಮ್ಮ ಸಮಯವನ್ನೆಲ್ಲ ತಮ್ಮ ಡಿವಿಜನ್ನಿನಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ವ್ಯವಸಾಯ ಕೆಲಸಗಳಿಗಾಗಿ ಕೊಡಬೇಕು ಎಂದು ತಿಳಿಸಿದೆ. ಇದರಿಂದ ಮುಂದಿನ ವರ್ಷ ಈ ವ್ಯವಸಾಯವು ವಿಶೇಷವಾಗಿ ಮುಂದಕ್ಕೆ ಬರಲು ಅವಕಾಶವಾಗುತ್ತದೆ. ಇದರಲ್ಲೇನೂ ಅಭ್ಯಂತರವಿಲ್ಲ.

ಆಮೇಲೆ ಅಧಿಕಾರಿಗಳಿಗೆ ಸಾಕಷ್ಟು ಟ್ರೈನಿಂಗನ್ನು ಕೊಡುತ್ತಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ಟ್ರೈನಿಂಗಿನ ಒಂದು ಭಾಗ ನಮ್ಮ ಕೈಯ್ಯಲ್ಲಿದೆ, ಮತ್ತೊಂದು ಭಾಗ ನಮ್ಮ ಭಾರತ ಸರಕಾರದ ಕೈಯ್ಯಲ್ಲಿದೆ. ಈಗ ಗ್ರಾಮಸೇವಕರುಗಳ ಟ್ರೈನಿಂಗಿಗಾಗಿ ಮೂರು ಟ್ರೈನಿಂಗು ಸೆಂಟರುಗಳನ್ನು ಮಾಡಲಾಗಿದೆ. ಇದರಲ್ಲಿ ವ್ಯವಸಾಯದ ಬಗ್ಗೆ ಟ್ರೈನಿಂಗು ಕೊಡಲಾಗುತ್ತದೆ. ಇನ್ನೂ ಯಾವ ರೀತಿಯಾದ reorganisation ವ್ಯವಸ್ಥೆ ಮಾಡಿಲ್ಲ, ಇನ್ನೂ ಮಾಡಬೇಕಾಗಿದೆ ಎಂದು ಧೈರ್ಯವಾಗಿ ಹೇಳಬಯಸುತ್ತೇನೆ. ಒಂದು ಟ್ರೈನಿಂಗು ಸೆಂಟರನ್ನು ಮೇಲ್ಮಟ್ಟದ ಅಧಿಕಾರಿಗಳಿಗೆ ಕೊಡಲು ಸಾಕಷ್ಟು ತರಹದ ಟ್ರೈನಿಂಗು ಸಿಕ್ಕಿದೆ ಇರುವುದರಿಂದ ಈ ಸಮಸ್ಯೆಯನ್ನು ತಾವುಗಳು appreciate ಮಾಡುವುದು ಕಷ್ಟ. ಇವರಿಗೆ ಹೊಸದಾದ ಒಂದು ರೀತಿಯ ಟ್ರೈನಿಂಗು ಕೊಡಬೇಕು. ಇವರಿಗೆ refresher course ನಂತೆ reorientation training, job training, ಇಂತಹ ಅನೇಕ ವಿಧವಾದ training ಇವೆ. ಈ ಗ್ರಾಮ ಸೇವಕರಿಗಾಗಿ ಮುಂದ್ಯದಲ್ಲಿ Refresher course ನಲ್ಲಿ ಟ್ರೈನಿಂಗನ್ನು ಕೊಡಲು ಯೋಚಿಸಲಾಗಿದೆ. ಈ ಬ್ಲಾಕು ಡೆವೆಲಪ್‌ಮೆಂಟ್ ಆಫೀಸರುಗಳಿಗೆ ಟ್ರೈನಿಂಗಿಗೆ ಇಲ್ಲ ಅವಕಾಶವಿಲ್ಲ, ಹೊರಗಡೆ ದೇಶಗಳಿಗೆ ಕಳುಹಿಸಬೇಕಾಗಿದೆ. ಇದು ಸಾಧ್ಯವಾಗುವುದಿಲ್ಲವೆಂದು ಈ ರೀತಿಯಾದ ಟ್ರೈನಿಂಗು ಸೆಂಟರೊಂದನ್ನು ಮೈಸೂರಿನಲ್ಲಿ ಸ್ಥಾಪಿಸುವ ನಿರೀಕ್ಷೆ ಇದೆ.

ಈ ಬ್ಲಾಕುಗಳ ಕಮಿಟಿಯಲ್ಲಿ ಕಾಂಗ್ರೆಸ್ಸಿನವರಿಗೇ ಸ್ಥಾನ ಕೊಡುತ್ತಾರೆ, ಕಾಂಗ್ರೆಸ್ಸಿನ ವಿರೋಧಿಗಳಿಗೆ ಸ್ಥಾನ ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ನಾನಾಗಲೇ ಉತ್ತರ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಒಬ್ಬ ಸದಸ್ಯರು ಹೇಳಿದರು, ಈ ಬ್ಲಾಕು ಡೆವಲಪ್‌ಮೆಂಟ್ ಆಫೀಸರುಗಳನ್ನು ಪ್ರತ್ಯೇಕವಾಗಿಡುವ ಬದಲಾಗಿ ಆಯಾ ತಾಲ್ಲೂಕಿನ ಅಮಲ್ದಾರರಿಗೇ ಸೇರಿಸಿದರೆ ಒಳ್ಳೆಯದು, ಇಲ್ಲದಿದ್ದರೆ ಈ ಅಮಲ್ದಾರರಿಗೂ, ಈ ಬ್ಲಾಕು ಡೆವೆಲಪ್‌ಮೆಂಟ್ ಆಫೀಸರಿಗೂ clash ಉಂಟಾಗುತ್ತದೆ ಎಂದು ಹೇಳಿದರು. ಹೀಗೆ ಒಬ್ಬ ಸದಸ್ಯರು ಹೇಳುತ್ತ ತಮ್ಮ ಅನುಭವದ ಮೇಲೆ ಈ ಎರಡು ಅಧಿಕಾರಿಗಳಿಗೂ ಒಬ್ಬರನ್ನು ಅಧಿಕಾರಿಗಳಾಗಿ ಮಾಡುವುದು ಒಳ್ಳೆಯದು ಎಂದು ಹೇಳಿದರು. ಆದರೆ ಹಂದೆಯೇ ಈ ಆಫೀಸರುಗಳು ಪ್ರತ್ಯೇಕವಾಗಿಯೇ ಇರಬೇಕು ಎಂದು ಇತ್ಯರ್ಥ ಮಾಡಲಾಗಿದೆ. ಅಲ್ಲದೆ ಇದು ಕೇಂದ್ರ ಸರಕಾರದ ಕಮ್ಯೂನಿಟಿ ಡೆವೆಲಪ್‌ಮೆಂಟಿನ ಮಿನಿಸ್ಟ್ರಿಯವರ ಒಪ್ಪಿಗೆಯನ್ನೂ ಪಡೆದಿದೆ. ಬಾಂಬೆ ಕರ್ನಾಟಕದಲ್ಲಿ ಅಮಲ್ದಾರರನ್ನು ಮಾಮಲತ್‌ದಾರರೆಂದು ಕರೆಯತ್ತಾರೆ. ಇವರೇ ಬ್ಲಾಕ್‌ಡೆವೆಲಪ್‌ಮೆಂಟ್ ಆಫೀಸರ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಇದನ್ನು ತಪ್ಪಿಸಿ ಪ್ರತ್ಯೇಕವಾದ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರುಗಳನ್ನು ಮಾಡಬೇಕೆಂದು ನೂಡನೆ ಕೊಟ್ಟಿದ್ದಾರೆ. ಈಗ ಬೊಂಬಾಯಿ ಸರಕಾರದಲ್ಲಿ ಯಾವ ಒಂದು ಪದ್ಧತಿಯನ್ನು ತರಬೇಕೆಂದಿದ್ದರೋ ಅವನ್ನು ಬದಲಾಯಿಸಿ ಅಲ್ಲಿ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರುಗಳನ್ನು ಪ್ರತ್ಯೇಕವಾಗಿ ಮಾಡಬೇಕೆಂದು ನಿರ್ಧಾರವಾಗಿದೆ. ಆದರೆ ಈ ತರಹದ ಅಧಿಕಾರವನ್ನು ಅಮಲ್ದಾರರಿಗೇ ಕೊಟ್ಟರೆ ಅವರು ತಮ್ಮ ಅಧಿಕಾರದ ಬಲದಿಂದ ಜನರಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಲು ಏರ್ಪಾಡು ಮಾಡುತ್ತಾರೆಂದು ಉದಾಹರಣೆಯನ್ನೂ ಕೊಟ್ಟರು. ಇದು ನಮ್ಮ ಉದ್ದೇಶವಲ್ಲ. ನಮ್ಮ ಅಧಿಕಾರದ ಒತ್ತಾಯದಿಂದ ಒಂದು ನಿರ್ಬಂಧದ ಕೆಲಸ ಆಗುವುದು ಬೇಕಿಲ್ಲ, ಹಾಗೆ ಮಾಡಬೇಕಾದರೆ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಅವಶ್ಯಕತೆಯಿಲ್ಲ. ಜನರು ತಮ್ಮ ಸ್ವ ಇಚ್ಛೆಯಿಂದ ಆತ್ಮ ಸ್ಫೂರ್ತಿಯಿಂದ ಇದರಲ್ಲಿ ಮುಂದೆ ಬರಬೇಕು, ಇದರಲ್ಲಿ ಸಹಕಾರ ಮಾಡಬೇಕು, ಎನ್ನುವ ಉದ್ದೇಶವೇ ಆಗಿದೆ.

ಯಾವುದೇ ರೀತಿಯಲ್ಲಿ ಅಧಿಕಾರದ ಪ್ರಭಾವ ಜನತೆಯ ಮೇಲೆ ಆಗಿ ಅದರಿಂದ ಕೆಲಸವಾಯಿತೆನ್ನುವುದು ಸರ್ಕಾರಕ್ಕೆ ಬೇಡ. ಯಾವುದೇ ತರಹದಲ್ಲಿ ಹಿಂತೆಗೆಯುವಂಥ ಪ್ರಶ್ನೆಯಿಲ್ಲ. ಈ ಧೋರಣೆಯನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ. ಬೊಂಬಾಯಿ ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಬಿ.ಡಿ.ಓ. ಗಳನ್ನು ಅಕ್ಟೋಬರು ತಿಂಗಳ ಒಳಗಾಗಿ ನಾವು ನೇಮಕ ಮಾಡುತ್ತೇವೆ. ಅದರಿಂದ ಅಲ್ಲಿ ಹೆಚ್ಚಿನ ಕೆಲಸವಾಗುತ್ತದೆಂದು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಜಿ. ಅಣ್ಣಾರಾವ್.—ಸೋಷಿಯಲ್ ಎಜುಕೇಷನ್ ಆಫೀಸರುಗಳನ್ನು ಏಕೆ ನೇಮಕಮಾಡಿಲ್ಲ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರು ಟ್ರೈನಿಂಗ್‌ನಲ್ಲಿದ್ದಾರೆ.

ಸಾಮಾನ್ಯವಾಗಿ ಮುಖ್ಯ ಮುಖ್ಯವಾದ ಟೀಕೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆಂದು ಭಾವಿಸುತ್ತೇನೆ. ಇನ್ನು ಇದರ ಹೊರತಾಗಿ ಕೆಲವು ಜನ ಸದಸ್ಯರು ಈ ಯೋಜನೆಗಳು ಪ್ರಗತಿಯಾಗಿಲ್ಲವೆಂದು ಹೇಳಿದರು. ಅದಕ್ಕೆ ಅಂಥ ಸದಸ್ಯರು, ಕೇಂದ್ರ ಸರ್ಕಾರ ತಯಾರು ಮಾಡಿರುವ Your State In India At a Glance ಎಂಬ ಪುಸ್ತಕವನ್ನು ದಯವಿಟ್ಟು ನೋಡಬೇಕು. ನನ್ನಲ್ಲಿ ಒಂದೇ ಪ್ರತಿ ಇದೆ. ಅದರಲ್ಲಿ ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಏನೇನು ಕೆಲಸವಾಗಿದೆ ಎಂಬುದನ್ನು ತುಲನಾತ್ಮಕವಾಗಿ ತೋರಿಸಿದ್ದಾರೆ. ಅದರಲ್ಲಿ ಒಂದು, ಒಂದೂವರೆ ವರ್ಷದಲ್ಲಿ ಏನು ಕೆಲಸವಾಗಿದೆ ಎಂದು ಕಾಣುತ್ತದೆ. ಇದು ಅನೇಕರಿಗೆ

(ಶ್ರೀ ರಾಮಕೃಷ್ಣ ಹೆಗ್ಗಡೆ)

interesting ಆಗಿರಬಹುದು. ಕುತೂಹಲವಿದ್ದವರು ಬಂದು ನೋಡಬಹುದು.

ಇನ್ನು ಒಂದೆರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿಯವರೆಗೆ ಆದಂಥ ಚರ್ಚೆಯನ್ನು ಸಾಮಾನ್ಯವಾಗಿ ದ್ವನಿಮತದಿಂದ ಕೆಲಸದಲ್ಲಿ, ಬರತಕ್ಕ ವಿಷಯ ಚರ್ಚೆಯಾಯಿತು ಎಂದು ತಿಳಿದಿದ್ದೇನೆ ಅನೇಕ ಜನ ಸದಸ್ಯರು ಏನು ಟೀಕೆ ಮಾಡಿದರೋ ಅವರೆಲ್ಲ, ನನ್ನ ಅಭಿಪ್ರಾಯದಲ್ಲಿ, ತಮ್ಮ ಸ್ವಂತ ಟೀಕೆಯನ್ನು ತಾವೇ ಮಾಡಿಕೊಂಡಿದ್ದಾರೆಂದು ಹೇಳಬಹುದು. ಎಂದರೆ ರಾಷ್ಟ್ರೀಯ ವಿಸ್ತರಣಾ ಬ್ಲಾಕುಗಳಿಗೆ ಸಂಬಂಧಪಟ್ಟ ಅಧಿಕಾರವನ್ನು ಸರ್ಕಾರ ಇಲ್ಲಿ ಹಿಡಿದುಕೊಂಡಿಲ್ಲ. 20-21 ಜನ ಸದಸ್ಯರಿರುವ ಒಂದು ಸಮಿತಿಗೆ ಇದರ ಅಧಿಕಾರವಿದೆ. ಹಣವನ್ನು ಯಾವ ರೀತಿ ಖರ್ಚುಮಾಡಬಹುದು, ಯಾವ ಕೆಲಸ ಎಲ್ಲ ಮಾಡಬಹುದು, ಕೆಲಸದ ಪ್ರಗತಿ ಎಲ್ಲಿಯವರೆಗೆ ಆಗಿದೆ ಎಂದು ನೋಡತಕ್ಕ ಪ್ರತಿಯೊಂದು ವಿಷಯದಲ್ಲಿಯೂ ಈ ಸಮಿತಿಗೆ ಸ್ವಾಯತ್ತೆ ಇದೆ. ಸ್ವಾತಂತ್ರ್ಯವಿದೆ. ಎರಡು ವಿಷಯಗಳಲ್ಲಿ ಎಂದರೆ ಆಯಾ ಬ್ಲಾಕುಗಳಿಗೆ ಕೊಟ್ಟಿರುವಗ್ರಾಂಟನ್ನು ಸಾಲವಾಗಿ ಪರಿವರ್ತಿಸಲಕ್ಕೆ ಬರುವುದಿಲ್ಲ ಮತ್ತು ಸಾಲವನ್ನು ಗ್ರಾಂಟ್ ಆಗಿ ಪರಿವರ್ತಿಸಲಕ್ಕೆ ಬರುವುದಿಲ್ಲ ಅದರಂತೆ Agriculture and Animal Husbandry ಬಾಬಿಗೆ ಒದಗಿಸಿರುವ ಹಣವನ್ನು ಕಡಮೆ ಮಾಡಿ ಬೇರೆ ಯಾವುದಕ್ಕಾದರೂ, ಕೊಡಲಕ್ಕೆ ಬರುವುದಿಲ್ಲ. ಇವೆರಡನ್ನು ಬಿಟ್ಟು ಹಣವನ್ನು ಯಾವ ರೀತಿ ಉಪಯೋಗ ಮಾಡಬೇಕು, ಯಾವ ಯಾವ ಕೆಲಸಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ಅವರಿಗೇ ಬಿಟ್ಟು ಕೊಟ್ಟಿದ್ದೇವೆ. ಕೆಲಸದಲ್ಲಿ ಏನಾದರೂ ದೋಷವಿದ್ದರೆ ಅವರು ಸರಿಪಡಿಸಬೇಕು. ಅನೇಕ ಸದಸ್ಯರು ಕಂಟ್ರಾಕ್ಟರು ತಪ್ಪು ಮಾಡಿದ್ದಾರೆಂದು ಹೇಳಿದರು. ಮೊದ ಮೊದಲು ಮೂರು ತಿಂಗಳು, ನಾಲ್ಕು ತಿಂಗಳಿಗೊಂದು ಸಲ Block Advisory Committee Meeting ಆಗುತ್ತಿತ್ತು. ಹೊಸದಾಗಿ ಒಂದು ನೋಟಿಫಿಕೇಷ್ ಕಳುಹಿಸಿದ್ದೇವೆ. ಅದರ ಪ್ರಕಾರ ಪ್ರತಿ ತಿಂಗಳೂ Block Advisory Committee Meeting ಆಗಲೇಬೇಕು ಎಂದು ನಿರೂಪಣೆ ಹಾಕಿದ್ದೇವೆ. ಪ್ರತಿ ತಿಂಗಳೂ ಮೀಟಿಂಗ್ ಆಗುವುದರಿಂದ ಅದರಲ್ಲಿ ಹೆಚ್ಚಿನ ಆಸಕ್ತಿಯಿಂದ ಮಾನ್ಯ ಸದಸ್ಯರು ಒಂದು ಕಾರ್ಯಕ್ರಮ ಹಾಕಿಕೊಂಡು, ಅದು ಎಷ್ಟರ ಮಟ್ಟಿಗೆ ಸಾಧನೆಯಾಗಿದೆ, ಏನೇನು ತೊಂದರೆಗಳಿವೆ, ಮುಂದಿನ ತಿಂಗಳು ಏನೇನು ಕಾರ್ಯಕ್ರಮವನ್ನು ಹಾಕಬಹುದು, ಯಾವ ಅಧಿಕಾರಿಯು ಸರಿಯಾಗಿ ಕೆಲಸ ಮಾಡಿಲ್ಲ, ಯಾವ ಗ್ರಾಮಸೇವಕ ತಪ್ಪುವ ಮಾಡಿದ್ದಾನೆ, ಇವುಗಳನ್ನೆಲ್ಲ ಪರೀಕ್ಷೆ ಮಾಡಬೇಕು ಮತ್ತು ವಿವೇಚನೆ ಮಾಡಿ ತೀರ್ಮಾನಕ್ಕೆ ಬರಬೇಕು. ಹಾಗೆ ಮಾಡುವುದರಿಂದ ಕೆಲಸ ಸರಿಯಾಗಿ ನಡೆಯುತ್ತದೆ, ಎಂದು ತಿಳಿಯುತ್ತೇನೆ.

ಶ್ರೀ ಅಣ್ಣಾರಾವ್‌ರವರು ಒಂದು ಮುಖ್ಯ ವಿಷಯ ಹೇಳಿದ್ದಾರೆ. ಹಾಗೆಯೇ ಮೂಲಭೂತವಾದ ವಿಷಯಗಳನ್ನು ಇನ್ನೂ ಒಬ್ಬಬ್ಬರು ಸದಸ್ಯರು ತಿಳಿಸಿದ್ದಾರೆ. ಕೆಲವು ಸದಸ್ಯರು ತಮ್ಮ ಮೆಚ್ಚಿಕೆಯನ್ನು ಕೂಡ ವ್ಯಕ್ತಪಡಿಸಿದ್ದಾರೆ. ಅವರಿಗೆಲ್ಲಾ ನಾನು ಋಣಿಯಾಗಿದ್ದೇನೆ.

ಶ್ರೀ ಅಣ್ಣಾರಾವ್‌ರವರು Intensive, Extensive ಮತ್ತು Post intensive ಈ ವಿಚಾರವಾಗಿ ಅವರು ಸೂಚನೆ ಮಾಡಿದ್ದಾರೆ. ಬಲವಂತರಾವ್ ಕಮಿಟಿಯವರು ಏನೇನು ಶಿಫಾರಸು ಮಾಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆ ರಿಪೋರ್ಟನ್ನು ಅಸೆಂಬ್ಲಿ ಸದಸ್ಯರಿಗೆ circulate ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರತಿಗಳಿಲ್ಲ. ವೈಯಕ್ತಿಕವಾಗಿ ಬೇಕಾದರೆ ತವರಿಗೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಆದರೆ, ಅದರ ಬೆಲೆಯೇನೂ ಹೆಚ್ಚಾಗಿಲ್ಲ. ಕೇಂದ್ರ ಮಿನಿಸ್ಟ್ರಿಯವರು ಪ್ರತಿಯೊಂದು Advisory Committee ಗೂ ಅದರ Extract ಕೊಟ್ಟಿದೆ. ಹೊಸದಾಗಿ ಏನು ಮಾರ್ಪಾಟು ಸೂಚಿಸಿದ್ದಾರೋ ಅದನ್ನು ಸರ್ಕಾರ ಒಪ್ಪಿದೆ, ಅದರ ಪ್ರಕಾರವೇ ಈಗ ಮಾರ್ಪಾಟಾಗಿದೆ. ಅದರ ಪ್ರಕಾರ Intensive, Extensive ಮತ್ತು Post intensive ಎಂದು ಈ ಮೂರು ಭೇದವಿರುವುದಿಲ್ಲ. ಇನ್ನು ಮುಂದೆ first stage, second stage ಎಂದಿರುತ್ತದೆ. ಮೊದಲನೆಯ stage ನಲ್ಲಿ ಐದು ಲಕ್ಷ ರೂಪಾಯಿಗಳನ್ನು ಸರ್ಕಾರ ಒದಗಿಸಬೇಕಾಗುತ್ತದೆ. ಎರಡನೆಯ ಸ್ಟೇಜು ಐದು ವರ್ಷಗಳಿದ್ದು ಅದಕ್ಕೂ ಐದು ಲಕ್ಷ ರೂಪಾಯಿ ಒದಗಿಸಬೇಕಾಗುತ್ತದೆ. ಆದರೆ ಬ್ಲಾಕ್‌ನ್ನು ಪ್ರಾರಂಭ ಮಾಡುವುದಕ್ಕೆ ಮೊದಲು Pre-Extension ಎಂದು ಕೇವಲ ವ್ಯವಸಾಯ ವಿಷಯಕ್ಕೆ ಗಮನ ಕೊಡಬೇಕಾದುದರ ಸಲುವಾಗಿ ಐದು ಗ್ರಾಮ ಸೇವಕರನ್ನೂ ಮತ್ತು Extension ಆಫೀಸರನ್ನೂ ನೇಮಿಸುತ್ತೇವೆ. ಆರು ಒಂಭತ್ತು ತಿಂಗಳು ಕೆಲಸ ನಡೆಯುತ್ತದೆ. ಆದಾದ ಮೇಲೆ first stage ನಡೆಯುತ್ತದೆ. ಆದಾದಮೇಲೆ ಐದು ವರ್ಷಕ್ಕೆ second stage. ಇದು ವ್ಯವಸ್ಥೆ ಒಮ್ಮೆಮ್ಮೆ failure ಆಗಿ, ಜನರಲ್ಲಿ enthusiam ಹೋಗಬಹುದು. ಇದು ಸರ್ಕಾರದ ತಪ್ಪಲ್ಲ. ಮೂರನೆಯ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದಾಗಿ ಗ್ರಾಮಾಂತರ್ ಕಾಟುಂಬಿಕ ಉತ್ಪನ್ನದಲ್ಲಿ ಶೇಕಡ 50 ರಷ್ಟು ಹೆಚ್ಚಳ ಉಂಟಾಗುತ್ತದೆಂದು ನಿರೀಕ್ಷಣೆ ಮಾಡುತ್ತೇವೆ. ಜಳ್ಳಿಯವರು ಒಂದು ವ್ಯಾಖ್ಯಾನ ಮಾಡಿ ತಮ್ಮ ತಮ್ಮ ಅವಶ್ಯಕತೆಯೆಲ್ಲವನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಮತ್ತು ತಮ್ಮ contribution ಕೊಡುವುದಕ್ಕೆ ಜನರು ಸಿದ್ಧರಾಗಿರಬೇಕು. ಆದ್ದರಿಂದ Post intensive course ನಲ್ಲಿ Anti-climax ಆಗುತ್ತದೆಂದು ಹೇಳುವುದು ತಪ್ಪು. ಈಗಿನ ಹೊಸ ಮಾರ್ಪಾಟಿನಿಂದ ಸದಸ್ಯರು ಹೇಳಿದ ಅನುಮಾನ ಹೋಗುತ್ತದೆ. ಇದು ಅನುಭವದಿಂದ ಮಾಡಿದ್ದು. ಇದರಿಂದ ಕೆಲಸ ತ್ವರೆಗೊಳ್ಳುತ್ತದೆ. Intensive Phase ನಲ್ಲಿ ಎರಡು ಜೀಪ್ ಕೊಡುತ್ತಿದ್ದೆವು. ಇನ್ನು ಮೇಲೆ ಒಂದು ಮಾತ್ರ ಕೊಡುತ್ತೇವೆ.

ಅಮೇಲೆ ಗ್ರಾಮ ಕೈಗಾರಿಕೆಗಳ ಬಗ್ಗೆ ಮಾನ್ಯ ಸದಸ್ಯರು ಒಬ್ಬಬ್ಬರು ಹೇಳಿದರು. ಅದರ ಬಗ್ಗೆ ಗಮನ ಕೊಡುತ್ತಿಲ್ಲ, ಎಂದು ಹೇಳಿದರು. ಕಳೆದ ವರ್ಷದ ಕೊನೆಯ ಭಾಗದಲ್ಲಿ ಮೈಸೂರು Khadi and Village Industries Board ಸ್ಥಾಪನೆಯಾಯಿತು. ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದನ್ನು ಗ್ರಾಂಟ್ ಮತ್ತು ಲೋನ್ ರೂಪವಾಗಿ ಬೇರೆ ಬೇರೆ ಗ್ರಾಮಗಳಿಗೆ ಹಂಚಿದೆ. ಈ ವರ್ಷ ಈ ಬೋರ್ಡ್ ಮತ್ತು ಸರ್ಕಾರದವರು ಸೇರಿ ಒಂದು ಸಮಯೋಚಿತ ನೀತಿಯನ್ನು Evolve ಮಾಡಿದ್ದಾರೆ. ಅದರ ಪ್ರಕಾರ 76 ಲಕ್ಷ ರೂಪಾಯಿಗಳನ್ನು ಕೇಂದ್ರದ ಖಾದಿ ಕಮಿಷನ್ನಿನವರು ರಾಜ್ಯದ ಖಾದಿ ಬೋರ್ಡಿಗೆ ಒಪ್ಪಿಸಿದೆ. ಅದರಲ್ಲಿ 40 ಲಕ್ಷ ರೂಪಾಯಿಗಳನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಂಗವಾಗಿ ಗ್ರಾಮಗಳಿಗೆ

ಒದಗಿಸಬೇಕಾಗುತ್ತದೆ. ಇದನ್ನು ಬೇರೆ ಬೇರೆ ಕೈಗಾರಿಕೆಗಳಿಗೆ ಸಹಾಯ ರೂಪವಾಗಿ ಮತ್ತು ಸಾಲದ ರೂಪವಾಗಿ ಒದಗಿಸುತ್ತೇವೆ.

ರೂರಲ್ ಹೌಸಿಂಗ್ ಬಗ್ಗೆ ಒಬ್ಬರು ಸದಸ್ಯರು ಹೇಳಿದರು. ಹಿಂದಿನ ಸಲ ರಾಷ್ಟ್ರೀಯ ವಿಸ್ತರಣ ಅಭಿವೃದ್ಧಿ ಬಜೆಟಿನಲ್ಲಿ ರೂರಲ್ ಹೌಸಿಂಗ್ ಅಭಿವೃದ್ಧಿಗೆ ಹಣ ಇರುತ್ತಿತ್ತು. ಈಗ ಎಕ್ಸ್‌ಪಿನ್‌ಮಾಡಿ ಒಂದು ಹೊಸ ಯೋಜನೆಯನ್ನು—ವಿಲೇಜ್ ಹೌಸಿಂಗ್ ಸ್ಕೀಮ್ ಎಂದು ಮಾಡಿದರು. ನಾಲ್ಕು-ಐದು ತಾಲ್ಲೂಕುಗಳಲ್ಲಿ ಈ ಸ್ಕೀಮನ್ನು ನಾವು ಕಾರ್ಯಗತ ಮಾಡಿದ್ದೇವೆ. ಶಿಡ್ಲಘಟ್ಟ, ಪಾಂಡವಪುರ, ಸಾಗರ, ಹುಕ್ಕೇರಿ ಮತ್ತು ಯಾದ್ಗಿರಿಗಳಲ್ಲಿ ಕೆಲವೊಂದು ಹಳ್ಳಿಗಳನ್ನು ಆರಿಸಿಕೊಂಡು ವಿಲೇಜ್ ಹೌಸಿಂಗ್ ಸ್ಕೀಮನ್ನು ಕಾರ್ಯಗತ ಮಾಡಲು ಸರ್ಕಾರ ಬಯಸುತ್ತದೆ.

ಮಾನ್ಯ ಅಧ್ಯಕ್ಷರೆ, ಕೊನೆಯಲ್ಲಿ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸಬೇಕೆಂದು ಇಚ್ಛೆಪಡುತ್ತೇನೆ. ನಾನಾಗಲೇ ಹೇಳಿದಹಾಗೆ ಈ ಯೋಜನೆ ಇಲ್ಲಿಯ ಸರ್ಕಾರದ ಒಂದು ಸೆಕ್ಶೆಟೆರಿಯೆಟಿನಿಂದಲಾಗಲಿ, ಡಿಲ್ಲಿಯಿಂದಲಾಗಲಿ ಆಗುವ ಯೋಜನೆಯಲ್ಲ. ಅನೇಕ ಮಾನ್ಯ ಸ್ನೇಹಿತರು ಅನೇಕ ವಿಧವಾದ ಟೀಕೆಗಳನ್ನು ಮಾಡಿದ್ದಾರೆ. ಸ್ವಲ್ಪ ಆತ್ಮ ಪರೀಕ್ಷೆ ಮಾಡಿಕೊಂಡಲ್ಲಿ, ನಮ್ಮಲ್ಲಿ ಒಂದೆರ್ಲೊಂದು ಏನೇನು ತಪ್ಪಿದೆ ಎಂದು ಗೊತ್ತಾಗುತ್ತದೆ. ಒಬ್ಬ ಸದಸ್ಯರು ಹೇಳಿದರು: ಅಧಿಕಾರ ಡಿಸೆಂಟ್ರಲೈಸ್ ಆಗಲಿಲ್ಲವೆಂದು. ನಾನು ಖಂಡಿತವಾಗಿ ಹೇಳಬಯಸುತ್ತೇನೆ—ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿರುವಷ್ಟು ಸರ್ಕಾರದ ಬೇರೆ ಯಾವ ಕೆಲಸದಲ್ಲಾಗಲಿ, ಇಲಾಖೆಯಲ್ಲಾಗಲೀ ಆಗಿಲ್ಲ. ಈಗ ಬಹುಮಟ್ಟಿಗೆ ಸ್ಯಾಂಕ್ಷ್ಷನ್ ಕೂಡ ಬಿ.ಡಿ.ಓ. ಮತ್ತು ಅಸಿಸ್ಟೆಂಟ್ ಕಮಿಷನರುಗಳೇ ಮಾಡಬಹುದು; ಅದಕ್ಕೋಸ್ಕರ ಸರ್ಕಾರಕ್ಕೆ ಬರಬೇಕಾದ್ದಿಲ್ಲ, 25 ಸಾವಿರ ರೂಪಾಯಿಗಳವರೆಗೆ ಹಣವನ್ನು ಮಂಜೂರು ಮಾಡುವ ಅಧಿಕಾರವನ್ನು ಡೆಪ್ಯುಟಿ ಕಮಿಷನರುಗಳಿಗೆ ಕೊಟ್ಟಿದೆ. ಒಂದು ಲಕ್ಷ ರೂಪಾಯಿಗಳವರೆಗೆ ಸ್ಯಾಂಕ್ಷ್ಷ ಮಾಡುವ ಅಧಿಕಾರವನ್ನು ಡಿವಿಷನಲ್ ಕಮಿಷನರಿಗೆ ಕೊಡಲಾಗಿದೆ. ಇದರ ಉದ್ದೇಶವಿಷ್ಟು: ಜನರಿಗೆ ರಾಜ್ಯದ ಪ್ರತಿಯೊಂದು ವಿಚಾರದಲ್ಲಿ, ಸ್ವಯಂಪೂರ್ಣವಾದಂಥ ಆಡಳಿತಾಧಿಕಾರವಿರಲಿ ಎಂದು. ಜನರ ಸಹಕಾರವಿಲ್ಲದೆ ಕೆಲಸ ಮಾಡಲಾಗುವುದಿಲ್ಲ. ಈ ಯೂನಿಟ್ ನಮ್ಮೆಲ್ಲರ ಯೂನಿಟ್. ಈ ದೃಷ್ಟಿಯಿಂದ ನೋಡಿದರೆ, ಮಾನ್ಯ ಸದಸ್ಯರೆಲ್ಲರೂ ಈ ಯೋಜನೆಯಲ್ಲಿ ಹೆಚ್ಚು ಆಸಕ್ತಿ ವಹಿಸಬೇಕೆಂದು ತಮ್ಮ ಮೂಲಕ ಬಿನ್ನವಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಎಷ್ಟೋ ಸೆಮಿನಾರುಗಳು ವಿಲೇಜ್ ಮಟ್ಟದಲ್ಲಿ ಬ್ಲಾಕ್ ಮಟ್ಟದಲ್ಲಿ, ಸರ್ಕಲ್ ಮಟ್ಟದಲ್ಲಿ, ಡಿಸ್ಟ್ರಿಕ್ಟ್ ಮತ್ತು ಡಿವಿಜನ್ ಮಟ್ಟಗಳಲ್ಲಿ ಮತ್ತು ರಾಜ್ಯದ ಮಟ್ಟದಲ್ಲಿ ನಡೆಯುತ್ತವೆ. ಅನೇಕ ಸಂದರ್ಭಗಳಲ್ಲಿ ಈ ಸೆಮಿನಾರುಗಳಲ್ಲಿ ಕೂಡ ಮಾನ್ಯ ಸದಸ್ಯರನೇಕರು ಅಸಕ್ತಿಯಿಂದ, ಸಕ್ರಿಯವಾದ ಭಾಗವನ್ನು ವಹಿಸಿಲ್ಲ. ಎಷ್ಟೋ ಸಂದರ್ಭಗಳಲ್ಲಿ ನಮ್ಮಿಂದ ಆಗಬಹುದಾದ ಕೆಲಸವನ್ನು ಮಾಡದೆ, ಬೇರೆಯವರ ಸಹಾಯವನ್ನು ಅಪೇಕ್ಷಿಸುವ ವೀಕ್‌ನೆಸ್ ನಮ್ಮಲ್ಲಿಯೇ ಇರುತ್ತದೆ. ಸದಸ್ಯರು ಅವರ ಸ್ವಂತ ಕ್ಷೇತ್ರಗಳಲ್ಲಿ ಸರಕಾರಕ್ಕೆ ಸಹಕಾರವನ್ನು ಕೊಟ್ಟರೆ, ಈ ಯೋಜನೆಯ ಕೆಲಸ ಸಂಪೂರ್ಣವಾಗಿ ಆಗುತ್ತದೆ ಎನ್ನುವ ಬಗ್ಗೆ ಯಾವ ಸಂದೇಹವೂ ಇಲ್ಲ.

ಮಾನ್ಯ ಸದಸ್ಯರೊಬ್ಬರು ಎವಾಲ್ಯುಏಷ್ಟ್ ಆರ್ಗನೈಸೇಷ್ಟ್ ಇಲ್ಲ, ಈ ಯೋಜನೆ ಪ್ರಗತಿ ಹೊಂದುತ್ತದೆಯೇ ಎನ್ನುವುದನ್ನು ಅನುಭವದಮೇಲೆ ಹೇಳುವರಿಲ್ಲವೆಂದು, ಹೇಳಿದರು. ನಮ್ಮ ರಾಜ್ಯದಲ್ಲಿ ಇನ್ ಫಾರ್ಮರ್ ಕನ್‌ಸರ್ವೇಟೀವ್ ಕಮಿಟಿ ಎಂದು ಮಾಡಿದೆ. ಆ ಸಮಿತಿಯಲ್ಲಿ 20 ಜನ ಸದಸ್ಯರಿದ್ದಾರೆ; ಇದರಲ್ಲಿ ಈ ಸಭೆಯ ಮತ್ತು ಮೇಲ್ಮನೆಯ ಸದಸ್ಯರಿದ್ದಾರೆ. ಅವರು ಆಗಾಗ್ಗೆ ತಮ್ಮ ಸಲಹೆ ಸೂಚನೆಗಳನ್ನು ಕೊಡಬೇಕಾಗಿದೆ. ಕೇಂದ್ರ ಸರ್ಕಾರದವರೂ (ಪ್ಲಾನಿಂಗ್ ಕಮಿಷನರವರು) ಪ್ರೋಗ್ರಾಂ ಎವಾಲ್ಯುಏಷ್ಟ್ ಆರ್ಗನೈಸೇಷ್ಟ್ ಎಂಬ ಒಂದು ಸಂಸ್ಥೆಯನ್ನು ಸೆಟ್-ಅಪ್ ಮಾಡಿದ್ದಾರೆ. ಆ ಸಂಸ್ಥೆಯ ಮುಖಾಂತರ ಈ ಯೋಜನೆಯ ಕೆಲಸಕಾರ್ಯಗಳು ಆಗಾಗ್ಗೆ ರಿವ್ಯೂ ಆಗುತ್ತಿರುತ್ತದೆ. ಈ ಆರ್ಗನೈಸೇಷ್ಟ್ ಸದಸ್ಯರು ಸಂತಾನಕ್ಕೆ ಬಂದು, ಕ್ಷೇತ್ರಗಳಿಗೆ ಭೇಟಿಕೊಟ್ಟು, ಇಲ್ಲಿಯ ಕೆಲಸವನ್ನು ಪ್ರತ್ಯಕ್ಷವಾಗಿ ನೋಡಿಕೊಂಡು, ತಮ್ಮ ಸಲಹೆ ಸೂಚನೆಗಳನ್ನು ಕೊಡುತ್ತಾರೆ. ನಮ್ಮ ರಾಜ್ಯಕ್ಕೆ ಮತ್ತೊಂದು evaluation ಸಮಿತಿಯು ಆಗಬೇಕೆಂದರೆ ಸರ್ಕಾರ ನಿಶ್ಚಯವಾಗಿ ಮಾನ್ಯ ಮಾಡುತ್ತದೆ.

ಪುನಃ ನಮ್ಮ ಸದಸ್ಯರಲ್ಲಿ ಮತ್ತೊಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇನೆಂದರೆ ತಮ್ಮ ತಮ್ಮ ಕ್ಷೇತ್ರದಲ್ಲಿ ತಮ್ಮ ಪ್ರಯತ್ನ ಎಷ್ಟೆಷ್ಟು ಹೆಚ್ಚಾಗಿರುತ್ತದೋ, ಅಷ್ಟಷ್ಟೂ ಆಯಾ ಕ್ಷೇತ್ರದ ಅಭಿವೃದ್ಧಿ ನಿರ್ಭರವಾಗುತ್ತದೆ. ಏಕೆಂದರೆ ಒಂದು ಸಂದರ್ಭದು ಒಂದು ಅನುಭವವನ್ನು ಹೇಳುತ್ತೇನೆ.

7 P.M.

ಆ ರಸ್ತೆ ಒಂದು ಜಮೀನನ್ನು ಹಾದುಕೊಂಡು ಎರಡು ಫರ್ಲಾಂಗ್ ಹೋಗಬೇಕಾಗುತ್ತದೆ. ಆ ಹೊಲ ಬೇರೆ ಬೇರೆಯವರಿಗೆ ಸೇರಿದ್ದು, ಒಬ್ಬ ಮನುಷ್ಯನಿನಾ ಬಾಕಿಯವರು ತಮ್ಮ ತಮ್ಮ ಹೊಲದ ಭಾಗಗಳನ್ನು ಬಿಟ್ಟು ಕೊಡಲು ಸಿದ್ಧವಾಗಿದ್ದರು. ಅವರಲ್ಲಿ ಒಬ್ಬ ಮಹಿಳೆಯೂ ಕೂಡ ಸಿದ್ಧವಾಗಿದ್ದರು. ಆದರೆ ಕೇವಲ ಒಬ್ಬ ಮನುಷ್ಯಮಾತ್ರ ವಿರೋಧವಾಗಿದ್ದರು. ನಾನು ಅಲ್ಲಿಗೆ ಹೋಗಿ ಅರ್ಧಗಂಟೆ ಮುಕ್ಕಾಲು ಗಂಟೆ ಹೇಳಿದ ಮೇಲೆ ಆತ ಒಪ್ಪಿಕೊಂಡು ಬರೆದುಕೊಟ್ಟದ್ದಾರೆ, ಆದರೆ ನಾನು ಇಲ್ಲಿಗೆ ವಾಪಸು ಬರುವುದರಲ್ಲಿ, ಆತನಿಂದ ಒಂದು ಕಾಗದ ಬಂದಿತ್ತು. 'ಒತ್ತಾಯದಿಂದ ನನ್ನ ಒಪ್ಪಿಗೆಯನ್ನು ತಗೆದುಕೊಂಡಿದ್ದಾರೆ, ಜಮೀನನ್ನು ಕೊಡುವುದಕ್ಕಾಗುವುದಿಲ್ಲ' ಎಂದು ಬರೆದಿದ್ದರು. ಆ ಮೇಲೆ ಈ ಬಗ್ಗೆ ಹೆಚ್ಚು ಸಮಾಚಾರ ಗೊತ್ತಾಯಿತು. ಒಬ್ಬರು ಮಾನ್ಯ ಸದಸ್ಯರು ಅವನ ಹಿಂದಿದ್ದಾರೆ, 'ಪರಿಹಾರ ಸಿಕ್ಕುತ್ತದೆ, ಏಕೆ ಒಪ್ಪಿಗೆ ಕೊಟ್ಟೆ' ಎಂದು ಆತನಿಗೆ ಹೇಳಿಕೊಟ್ಟಿದ್ದಾರೆಂದು ತಿಳಿಯಿತು. ಇದನ್ನು ನಾನು ದುಃಖದಿಂದ ಹೇಳುತ್ತಿದ್ದೇನೆ. ಹೀಗಾಗಬಾರದು. ಆದುದರಿಂದ ಮಾನ್ಯ ಸದಸ್ಯರು ಇಂಥ ಪ್ರಶ್ನೆಗಳನ್ನು objective ಆಗಿ ನೋಡಬೇಕು. ಈ ಚರ್ಚೆಯಲ್ಲಿ ಸದಸ್ಯರಿಂದ ಹೊಸ ಸೂಚನೆಗಳು ಎಷ್ಟು ಬಂದಿವೆ ಎಂದು ಹುಡುಕಿ ನೋಡಿದೆ, ಅದರೆ ಬಹಳ ನಿರಾಶೆಯಾಯಿತು. ಹೊಸದಾಗಿ ನಿರ್ಮಾಣವಾಗಿರುವಂಥ ಯೋಜನೆ ಇದು. ಇದರಲ್ಲಿ ಹೊಸ ಹೊಸ ವಿಚಾರಗಳನ್ನು ಹೇಳಬಹುದು, ಹೊಸ ಸೂಚನೆಗಳನ್ನು ಕೊಡಬಹುದು. ಇನ್ನೂ ಹೆಚ್ಚು ಆಸಕ್ತಿ ವಹಿಸಬಹುದು. ಇಷ್ಟು ಹೇಳಿ ಈ ಹೊತ್ತು ನಮಗೆ ಸೂಚನೆಗಳನ್ನೂ ಸಲಹೆಗಳನ್ನೂ ಕೊಟ್ಟ ಎಲ್ಲ ಸದಸ್ಯರಿಗೂ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಉಪಮಂತ್ರಿಗಳ ಭಾಷಣದಲ್ಲಿ, ಷೆಡ್ಯೂಲ್ಡ್ ಕ್ಯಾಸ್ಟ್ ಮಹಿಳೆಯರಿಗೆ ಒಂದೊಂದು ಸ್ನಾನವನ್ನು ಕೊಟ್ಟಿರುವುದಾಗಿ ಹೇಳಿದರು, ಇದು ಯಾವ ಆಧಾರದ ಮೇಲೆ? ಇವರಲ್ಲಿ ಬುದ್ಧಿವಂತರಿಲ್ಲ ಅಥವ ಕೆಲಸಮಾಡಿಲ್ಲವೆ? ಏಕೆ ಒಂದೇ ಒಂದು ಸ್ನಾನ ಎಂದು ಗೊತ್ತು ಮಾಡಿದರು ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಂದೇ ಎಂದಲ್ಲ, ಎಷ್ಟು ಜನರು ಬೇಕಾದರೂ ಇರಬಹುದು. ಕನಿಷ್ಠ ಪಕ್ಷ ಒಬ್ಬರಾದರೂ ಇರಬೇಕೆಂದು ಸರ್ಕಾರದವರು ಹೀಗೆ ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ಜನ ಸಂಖ್ಯೆಯ ಮೇಲೆ ಕೊಡುತ್ತಾರೋ, ಅಥವ ದಾನಧರ್ಮ ಎನ್ನುವ ಹಾಗೆ ಕೊಡುತ್ತಾರೋ, ಯಾವ ಆಧಾರದ ಮೇಲೆ ಕೊಡುತ್ತಾರೆ? ಹೋದರೆ ಹೋಗಲಿ ಒಂದನ್ನಾದರೂ ಕೊಡೋಣವೆಂದು ಮಾಡಿದ್ದಾರೆಯೇ? ಹೆಂಗಸರ ಸಂಖ್ಯೆ ಶೇಕಡ 50ಕ್ಕೆ ಮೀರಿದೆ. ಒಟ್ಟು ಜನ ಸಂಖ್ಯೆಯಲ್ಲಿ ಶೇಕಡ 18—20 ಇದ್ದಾರೆ ಷೆಡ್ಯೂಲ್ಡ್ ಜಂಗಡದವರು. ಹೀಗಿರುವಾಗ ಒಂದು ಕೊಡುತ್ತೇವೆಂದು ಹೇಳುತ್ತಾರೆ. ಇದೇನು ದಾನ ಧರ್ಮವೆ? ಇವರಲ್ಲಿ ದಕ್ಷರಿಲ್ಲವೆ, ಇವರು ಸಮಿತಿಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆ?

ಶ್ರೀ ವೈ. ವೀರಪ್ಪ.—ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ನ್ಯಾಷನಲ್ ಎಕ್ಸ್‌ಟೆಷನ್ ಯೋಜನೆಗಳನ್ನು ಕಾರ್ಯಗತ ಮಾಡಿದರೆ ಈ ಐದು ವರ್ಷಗಳ ಅವಧಿಯಲ್ಲಿ ಕುಟುಂಬ ವರಮಾನ ಸುಮಾರು 50ರಷ್ಟು ಜಾಸ್ತಿಯಾಗುತ್ತದೆಂದು ಹೇಳಿದರು; ಯಾವುದಾದರೂ ರೀತಿ ಪರೀಕ್ಷೆ ಮಾಡಿದ್ದಾರೆಯೇ? ಹಿಂದೆ ಒಂದು ಕುಟುಂಬದ ವರಮಾನವೆಷ್ಟಿತ್ತು, ಇದನ್ನು ಕಾರ್ಯಗತ ಮಾಡಿದನಂತರ ಶೇಕಡ 50ರಷ್ಟು ಹೆಚ್ಚಾಗಿದೆ ಎಂಬುದಕ್ಕೆ ಸರ್ವೆ ಮಾಡಿ ತಿಳಿದುಕೊಂಡಿದ್ದಾರೆಯೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ಗ್ರಾಮ ಕೆಲಸ ಗಾರರು ಪ್ರತಿವರ್ಷವೂ ಸರ್ವೆಮಾಡಬೇಕೆಂದು ಹೇಳಿದ್ದೇವೆ. ಆ ಅಂಕಿಅಂಶಗಳನ್ನು ತುಲನ ಮಾಡಿದರೆ ಗೊತ್ತಾಗುತ್ತದೆ.

[Sri L. B. BIRJE made a remark in Marathi.

Sri RAMAKRISHNA HEGDE replied in Marathi.]

ಈ ಸಭೆಯ ಸದಸ್ಯರಿಗೆ ಅವಕಾಶವಿದೆ. ಅವರ ಈ ವಿಷಾಂಟಿಂಗುಗಳಲ್ಲಿ ಸಲಹೆ ಕೊಡಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈಗ ತಾನೆ ಉತ್ತರ ಕೊಡುತ್ತಾ ಯಾರು ಯಾರಿಗೆ ಆಕಾಂಕ್ಷೆಯಿದೆ, ಕೆಲಸ ಮಾಡುವುದಕ್ಕೆ ಆಸೆಯಿದೆ ಅವರನ್ನು ತೆಗೆದು ಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ, ತೆಗೆದುಕೊಂಡಿರುವ ಅಮಲ್ದಾರರ ಪೈಕಿ ಎಷ್ಟೋ ಜನ ಪ್ರೊಬೆಸ್ಟ್ ಮಾಡಿದ್ದಾರೆ. ಆದರೂ ಅವರನ್ನು ತೆಗೆದುಕೊಂಡಿದ್ದಾರೆ. ಅಂಥ ಉದಾಹರಣೆಗಳಿವೆ. ಹಾಗೆ ಮಾಡಿರುವುದರಿಂದ ಈಗ ಆತಂಕ ಬರಲು ಕಾರಣವಾಗಿದೆಯಲ್ಲವೆ?

ಶ್ರೀ ಎಂ. ಹನುಮಂತಯ್ಯ.—ಅದೇ ಪ್ರಕಾರ ಹಿಂದುಳಿದ ಪಂಗಡಗಳ ಮಾಗಡಿ ಅಮಲ್ದಾರರ ಮತ್ತು ಇನ್ನೂ ಕೆಲವರನ್ನು ಈ ಕೆಲಸಕ್ಕೆ ಬರಾತ್ಕಾರ ಮಾಡಿ ತೆಗೆದುಕೊಂಡಿಲ್ಲವೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಬಲತ್ಕಾರದ ಪ್ರಶ್ನೆಯೇ ಇಲ್ಲ. ರೆವೆನ್ಯೂ ಇಲಾಖೆಯನ್ನು ಕೆಲವು ಕ್ಯಾಂಡಿಡೇಟ್ಸ್‌ನ್ನು ಬಿ. ಡಿ. ಓ. ಆಗಿ ಕೆಲಸಮಾಡಲು ಕೊಡಬೇಕೆಂದು ಕೇಳಿದೆವು. ಅದರಂತೆ ಆ ಇಲಾಖೆ ಕೊಟ್ಟಿತು. ಕೆಲವರು ಪ್ರೊಬೆಸ್ಟ್ ಮಾಡಿ ಬಾರದಿರುವ ಸಂದರ್ಭಗಳೂ ಇವೆ. ಶ್ರೀ ಹನುಮಂತಯ್ಯನವರು ಹರಿಜನರನ್ನು ಬಲತ್ಕಾರ ಮಾಡಿ ಕಳುಹಿಸಿದರಿ ಎಂದು ಹೇಳಿದರು. ಅಂಥಾದ್ದು ಗಮನಕ್ಕೆ ಬಂದಿಲ್ಲ. ಒಂದು ಕಡೆ ರೆವೆನ್ಯೂ ಇಲಾಖೆ ಕಳುಹಿಸಿದ ಅಧಿಕಾರಿಗಳ ಕೆಲಸಕ್ಕೆ ಜಾಯಿನ್ ಆಗಿಲ್ಲವೆಂದು ನೆನಪಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೆಲವರು ತಮಗೆ ಹೊರಗೆ ಹೋಗುವುದಕ್ಕೆ ಇಷ್ಟವಿಲ್ಲ, ರೆವೆನ್ಯೂ ಇಲಾಖೆಯಲ್ಲೇ ಇರುತ್ತೇವೆ ಎಂದು ಡೆವಲಪ್‌ಮೆಂಟ್ ಕಮಿಷನರಿಗೂ ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ತೊಂದರೆಯಾಗಿರುವುದನ್ನು ಗಮನಕ್ಕೆ ತಂದರೆ ವಿಚಾರಮಾಡುತ್ತೇವೆ.

ಶ್ರೀ ಎ. ಆರ್. ಪಂಚಗಾವಿ (ಗೋಕಾಕ್ II).—ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ 1958-59ಕ್ಕೆ 46 ಎ. ಇ. ಎಸ್. ಬ್ಲಾಕ್ಸ್, 13 ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ಕೊಡಲಾಗಿದೆ. ಮೈಸೂರು ವಾಣಿಯಲ್ಲಿ ಸರ್ಕಾರ ಪ್ರಸಿದ್ಧ ಪಡಿಸಿರುವ ಪ್ರಕಾರ 10 ಎ. ಇ. ಎಸ್. ಬ್ಲಾಕ್‌ಗಳು 1958ರಲ್ಲಿ ತೆರೆಯಲಾಗುವುದು ಎಂದಿದೆ. ಇದರಲ್ಲಿ ಯಾವುದು ನರಿ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಷೆಡ್ಯೂಲ್ ಕಾರ್ಯಕ್ರಮದ ಪ್ರಕಾರ ಈ ವರ್ಷ ಅಷ್ಟು ಮೈಸೂರಿಗೆ ದೊರೆಯಬೇಕಾಗಿತ್ತು. ಆದರೆ ಬಲವಂತರಾವ್ ಮೆಹ್ತ ಕಮಿಟಿ ಶಿಪಾರ್ಸಿನ ಮೇಲೆ ಕೇಂದ್ರ ಸರ್ಕಾರದ ಹೊಸ ಧೋರಣೆ ಮೇರೆಗೆ ಪರಿವರ್ತನೆ ಮಾಡಿದೆ. ಹಾಗೆ ಮಾಡುವಾಗ ಗೊತ್ತಿಲ್ಲದೆ ಸೇರಿಸಲಾಗಿದೆ.

Sri A. R. PANCHAGAVI.—What is the exact number?

Sri RAMAKRISHNA HEGDE.—Ten blocks.

ಶ್ರೀ ಬಿ. ರಾಚಯ್ಯ.—ಬಿ.ಡಿ.ಓ. ಮತ್ತು ತಹಶೀಲು ದಾರರನ್ನು ನೇಮಿಸುವಾಗ ವಯಸ್ಸಿನ ಮಿತಿ ಒಂದೇ ಇದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ನೋಡಿ ಹೇಳಬೇಕು.

ಶ್ರೀ ಬಿ. ರಾಚಯ್ಯ.—ತಮ್ಮ ವಯಸ್ಸಿನ ಮಟ್ಟದಲ್ಲೇ ಇರುವವರನ್ನು ಬಿ.ಡಿ.ಓ.ಗಳಾಗಿ ತೆಗೆದುಕೊಳ್ಳುತ್ತಿದ್ದಾರೆಂದು ಹೇಳುವುದು ನಿಜವೇ?

(ಉತ್ತರವಿಲ್ಲ.)

Sri F. X. DENIS PINTO.—In certain taluks like Udipi there are neither C.D. blocks nor N.E.S. blocks. What steps Government will take inallotting blocks to these taluks?

Sri RAMAKRISHNA HEGDE.—There are so many other taluks also and they will be allotted in due course of time.

Sri A. R. PANCHAGAVI.—In the Budget, the number of Community Development Blocks is not given. How can we know that henceforth new blocks will be taken up?

Sri RAMAKRISHNA HEGDE.—The selection of C.D. blocks is in the hands of the Government of India and it is done on the basis of the progress made by N.E.S. blocks. Therefore, we cannot foresee.

ಶ್ರೀ ಟಿ. ಆರ್. ಪರಮೇಶ್ವರಯ್ಯ (ತರೀಕೆರೆ).—ಎಕ್. ಇ. ಎಸ್. ಸ್ಕೀಂ ಇರುವ ಕಡೆಗಳಲ್ಲಿ ಕೇ ವಿಲೇಜ್ ಸ್ಕೀಮುಗಳನ್ನು ಎಕ್ಸ್‌ಟೆಂಡ್ ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು. ನಮಗೆ ಅದು ಕೇಂದ್ರ ಸರ್ಕಾರದಿಂದ ಕಡಮೆ ಸಂಖ್ಯೆಯಲ್ಲಿ ಸಿಕ್ಕುತ್ತದೆ. ಈ ವರ್ಷ ಎರಡು ಕೇ ವಿಲೇಜ್ ಸೆಂಟರುಗಳು ಬಂದಿವೆ ಎಂದು ನೆನಪಿದೆ.

ಶ್ರೀ ವೈ. ವೀರಪ್ಪ.—ಸಿ.ಡಿ. ಬ್ಲಾಕಿಗೆ ಎರಡು ಜೀಪುಗಳನ್ನು ಕೊಡುವುದಿಲ್ಲ. ಒಂದು ಮಾತ್ರ ಕೊಡುತ್ತಾರೆ. ಅದಕ್ಕೆ ಕಾರಣವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಣದ ಅಭಾವವೇ ಕಾರಣ.

Mr. DEPUTY SPEAKER.—The question is:

"That a sum not exceeding Rs. 2,08,97,000 be granted to the Government to defray the charges which will come in course of payment during the year ending 31st day of March 1959 in respect of 'Community Development Projects, National Extension Service and Local Development Works'."

The motion was adopted.

Mr. DEPUTY SPEAKER.—The House will now rise and meet tomorrow at 12 NOON.

The House adjourned at Twelve Minutes past Seven of the Clock to meet again at Twelve noon on Wednesday, the 23rd April 1958.

WD 1040—GPB—900—14-10-58